ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮೇ 1 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 16 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶುಭಾಶಯಗಳು



ನಾಡಿನ ಸಮಸ್ತ ಕಾರ್ಮಿಕ ಬಂಧುಗಳಿಗೆ ಕಾರ್ಮಿಕರ ದಿನಾಚರಣೆ ಶುಭಾಶಯಗಳು

ಬಿಡುವು

ಕಾರ್ಮಿಕರ ದಿನಾಚರಣೆ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 2–5–2026ರ ಶನಿವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.


–ವ್ಯವಸ್ಥಾಪಕರು

ಮುಖ್ಯಮಂತ್ರಿ ಬದಲಾವಣೆಗೆ ಇನ್ನು ಸಮಯವಿದೆ

■ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯೆ
■ ತಾವು ಮುಖ್ಯಮಂತ್ರಿ ಆಗಲು ಹಣೇಬರಹ ಬೇಕು!

ಬೆಂಗಳೂರು, ಏ.30(ಕೆಎಂಶಿ)– ರಾಜ್ಯದಲ್ಲಿನ ನಾಯಕತ್ವ ಬದಲಾವಣೆಗೆ ಇನ್ನು ಸಮಯವಿದೆ ಎಂದು ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

ಇಂದಿಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸದ್ಯಕ್ಕೆ ಸಿಎಂ ಬದಲಾವಣೆ ಇಲ್ಲ ಎಂದು ಹೇಳಿ ಗೊಂದಲ ಮೂಡಿಸಿದರಾದರೂ, ಮತ್ತೆ ನಾಯಕತ್ವ ಬದಲಾವಣೆ ಸಮಯ ಬಂದರೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಜೊತೆ ಚರ್ಚೆ ಮಾಡಿ ತೀರ್ಮಾನಿಸುತ್ತೇವೆ ಎಂದರು.



ನಾವು ಯಾವುದೇ ನಿರ್ಣಯಗಳನ್ನು ಕೈಗೊಳ್ಳುವ ಮುನ್ನ ಕೂಲಂಕುಷವಾಗಿ ಚರ್ಚಿಸುತ್ತೇವೆ. ಹೆಚ್ಚಾಗಿ ಸೋನಿಯಾ ಗಾಂಧಿಯವರು ಅಂತಿಮವಾಗಿ ನಿರ್ಧರಿಸುತ್ತಾರೆ. ಸದ್ಯಕ್ಕೆ ರಾಜ್ಯದಲ್ಲಿ ಮುಖ್ಯಮಂತ್ರಿ ಇದ್ದಾರೆ. ಹಾಗಾಗಿ ಈ ಕುರಿತು ಚರ್ಚೆಗೆ ಹೆಚ್ಚಿನ ಅವಕಾಶವಿಲ್ಲ. ಇನ್ನು ಸಿಎಂ ಬದಲಾವಣೆಗೆ ಇನ್ನೂ ಸಮಯವಿದೆ. ಆ ಸಮಯ ಬಂದ ಮೇಲೆ ನೋಡೋಣ ಎಂದು ಅಭಿಪ್ರಾಯಪಟ್ಟರು.

ಹಣೇಬರಹ ಬೇಕಲ್ಲ: ತಾವೇ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳಬೇಕೆಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಸೇರಿದಂತೆ ದಲಿತ ಸಮುದಾಯದ ಸಚಿವರು ನಿಮ್ಮಲ್ಲಿ ಮನವಿ ಮಾಡುತ್ತಿದ್ದಾರಲ್ಲಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಖರ್ಗೆ ಅವರು, ನಾನು ಮುಖ್ಯಮಂತ್ರಿ ಆದರೆ ಉತ್ತಮ ಎಂದು ಅವರು ಹೇಳುತ್ತಾರೆ, ನೀವೂ ಹೇಳುತ್ತೀರಿ, ಮೇಲಿನವರೂ ಹೇಳುತ್ತಾರೆ. ಆದರೆ ಅದಕ್ಕೆ ಹಣೇಬರಹ ಬೇಕಲ್ಲಾ ಎಂದರು.

ಮರು ಕ್ಷಣವೇ, ನಮ್ಮಲ್ಲಿ ಎಲ್ಲವೂ ಪಕ್ಷದ ಸಿದ್ಧಾಂತದಂತೆ ನಡೆಯುತ್ತದೆ. ಪಕ್ಷಕ್ಕಾಗಿ ದುಡಿದವರಿಗೆ ಯಾವ ಸ್ಥಾನಮಾನ ನೀಡಬೇಕೆಂಬುದನ್ನು ಸೋನಿಯಾ ಗಾಂಧಿಯವರು ಮಾತ್ರ ನಿರ್ಧರಿಸಲು ಸಾಧ್ಯ ಎಂದರು.

ಖರ್ಗೆ ಸಿಎಂ ಆಗಬೇಕು: ಈ ಮಧ್ಯೆ ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಹಿರಿಯ ನಾಯಕ ಖರ್ಗೆ ಮುಖ್ಯಮಂತ್ರಿ ಆಗಬೇಕು ಎಂದು ಪುನರುಚ್ಚರಿಸಿದರು.

ಪಕ್ಷಕ್ಕಾಗಿ 50 ವರ್ಷಗಳ ಕಾಲ ದುಡಿದಿದ್ದಾರೆ. ಅವರ ಸಮಕಾಲೀನರಾದ ಎಸ್.ಬಂಗಾರಪ್ಪ, ಗುಂಡೂರಾವ್, ಧರ್ಮಸಿಂಗ್, ವೀರಪ್ಪ ಮೊಯಿಲಿ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ್ದಾರೆ.

ಪಕ್ಷಕ್ಕೆ ಸುದೀರ್ಘ ಸೇವೆ ಸಲ್ಲಿಸಿರುವ ಖರ್ಗೆ ಅವರಿಗೆ ಈ ಅವಕಾಶ ದೊರೆತಿಲ್ಲ. ಅವರಿಗೂ ಮುಖ್ಯಮಂತ್ರಿ ಸ್ಥಾನ ದೊರೆಯಲಿ ಎಂಬ ಉದ್ದೇಶದಿಂದ ನಾವು ವರಿಷ್ಠರಲ್ಲಿ ಮನವಿ ಮಾಡಿದ್ದೇವೆ.

ನಾಯಕತ್ವ ವಿಚಾರ ಬಂದಾಗ ನಮ್ಮ ಅನಿಸಿಕೆಗಳನ್ನು ಹೇಳಬಹುದೇ ಹೊರತು ಅದು ನಮ್ಮ ನಿರ್ಧಾರವಾಗುವುದಿಲ್ಲ. ಪಕ್ಷದ ತೀರ್ಮಾನವೇ ಅಂತಿಮವಾಗಿರುತ್ತದೆ. ಅದಕ್ಕೆ ನಾವು ತಲೆಬಾಗಬೇಕಾಗುತ್ತದೆ ಎಂದರು.

ತಮಿಳ್ನಾಡು, ಕೇರಳದಲ್ಲಿ ಗೆಲ್ತೇವೆ

ಪಂಚ ರಾಜ್ಯಗಳ ಫಲಿತಾಂಶ ಕುರಿತಾಗಿ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಕೆಲವೊಂದು ಕಡೆ ಗೊಂದಲವಿದೆ. ಆದರೆ ತಮಿಳುನಾಡು, ಕೇರಳದಲ್ಲಿ ನಮ್ಮ ಮೈತ್ರಿಕೂಟ ಗೆಲ್ಲುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಅಸ್ಸಾಂನಲ್ಲಿ ನಮಗೆ ಕಡಿಮೆ ಸೀಟ್ ಬರುತ್ತದೆ ಎಂದು ಎಕ್ಸಿಟ್ ಪೋಲ್ ಹೇಳುತ್ತಿವೆ. ಆದರೆ ಅದಕ್ಕಿಂತ ಹೆಚ್ಚಿನ ಸ್ಥಾನಗಳು ಬರುವ ವಿಶ್ವಾಸವಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ಮುನ್ನಡೆ ಸಾಧಿಸುವ ಮಾಹಿತಿ ಇದೆ. ಆದರೆ ಎನ್‌ಡಿಎ ಅವರು ದಬ್ಬಾಳಿಕೆ ಮಾಡಿ, ಟಿಎಂಸಿಗೆ ಟಕ್ಕರ್ ಕೊಡುವ ಕೆಲಸ ಮಾಡಿದ್ದಾರೆ ಎಂದು ಆರೋಪಿಸಿದರು.

ಪಶ್ಚಿಮ ಬಂಗಾಳದಲ್ಲಿ ನಾವು ಏಕಾಂಗಿಯಾಗಿ ಇದೇ ಮೊದಲ ಬಾರಿಗೆ ಸ್ಪರ್ಧಿಸಿದ್ದೆವು. ಈಗ ಬಿಜೆಪಿ ಗೆಲ್ಲುತ್ತದೆ ಎಂದು ಕೆಲವರು, ಟಿಎಂಸಿ ಗೆಲ್ಲುತ್ತದೆ ಎಂದು ಮತ್ತೆ ಕೆಲವರು ಹೇಳುತ್ತಿದ್ದಾರೆ. ಇನ್ನೆರಡು ದಿನ ಕಾಯೋಣ. ಅಷ್ಟರಲ್ಲಿ ಫಲಿತಾಂಶದ ಸ್ಪಷ್ಟ ಚಿತ್ರಣ ಸಿಗಲಿದೆ. ಪೂರ್ಣ ಫಲಿತಾಂಶ ಪ್ರಕಟವಾದ ನಂತರ ಟಿಎಂಸಿಗೆ ಬೆಂಬಲ ನೀಡುವ ಬಗ್ಗೆ ಮುಂದೆ ನೋಡೋಣ ಎಂದು ತಿಳಿಸಿದರು.

ಕರ್ನಾಟಕದಲ್ಲಿ ಹೊರ ರಾಜ್ಯದ ವಾಹನಗಳಿಗೆ ತೆರಿಗೆ



ಬೆಂಗಳೂರು, ಏ.30– ರಾಜ್ಯದಲ್ಲಿ ಹೊರರಾಜ್ಯದ ವಾಹನಗಳ ಸಂಚಾರ ಹೆಚ್ಚಾಗಿದ್ದು, ಇದರಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಹೆಚ್ಚಾಗಿ ದೆಹಲಿಯಿಂದ ಬಂದ ವಾಹನಗಳು ಬೆಂಗಳೂರು ಸೇರಿದಂತೆ ರಾಜ್ಯದ ಅನೇಕ ಕಡೆ ಸಂಚರಿಸುತ್ತಿವೆ. ಇದರಿಂದ ರಾಜ್ಯದಲ್ಲಿ ಗಾಳಿಯ ಮಟ್ಟ, ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಇದನ್ನು ತಡೆಯಲು ರಾಜ್ಯ ಸರ್ಕಾರ ಹೊಸ ಯೋಜನೆ ರೂಪಿಸಿದೆ ರಾಜ್ಯದಲ್ಲಿ ಸಂಚ ರಿಸುತ್ತಿರುವ ಹೊರ ರಾಜ್ಯ ನೋಂದಣಿಯ ವಾಹನಗಳಿಂದ ತೆರಿಗೆ ಸಂಗ್ರಹಿಸಲು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ವಿಧಿಸುವಿಕೆ (ತಿದ್ದುಪಡಿ) ಸುಗ್ರೀವಾಜ್ಞೆಯನ್ನು ಜಾರಿಗೆ ತಂದಿದೆ. ■ 6ನೇ ಪುಟಕ್ಕೆ

ಪರಿಷ್ಕೃತ ರೋಸ್ಟರ್

ಸಂಪುಟ ಅಸ್ತು: ಕಾರ್ಮಿಕರ ಮಕ್ಕಳಿಗೆ ಕಲಿಕೆ ಕಿಟ್

ಬೆಂಗಳೂರು, ಏ. 30– ಇತ್ತೀಚೆಗೆ ರಾಜ್ಯ ಸರ್ಕಾರ ನೇಮಕಾತಿಗಳಲ್ಲಿ ಒಳಮೀಸಲಾತಿ ಜಾರಿಗೊಳಿಸಿ ಆದೇಶ ಹೊರಡಿಸಿತ್ತು. ಆದರೆ ಏ. 27 ರಂದು ಮಾಡಲಾಗಿದ್ದ ಆದೇಶವನ್ನು ಹಿಂಪಡೆಯಲು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಪರಿಷ್ಕೃತ ಮಾದರಿಯಲ್ಲಿ ರೋಸ್ಟರ್ ಜಾರಿ ಮಾಡಲು ನಿರ್ಧರಿಸಲಾಗಿದ್ದು, ಸಮಾಜಕಲ್ಯಾಣ ಇಲಾಖೆ ಪರಿಷ್ಕೃತ ಆದೇಶವನ್ನು ಹೊರಡಿಸಲಿದೆ.



6 ಎಂಆರ್‌ಐ ಯಂತ್ರ ಖರೀದಿ : ಸಚಿವ ಸಂಪುಟ ಸಭೆ ಬಳಿಕ ಮಾಧ್ಯಮ ದವರೊಂದಿಗೆ ಮಾತನಾಡಿದ ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಆರೋಗ್ಯ ವಲಯದಲ್ಲಿ ಸಾರ್ವಜನಿಕರಿಗೆ ಅನು ಕೂಲ ಕಲ್ಪಿಸುವ ನಿಟ್ಟಿನಲ್ಲಿ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ರಾಷ್ಟ್ರೀಯ ಉಚಿತ ರೋಗ ಪತ್ತೆ ಯೋಜನೆಯಡಿ 6 ಎಂಆರ್‌ಐ ಯಂತ್ರಗಳನ್ನು ಖರೀದಿಸಲು ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಹೈಸ್ಪೀಡ್ ರೈಲು: ಸಾರಿಗೆ ಸಂಪರ್ಕವನ್ನು ಬಲಪಡಿಸುವ ದೃಷ್ಟಿಯಿಂದ ಹೈದರಾಬಾದ್–ಬೆಂಗಳೂರು ಹೈಸ್ಪೀಡ್ ರೈಲು ಯೋಜನೆಯ ಕುರಿತು ಚರ್ಚೆ ನಡೆಸಲಾಗಿದ್ದು, ಈ ಯೋಜನೆಯಡಿ ಕರ್ನಾಟಕದಲ್ಲಿ ಒಟ್ಟು 15 ರೈಲು ನಿಲ್ದಾಣಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರೊಂದಿಗೆ, ಬೀದರ್–ಬೆಂಗಳೂರು ಹಾಗೂ ಕಲಬುರಗಿ–ಬೆಂಗಳೂರು ನಡುವಿನ ವಿಮಾನಯಾನ ಸೇವೆಗಳ ನಿರ್ವಹಣೆಗೆ ಉತ್ತೇಜನ ನೀಡುವ ಸಲುವಾಗಿ, ವಾರ್ಷಿಕ 28.7 ಕೋಟಿ ರೂ. ಪ್ರೋತ್ಸಾಹಧನ ನೀಡಲು ಸಚಿವ ಸಂಪುಟ ಒಪ್ಪಿಗೆ ಸೂಚಿಸಿದೆ ಎಂದರು.

ಅಲ್ಲದೆ, ಸಾಮಾಜಿಕ ಅಭಿವೃದ್ಧಿ ಹಾಗೂ ಆಡಳಿತಾತ್ಮಕ ಕಾಮಗಾರಿಗಳಿಗೂ ಹೆಚ್ಚಿನ ಒತ್ತು ನೀಡಲಾಗಿದ್ದು, ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಮುಂದಿನ ಎರಡು ವರ್ಷಗಳಿಗೆ 600 ಕೋಟಿ ರೂ ವೆಚ್ಚದ ಯೋಜನೆಗೆ ಸಂಪುಟ ■ 6ನೇ ಪುಟಕ್ಕೆ

ಬೆಂಗಳೂರಿಗೆ ಪರ್ಯಾಯವಾಗಿ ನವನಗರ ನಿರ್ಮಾಣ ನಿರ್ಧಾರ

ಬೆಂಗಳೂರು, ಏ.30(ಕೆಎಂಶಿ)– ನವದೆಹಲಿ ಮಾದರಿಯಲ್ಲಿ ಹಾಲಿ ಬೆಂಗಳೂರು ನಗರಕ್ಕೆ ಪರ್ಯಾಯವಾಗಿ ನವ ನಗರ ನಿರ್ಮಾಣಕ್ಕೆ ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಅನುಮೋದನೆ ನೀಡಿದೆ.

ಒಟ್ಟು 18,133 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆ ರಾಮನಗರ ತಾಲೂಕಿನ 9 ಗ್ರಾಮಗಳ ವ್ಯಾಪ್ತಿಯಲ್ಲಿ ಈ ನವನಗರ ನಿರ್ಮಾಣವಾಗಲಿದೆ. ಯೋಜನೆಗೆ 7,481 ಎಕರೆ ಪ್ರದೇಶ ಗುರುತಿಸಿ, ಸ್ವಾಧೀನಪಡಿಸಿಕೊಳ್ಳಲಿದ್ದು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈ ಯೋಜನೆ ಅನುಷ್ಠಾನಗೊಳಿಸಲಿದೆ. ನವನಗರ ನಿರ್ಮಾಣ ಉದ್ದೇಶದಿಂದಲೇ ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯೆಂದು ಇತ್ತೀಚೆಗೆ ಮರುನಾಮಕರಣ ಮಾಡಲಾಗಿತ್ತು.

ಬೆಂಗಳೂರು ನಗರ ದಿನದಿಂದ ದಿನಕ್ಕೆ ಬೆಳೆಯುತ್ತಿರುವುದನ್ನು ಗಮನದಲ್ಲಿಟ್ಟುಕೊಂಡು ವಿಶ್ವ ದರ್ಜೆಯ ಕೆಲವು ನಗರಗಳಿಗೆ ಸಮಾನವಾಗಿ ನಗರ ನಿರ್ಮಾಣ ಮಾಡಲು ಸರ್ಕಾರ ಮುಂದಾಗಿದೆ. ಯೋಜನೆಗೆ ಭಾರೀ ವಿರೋಧ ಕಂಡುಬಂದರೂ ರೈತರಿಂದ ಭೂಸ್ವಾಧೀನ ಕಾರ್ಯ ನಡೆದಿರುವುದಲ್ಲದೆ, ■ 6ನೇ ಪುಟಕ್ಕೆ

ಚಿನ್ನಾಭರಣ ಗಿರಿವಿಯಲ್ಲಿ ವಂಚನೆ ಆರೋಪ; ಡಿಜಿಎಫ್ ಮಾಲೀಕ ಚಿನ್ನತಂಬಿ ಬಂಧನ

ಮೈಸೂರು,ಏ.30(ಪಿಎಂ)– ಕಡಿಮೆ ಬಡ್ಡಿಗೆ ಹೆಚ್ಚು ಮೊತ್ತದ ಸಾಲ ನೀಡುವುದಾಗಿ ಚಿನ್ನಾಭರಣ ಗಿರಿವಿ ಇಟ್ಟು ಕೊಂಡು ವಾಪಸ್ಸು ನೀಡದೆ ಲಕ್ಷಾಂತರ ರೂ. ವಂಚಿಸಿರುವ ಆರೋಪದಡಿ ಧನ ಗಣಪತಿ ಗೋಲ್ಡ್ ಅಂಡ್ ಡೈಮಂಡ್ ಸಂಸ್ಥೆ (ಡಿಜಿಎಫ್) ಮಾಲೀಕ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಯನ್ನು ಬುಧವಾರ ರಾತ್ರಿ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.



ಸೌಂದರ್‌ರಾಜ್ ಅಲಿಯಾಸ್ ಚಿನ್ನತಂಬಿ


ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಗೆ ದಾವಣಗೆರೆಯ ಹೆಚ್.ಮಹಾಂತೇಶ್ ಎಂಬುವವರು ನೀಡಿದ ದೂರಿನನ್ವಯ ಬುಧವಾರ ಎಫ್‌ಐಆರ್ ದಾಖಲಾಗಿತ್ತು. ಈ ಸಂಬಂಧ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ಕೋರ್ಟ್‌ಗೆ ಹಾಜರುಪಡಿಸಿ ಕಸ್ಟಡಿಗೆ ತೆಗೆದುಕೊಂಡಿದ್ದಾರೆ.

ಸೌಂದರ್ ರಾಜ್ ಮತ್ತು ಇತರರು ನಂಬಿಸಿ ಚಿನ್ನದ ಒಡವೆಗಳನ್ನು ಪಡೆದು ಮೋಸ ಮಾಡಿದ್ದಾರೆ ಎಂದು ಹೆಚ್.ಮಹಾಂತೇಶ್ ದೂರಿನಲ್ಲಿ ಆರೋಪಿಸಿದ್ದರು. ನಾನು ಮತ್ತು ನನ್ನ ಸ್ನೇಹಿತರಾದ ಸುಷ್ಮಾ, ಮಾಲಾ, ಬ್ರಹ್ಮಾರೆಡ್ಡಿ, ರೇಖಾ ಅವರು ದಾವಣಗೆರೆಯ ಪಿಬಿ ರಸ್ತೆಯ ಶಾಖೆಯಾದ ಕರ್ನಾಟಕ ಬ್ಯಾಂಕಿನಲ್ಲಿ ಒಟ್ಟು ಸುಮಾರು 1 ಕೆಜಿ ತೂಕದ ಚಿನ್ನಾಭರಣ ಹಾಗೂ 100 ಗ್ರಾಂ ಚಿನ್ನದ ಗಟ್ಟಿಯನ್ನು 62 ಲಕ್ಷ ರೂ.ಗಳಿಗೆ 2024ರ ಏ.15ರಂದು ಗಿರಿವಿ ಇಟ್ಟಿದ್ದೆವು. ಧನಗಣಪತಿ ಗೋಲ್ಡ್ ಅಂಡ್ ಡೈಮಂಡ್, ಶ್ರೀರಾಂಪುರ, ಮೈಸೂರು ಸಂಸ್ಥೆಯವರು 'ಗಿರವಿ ಇಟ್ಟಿರುವ ಚಿನ್ನಾಭರಣಗಳನ್ನು ಬಿಡಿಸಿ ಕೊಂಡು ನಮ್ಮಲ್ಲಿ ಗಿರಿವಿ ಇಟ್ಟರೆ ಅಥವಾ ಮಾರಾಟ ಮಾಡಿದರೆ ಕಡಿಮೆ ಬಡ್ಡಿಗೆ ಹೆಚ್ಚಿನ ಹಣ ನೀಡುವುದಾಗಿ ನೀಡಿದ್ದ ಜಾಹೀರಾತು ನಂಬಿ 2025ರ ಫೆ.20ರಂದು ಸದರಿ ಸಂಸ್ಥೆಯವರನ್ನು ಸಂಪರ್ಕಿಸಿದ್ದೆವು. ಗಿರವಿ ಇಟ್ಟಿದ್ದ ಈ ಮಾಹಿತಿ, ಗಿರಿವಿ ಚೀಟಿಗಳನ್ನು ಸಂಸ್ಥೆಯವರಿಗೆ ವಾಟ್ಸಪ್ ಮೂಲಕ ಕಳುಹಿಸಿ ಕೊಟ್ಟಿದ್ದೆ. ಮಾರನೇ ದಿನ 2025ರ ಫೆ.21ರಂದು ಮಂಜುನಾಥ್ ಮತ್ತು ಇತರೆ ನಾಲ್ಕೈದು ಮಂದಿ ಬೆಳಗ್ಗೆ 7 ಗಂಟೆಗೆ ನಮ್ಮ ಮನೆಗೆ ಬಂದರು. ■ 6ನೇ ಪುಟಕ್ಕೆ

ರಾಜ್ಯದಲ್ಲಿಯೇ ಮೊದಲ ಬಾರಿಗೆ ಕಾಗದ ರಹಿತ ನೋಂದಣಿಗೆ ಚಾ.ನಗರದಲ್ಲಿ ಚಾಲನೆ

ಕಾವೇರಿ 2.0 ಪೋರ್ಟಲ್ ಮೂಲಕ ನಾಗರಿಕರಿಗೆ ನವೀನ ಸೇವೆ: ಮುಲ್ಲೈ ಮುಹಿಲನ್

ಚಾಮರಾಜನಗರ, ಏ.30– ರಾಜ್ಯ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಕಾವೇರಿ 2.0 ಪೋರ್ಟಲ್ ಮೂಲಕ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಚಾಮರಾಜನಗರ ಉಪನೋಂದಣಿ ಕಚೇರಿಯಲ್ಲಿ ಕಾಗದ ರಹಿತ ನೋಂದಣಿಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರಾದ ಎಂ.ಪಿ. ಮುಲ್ಲೈ ಮುಹಿಲನ್ ಚಾಲನೆ ನೀಡಿದರು.



ಮುದ್ರಾಂಕಗಳ ಆಯುಕ್ತರಾದ ಎಂ.ಪಿ. ಮುಲ್ಲೈ ಮುಹಿಲನ್ ಅವರು ಕಾಗದ ರಹಿತ ಆಸ್ತಿ ನೋಂದಣಿಗೆ ಗುರುವಾರ ಚಾಮರಾಜನಗರದಲ್ಲಿ ಚಾಲನೆ ನೀಡಿದರು.

ನಗರದ ತಾಲೂಕು ಕಚೇರಿ ಆವರಣದಲ್ಲಿರುವ ನೋಂದಣಿ ಕಚೇರಿಯಲ್ಲಿ ಗುರುವಾರ ಜಿಲ್ಲೆಯ ರೈತರಿಗೆ ಕಾಗದ ರಹಿತ ನೋಂದಣಿ ಪ್ರಕ್ರಿಯೆಗೆ ಕಂಪ್ಯೂಟರ್ ಬಟನ್ ಒತ್ತುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು ಈ ನೂತನ ನೋಂದಣಿ ವ್ಯವಸ್ಥೆಯು ನಾಗರಿಕ ಕೇಂದ್ರಿತ, ಪಾರದರ್ಶಕ ಹಾಗೂ ಪರಿಣಾಮಕಾರಿ ನೋಂದಣಿ ಸೇವೆಗಳನ್ನು ಒದಗಿಸುವಲ್ಲಿ ಮಹತ್ವದ ಮೈಲಿಗಲ್ಲಾಗಿದೆ. ಸಾಂಪ್ರದಾಯಿಕ ಕಾಗದ ಆಧಾರಿತ ನೋಂದಣಿ ವ್ಯವಸ್ಥೆಯಿಂದ ಸಂಪೂರ್ಣ ಡಿಜಿಟಲ್, ಕಾಗದರಹಿತ ವ್ಯವಸ್ಥೆಯಾಗಿ ಪರಿವರ್ತನೆ, ಆಸ್ತಿ ವ್ಯವಹಾರಗಳನ್ನು ನಿರ್ವಹಿಸುವ ವಿಧಾನದಲ್ಲಿ ಮಹತ್ತರ ಬದಲಾವಣೆ ಜೊತೆಗೆ ವಿಶ್ವಾಸಾರ್ಹತೆ ಹೆಚ್ಚುತ್ತದೆ ಎಂದರು.

ಹೊಸ ವ್ಯವಸ್ಥೆಯ ಪ್ರಯೋಜನಗಳು ಕೇವಲ ಸುಧಾರಣೆಯಷ್ಟೇ ಅಲ್ಲ. ಹಳೆಯ ಕೈಚಾಲಿತ ವ್ಯವಸ್ಥೆಯಲ್ಲಿದ್ದ ಸಮಸ್ಯೆಗಳಿಗೆ ಪೂರ್ಣ ಪರಿಹಾರ ಒದಗಿಸಲಿವೆ. ಕಾಗದದ ವ್ಯವಸ್ಥೆಯಿಂದ ಭೌತಿಕ ದಾಖಲೆಗಳು ನಕಲಿ, ಅಕ್ಷರ ಬದಲಾವಣೆ, ಪುಟ ಬದಲಾವಣೆ ಹಾಗೂ ನಂತರದ ತಿದ್ದುಪಡಿಗಳಿಗೆ ಒಳಪಡುವ ಸಾಧ್ಯತೆಗಳು ಇದ್ದವು. ಇದರಿಂದ ದೋಷಗಳ ಸಾಧ್ಯತೆ ಹೆಚ್ಚು ಇರುತ್ತಿತ್ತು ಎಂದರು.

ಕಾಗದ ರಹಿತ ನೋಂದಣಿಗೆ ಚಾಮರಾಜನಗರ ಜಿಲ್ಲೆಯಿಂದಲೇ ಚಾಲನೆ ನೀಡಿದ್ದು, ಇನ್ನು ಎರಡು ಮೂರು ತಿಂಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಈ ವ್ಯವಸ್ಥೆಯನ್ನು ಹಂತ ಹಂತವಾಗಿ ಜಾರಿ ಮಾಡಲಾಗುತ್ತದೆ. ಸಾರ್ವಜನಿಕರಿಗೆ ನೇರವಾಗಿ ಈ ವ್ಯವಸ್ಥೆಯಡಿ ತಮ್ಮ ಆಸ್ತಿಗಳನ್ನು ನೋಂದಣಿ ಮಾಡಲು ಅವಕಾಶ ಇದೆ. ಎಲ್ಲವೂ ಆಧಾರ್ ಆಧರಿತವಾಗಿ ನಡೆಯುತ್ತದೆ. ಇದರಿಂದ ಯಾವುದೇ ರೀತಿ ಮೋಸ ಆಗುವುದಿಲ್ಲ ಎಂದರು.

ಕಾವೇರಿ 2.0 ಪೋರ್ಟಲ್‌ನಡಿ ಅನುಷ್ಠಾನವಾಗುತ್ತಿರುವ ಕಾಗದರಹಿತ ನೋಂದಣಿ ಪ್ರಕ್ರಿಯೆ ಸರಳ, ಪಾರದರ್ಶಕ ಹಾಗೂ ■ 6ನೇ ಪುಟಕ್ಕೆ

ಮೈಸೂರು ಮಿತ್ರ ಶುಕ್ರವಾರ 1 ಮೇ 2026

ಎಸ್‌ಡಿಜೆ ಗೋಲ್ಡ್‌ನಿಂದ ಭಾರೀ ವಂಚನೆ

ಅಡವಿಟ್ಟ ಚಿನ್ನ ಬಿಡಿಸಿ ಹೆಚ್ಚಿನ ಬೆಲೆ ನೀಡುವುದಾಗಿ ಅಮಾಯಕರಿಗೆ ಮೋಸ: ಬಿಜೆಪಿ ರಾಜ್ಯ ಹಿಂದುಳಿದ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಆರೋಪ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ಬಿಜೆಪಿ ರಾಜ್ಯ ಹಿಂದುಳಿದ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಏ.30(ಬಿಎಲ್‌ಯು)– ಮೈಸೂರಿನ ಎಸ್‌ಡಿಜೆ ಗೋಲ್ಡ್ ಮಾಲೀಕ ಚಿನ್ನತಂಬಿ ಎಂಬಾತ ಅಡವಿಟ್ಟ ಚಿನ್ನ ಬಿಡಿಸಿ ಹೆಚ್ಚಿನ ಬೆಲೆಗೆ ಖರೀದಿಸುವುದಾಗಿ ಅಮಾಯಕ ಜನರನ್ನು ವಂಚಿಸುತ್ತಿದ್ದಾನೆ ಎಂದು ಬಿಜೆಪಿ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಆರೋಪಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಡವಿಟ್ಟ ಚಿನ್ನ ಬಿಡಿಸಿ ಹೆಚ್ಚಿನ ಬೆಲೆಗೆ ಖರೀದಿಸುವುದಾಗಿ ಈತ ನಡೆಸುತ್ತಿರುವ ವ್ಯವಹಾರ ಸಾವಿರ ಕೋಟಿಗೂ ಮೀರಿದೆ ಎಂದು ಆಪಾದಿಸಿದರು.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವವರನ್ನೆ ಗುರಿ ಮಾಡಿಕೊಳ್ಳುವ ಈತ ಅವರು ಅಡವಿಟ್ಟಿರುವ ಚಿನ್ನವನ್ನು ಮೊದಲು ಬಿಡಿಸುತ್ತಾನೆ. ತರುವಾಯ ತನ್ನ ಅಂಗಡಿಗೆ ಕೊಂಡೊಯ್ದು ಅದನ್ನು ಕರಗಿಸುತ್ತಾನೆ. ಬಳಿಕ ತಾನು ಹೇಳಿದ ಬೆಲೆಗೆ ಚಿನ್ನ ನೀಡಬೇಕೆಂದು ಧಮ್ಕಿ ಹಾಕುತ್ತಾನೆ. ಈಗಾಗಲೇ ಚಿನ್ನವನ್ನು ಕರಗಿಸಿರುವುದರಿಂದ ಅಮಾಯಕ ಜನರು ಚಿನ್ನತಂಬಿ ಹೇಳಿದ ಬೆಲೆಗೆ ಕೊಟ್ಟು ಹಣ ಪಡೆಯುತ್ತಿದ್ದಾರೆ ಎಂದು ರಘು ಕೌಟಿಲ್ಯ ದೂರಿದರು.

ಎಸ್‌ಡಿಜೆ ಗೋಲ್ಡ್ ಮಾತ್ರವಲ್ಲದೆ ಈ ರೀತಿಯ ಅಡವಿಟ್ಟ ಚಿನ್ನ ಬಿಡಿಸಿ ಖರೀದಿಸುವ ದೊಡ್ಡ ಜಾಲವೇ ಮೈಸೂರಿನಲ್ಲಿದೆ. ಈ ಪ್ರಕರಣವನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿ ತನಿಖೆ ಮಾಡಬೇಕು. ಈ ಮೂಲಕ ಜನರು ಮೋಸ ಹೋಗುವುದನ್ನು ತಪ್ಪಿಸಬೇಕು ಎಂದು ಆಗ್ರಹಿಸಿದರು.

ಮೈಸೂರಿನಲ್ಲಿ ಡ್ರಗ್ಸ್, ಕೊಲೆ, ಸುಲಿಗೆಯಂತಹ ಅಪರಾಧ ಪ್ರಕರಣಗಳಿಂದ ಕ್ರೈಂ ತಾಣವಾಗುತ್ತಿದೆ. ಇದರ ಮಧ್ಯೆ ಇಂತಹದೊಂದು ಮಾಫಿಯಾ ಕೂಡ ತಲೆ ಎತ್ತಿದೆ. ಆಕರ್ಷಕ ಜಾಹಿರಾತು ನೀಡಿ ಅಮಾಯಕರನ್ನು ವಂಚಿಸುತ್ತಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡಿದರೆ ಸಾಕ್ಷ್ಯಾಧಾರವಿಲ್ಲದಂತೆ ಮಾಡುತ್ತಾರೆ. ಅಷ್ಟೆ ಅಲ್ಲದೆ ಪೊಲೀಸರು ಇಂತಹ ವಂಚನೆ ಪ್ರಕರಣದಲ್ಲಿ ಅಪರಾಧಿಗಳಿಗೆ ಬೆಂಬಲ ನೀಡುತ್ತಿದ್ದಾರೆ ಎಂದು ರಘು ಕೌಟಿಲ್ಯ ಆರೋಪಿಸಿದರು.

ಇದೇ ವೇಳೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಅಡವಿಟ್ಟ ಚಿನ್ನ ಬಿಡಿಸಿ ಹೆಚ್ಚಿನ ಬೆಲೆ ನೀಡುವುದಾಗಿ ಮೋಸ ಮಾಡುವ ದೊಡ್ಡ ಜಾಲವೇ ಇದ್ದು, ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಈ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿ ಮಾಧ್ಯಮ ಸಂಚಾಲಕ ಮಹೇಶ್‌ರಾಜ್ ಅರಸ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭ ಶಿಕ್ಷಣ ವ್ಯವಸ್ಥೆ ಅವನತಿಗೆ ಕಾರಣ

ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಆರ್.ಮಹದೇವಪ್ಪ ವಾಗ್ದಾಳಿ



ಮೈಸೂರಿನ ಇನ್ಸಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಬಡಮಕ್ಕಳ ಶಿಕ್ಷಣ ಕಸಿಯುತ್ತಿರುವ ಸರ್ಕಾರ' ವಿಚಾರ ಸಂಕಿರಣವನ್ನು ಆರ್.ಮಹದೇವಪ್ಪ ಉದ್ಘಾಟಿಸಿದರು.

ಮೈಸೂರು,ಏ.30(ಜಿಎ)–ರಾಜ್ಯ ಸರ್ಕಾರ ಶಿಕ್ಷಣ ತಜ್ಞರು, ವಿದ್ವಾಂಸರು ಮತ್ತು ಶಿಕ್ಷಕರ ವರದಿಯನ್ನು ಧಿಕ್ಕರಿಸಿ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಪ್ರಾರಂಭ ಮಾಡಲು ಮುಂದಾಗಿರುವುದು ಶಿಕ್ಷಣ ವ್ಯವಸ್ಥೆಯ ಅವನತಿಗೆ ಕಾರಣ ಎಂದು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಆರ್.ಮಹದೇವಪ್ಪ ವಾಗ್ದಾಳಿ ನಡೆಸಿದರು.

ಮೈಸೂರಿನ ಇನ್ಸಿಟ್ಯೂಟ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಆಯೋಜಿಸಿದ್ದ 'ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಬಡಮಕ್ಕಳ ಶಿಕ್ಷಣ ಕಸಿಯುತ್ತಿರುವ ಸರ್ಕಾರ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ತನ್ನ 8ನೇ ಗ್ಯಾರಂಟಿ ಎಂದು ಕೆಪಿಎಸ್ ಮ್ಯಾಗ್ನೆಟ್ ಶಾಲೆ ಆರಂಭದ ಕುರಿತು ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಜಾಹೀರಾತು ನೀಡುತ್ತಿದೆ. ವಿಕೇಂದ್ರಿಕರಣ ಗೊಳ್ಳಬೇಕಾದ ಶಿಕ್ಷಣ ಇಂದು ಕೇಂದ್ರೀಕರಣವಾಗುತ್ತಿರುವುದು ನಮ್ಮ ದುರದೃಷ್ಟಕರ. ಪ್ರತಿಯೊಬ್ಬರು ಶಿಕ್ಷಣ ಪಡೆಯುವ ಮೂಲಕ ಜಾಗೃತರಾಗಬೇಕು ಎಂಬ ಆಶಯ ಹೊಂದಿದ್ದ ಅಂಬೇಡ್ಕರ್ ಅವರು ಪ್ರತಿಯೊಂದು ಊರಿನಲ್ಲೂ ಶಾಲೆಗಳು ಇರಬೇಕು ಎಂದು ಹೇಳಿದ್ದರು.

> ಕೆಪಿಎಸ್ ಮ್ಯಾಗ್ನೆಟ್ ಶಾಲೆಯಲ್ಲಿ 6ನೇ ತರಗತಿ ಮಕ್ಕಳಿಗೆ ಕೌಶಲ್ಯ ತರಬೇತಿ ನೀಡುವುದಾಗಿ ತಮ್ಮ ಜಾಹೀರಾತಿನಲ್ಲಿ ತಿಳಿದಲಾಗಿದೆ. ಎಲ್ಲಾದರೂ 6ನೇ ತರಗತಿ ಮಕ್ಕಳಿಗೆ ಕೌಶಲ್ಯ ತರಬೇತಿ ನೀಡುವುದುಂಟೆ? ಇನ್ನೂ ಸಾಹಿತ್ಯ ಸಂಸ್ಕೃತಿ ತಿಳುವಳಿಕೆಯೇ ಇಲ್ಲದ ಮಕ್ಕಳಿಗೆ ಕೌಶಲ್ಯ ತರಬೇತಿ ನೀಡುತ್ತೇವೆ ಎಂದು ಹೇಳುವುದು ನಾಚಿಕೆ ವಿಚಾರ. –ಆರ್.ಮಹದೇವಪ್ಪ, ನಿವೃತ್ತ ಜಂಟಿ ನಿರ್ದೇಶಕ, ಶಿಕ್ಷಣ ಇಲಾಖೆ

ಯಾರು ಅಂಬೇಡ್ಕರ್ ಆಶಯ ಈಡೇರಿಸುತ್ತಾರೆ ಎಂದುಕೊಂಡಿದ್ದೆವೊ ಅವರೇ ಇಂದು ಶಿಕ್ಷಣ ವ್ಯವಸ್ಥೆಯನ್ನು ಹಾಳು ಮಾಡಲು ಮುಂದಾಗಿದ್ದಾರೆ. ಊರುಗಳಲ್ಲಿದ್ದ ಶಾಲೆಗಳನ್ನು ಮುಚ್ಚಿ ಖಾಸಗಿ ಸಹಭಾಗಿತ್ವದಲ್ಲಿ ಕೆಪಿಎಸ್ ಮ್ಯಾಗ್ನೆಟ್ ಶಾಲೆ ತೆರಯಲು ಮುಂದಾಗಿರುವುದು ಅತ್ಯಂತ ಖಂಡನೀಯ ಎಂದು ಹೇಳಿದರು.

ಸಣ್ಣ ಮಕ್ಕಳು ಓದು ಕಲಿತು ಐಎಎಸ್, ಮೆಡಿಕಲ್, ಇಂಜಿನಿಯರಿಂಗ್ ಸೇರಿದಂತೆ ಉನ್ನತ ಮಟ್ಟದ ವ್ಯಾಸಂಗದ ಬಗ್ಗೆ ಆಸಕ್ತಿ ಇಟ್ಟುಕೊಳ್ಳಬೇಕು. ಅದರ ಬದಲು ಈಗಲೇ ಕೌಶಲ್ಯ ತರಬೇತಿ ನೀಡಲು ಮುಂದಾಗುವುದು ಮಕ್ಕಳ ಶಿಕ್ಷಣದ ಹಕ್ಕನ್ನು ಕಸಿದುಕೊಳ್ಳುವ ಹುನ್ನಾರವಾಗಿದೆ ಎಂದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬರಬೇಕು. ಹಳ್ಳಿ, ಹಾಡಿ ಮಕ್ಕಳ ಕಷ್ಟ ಅವರ ಹಾಗು ಹೋಗುಗಳು ಶಿಕ್ಷಣ ಸಚಿವರಿಗೆ ಗೊತ್ತೇ ಇಲ್ಲ. ಇಂತಹ ವ್ಯಕ್ತಿಗಳನ್ನು ಶಿಕ್ಷಣ ಸಚಿವರನ್ನಾಗಿ ಮಾಡಿದರೆ ಇದೇ ವ್ಯವಸ್ಥೆ ಉದ್ಭವವಾಗಲಿದೆ. ಶಿಕ್ಷಣ, ಆರೋಗ್ಯ ಮತ್ತು ಕೃಷಿ ಇಲಾಖೆಗಳನ್ನು ತಿಳುವಳಿಕೆ ಇರುವವರಿಗೆ ನೀಡಿದರೆ ಮಾತ್ರ ಏನಾದರೂ ಸುಧಾರಣೆ ತರಲು ಸಾಧ್ಯ ಎಂದರು.

ದಸಂಸ ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಉಪಾಧ್ಯಕ್ಷ ವಿ.ಎನ್. ರಾಜಶೇಖರ್, ಮೈಸೂರು ವಿವಿ ನಿವೃತ್ತ ಹಿರಿಯ ಪ್ರಾಧ್ಯಾಪಕ ಪ್ರೊ.ಡಿ.ಆನಂದ್, ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚಂದ್ರಕಲಾ, ದಸಂಸ ಜಿಲ್ಲಾ ಸಂಚಾಲಕ ಎಡತೊರೆ ಮಹದೇವಯ್ಯ ಮೈಸೂರು ವಿವಿ ಸಂಶೋಧಕ ಕಾರ್ತಿಕ್ ಮತ್ತಿತರರು ಇದ್ದರು.

ಲೋಕಾಯುಕ್ತ ಆದೇಶಕ್ಕೂ ಕೇರ್ ಮಾಡದ ಸರ್ಕಾರ

- ಅಮಾನತು ಇಲ್ಲ, ಮದ್ದೂರಿಗೆ ವರ್ಗಾವಣೆಯೂ ಇಲ್ಲ
- ರಾಜಕೀಯ ಪ್ರಭಾವ ಬಳಸಿ ರಮ್ಮನಹಳ್ಳಿಗೆ ವರ್ಗಾವಣೆ

ಮೈಸೂರು, ಏ.30(ಜಿಎ)–ಹೂಟಗಳ್ಳಿ ನಗರಸಭೆ ಕಂದಾಯ ನಿರೀಕ್ಷಕ ಸಿ.ರಾಮಸ್ವಾಮಿ ಅವರನ್ನು ಲೋಕಾಯುಕ್ತರ ಶಿಫಾರಸ್ಸಿನ ಮೇರೆಗೆ ಅಮಾನತಿನಲ್ಲಿಡದೇ ಅಥವಾ ಮದ್ದೂರು ಪುರಸಭೆಗೆ ವರ್ಗಾವಣೆ ಮಾಡದೇ ರಮ್ಮನಹಳ್ಳಿ ಪಟ್ಟಣ ಪಂಚಾಯತಿಗೆ ವರ್ಗಾವಣೆ ಮಾಡಲಾಗಿದ್ದು, ಇದಕ್ಕೆ ರಾಜಕೀಯ ಪ್ರಭಾವ ಕಾರಣವಾಗಿದೆ ಎಂದು ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಎಸ್.ಮಂಜುನಾಥ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮಸ್ವಾಮಿ ಸತ್ಯವನ್ನು ಮರೆಮಾಚಿ ಮುಖ್ಯಮಂತ್ರಿಗಳಿಗೆ ತಪ್ಪು ಮಾಹಿತಿ ನೀಡುವ ಮೂಲಕ ರಾಜಕೀಯ ಪ್ರಭಾವವನ್ನು ಬಳಸಿ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ ವರ್ಗಾವಣೆ ಮಾಡಿಸಿಕೊಂಡಿರುವುದು ಖಂಡನೀಯ ಎಂದರು.

ಈ ಹಿಂದೆ ಹೂಟಗಳ್ಳಿ ನಗರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ರೆವಿನ್ಯೂ ಜಾಗಗಳಿಗೆ ಅಧಿಕೃತ ಖಾತೆ ಮೊದಲಾದ ಅಕ್ರಮಗಳಲ್ಲಿ ತೊಡಗಿದ್ದರು. ಹೀಗಾಗಿ ಇವರ ಮೇಲೆ ಹಲವಾರು ದೂರುಗಳು ಬಂದ ಹಿನ್ನೆಲೆಯಲ್ಲಿ ಸರ್ಕಾರ ತನಿಖೆಗೆ ಒಳಪಡಿಸಿತ್ತು. ಜೊತೆಗೆ ಲೋಕಾಯುಕ್ತರಿಂದಲೂ ಇವರ ವಾಸದ ಮನೆ, ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿ ಮತ್ತು ಇತರೆ ಸ್ಥಳಗಳಲ್ಲಿ ಪಂಚಸಾಕ್ಷಿಗಳ ಸಮಕ್ಷಮ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಪ್ರಾಥಮಿಕ ತನಿಖೆಯಿಂದ ಇವರು ತಮ್ಮ ಆದಾಯಕ್ಕಿಂತ ಹೆಚ್ಚು ಅಕ್ರಮ ಸಂಪತ್ತನ್ನು ಗಳಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿತ್ತು ಎಂದು ಅವರು ಆಪಾದಿಸಿದರು.

ಈ ಕಾರಣದಿಂದಾಗಿ ಇವರು ಮೈಸೂರು ಜಿಲ್ಲೆಯಲ್ಲಿಯೇ ಮುಂದುವರಿದರೆ ಸಾಕ್ಷ್ಯನಾಶಗೊಳಿಸಬಹುದೆಂಬ ಶಂಕೆಯಿಂದ ಕ್ರಮಕ್ಕೆ ಆದೇಶಿಸಲಾಗಿತ್ತು. ಆದರೆ ಇವರು ಮದ್ದೂರು ಪುರಸಭೆಗೆ ವರದಿ ಮಾಡಿಕೊಳ್ಳದೇ ಮುಖ್ಯಮಂತ್ರಿಗಳಿಗೆ ತಪ್ಪು ಮಾಹಿತಿ ನೀಡಿ, ರಾಜಕೀಯ ಪ್ರಭಾವವನ್ನು ಬಳಸಿ ರಮ್ಮನಹಳ್ಳಿ ಪಪಂಗೆ ವರ್ಗಾವಣೆ ಮಾಡಿಸಿಕೊಂಡಿರುವುದು ಹಲವು ಅನುಮಾನಗಳಿಗೆ ಎಡೆಮಾಡಿ ಕೊಟ್ಟಿದೆ ಎಂದರು.

ಹೀಗಾಗಿ ಈ ಕೂಡಲೇ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಗೆ ಆಗಿರುವ ವರ್ಗಾವಣೆ ಈ ಕೂಡಲೇ ಸರ್ಕಾರ ಹಿಂಪಡೆದು ಅಮಾನತ್ತಿನಲ್ಲಿಡಬೇಕು ಅಥವಾ ಮದ್ದೂರು ಪುರಸಭೆಗೆ ಆಗಿರುವ ವರ್ಗಾವಣೆಯನ್ನು ಪರಿಗಣಿಸಿ ಈ ಕೂಡಲೇ ರಾಮಸ್ವಾಮಿಯವರನ್ನು ವರ್ಗಾವಣೆಗೊಳಿಸಬೇಕೆಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ರಮೇಶ್, ಸಿದ್ದರಾಜು, ಸುಬ್ರಮಣ್ಯ ಉಪಸ್ಥಿತರಿದ್ದರು.

ಬಿಎಂಸಿ ಉದ್ಘಾಟನೆ...



ತಿ.ನರಸೀಪುರ ತಾಲೂಕಿನ ಹುನುಗನಹಳ್ಳಿಯಲ್ಲಿ ನೂತನ ಬಿಎಂಸಿ ಕೇಂದ್ರವನ್ನು ಮೈಸೂರು ಜಿಲ್ಲಾ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಕೆ.ಉಮಾಶಂಕರ್, ಸಿ.ಓಂ.ಪ್ರಕಾಶ್, ಆರ್.ಚೆಲುವರಾಜು ಉದ್ಘಾಟಿಸಿದರು. ಈ ವೇಳೆ ಗಣ್ಯರನ್ನು ಅಭಿನಂದಿಸಲಾಯಿತು. ಒಕ್ಕೂಟದ ವ್ಯವಸ್ಥಾಪಕ ಎಲ್.ಆರ್.ಕುಬಸವರಾಜು, ಉಪವ್ಯವಸ್ಥಾಪಕ ಜಿ.ಎನ್.ಸಂತೋಷ್, ಅಧಿಕಾರಿಗಳಾದ ಪ್ರದೀಪ್, ಪ್ರಮೋದ್, ರಂಜಿತಾ, ಸಂಘದ ಅಧ್ಯಕ್ಷ ವೆಂಕಟರಾಮು, ಉಪಾಧ್ಯಕ್ಷರಾದ ರತ್ನಮ್ಮ, ನಿರ್ದೇಶಕರಾದ ಶಿವಣ್ಣ, ರಾಜೇಶ್, ಶಿವಣ್ಣ, ಚಂದ್ರಶೇಖರ್, ಶಿವಣ್ಣ, ನಿಂಗೇಗೌಡ, ಕೃಷ್ಣೇಗೌಡ, ಮಂಜುಳ, ಗೌರಮ್ಮ, ಜ್ಯೋತಿ, ಸಿಬ್ಬಂದಿ ಕುಶಾಲ್, ನಾರಾಯಣ, ರವಿಚಂದ್ರ ಇದ್ದರು.

ಅತಿಥಿ ಉಪನ್ಯಾಸಕರ ಬಿಡುಗಡೆ ಆದೇಶ ವಾಪಸ್ ಪಡೆಯದಿದ್ದರೆ ಪರೀಕ್ಷೆ, ಮೌಲ್ಯಮಾಪನ ಬಹಿಷ್ಕಾರ

- ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಮನ್ವಯ ಸಮಿತಿ ಎಚ್ಚರಿಕೆ

ಮೈಸೂರು,ಏ.30(ಜಿಎ)–ರಾಜ್ಯದೆಲ್ಲೆಡೆಯಂತೆ ಏಕಕಾಲದಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ ಯಾದರೂ ಮೈಸೂರು ವಿವಿ ವ್ಯಾಪ್ತಿಯಲ್ಲಿ ಮಾತ್ರ ಇವರನ್ನು 3 ತಿಂಗಳು ಮೊದಲೇ ಸೇವೆಯಿಂದ ಬಿಡುಗಡೆಗೊಳಿಸುವ ಆದೇಶ ಹೊರಡಿಸಿದ್ದು, ಅದನ್ನು ವಾಪಸು ಪಡೆಯದಿದ್ದರೆ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯ ಬಹಿಷ್ಕರಿಸಲಾಗುವುದು ಪದವಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಮನ್ವಯ ಸಮಿತಿ ಉಪಾಧ್ಯಕ್ಷ ಡಾ.ದಿವಾಕರ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಸುಮಾರು 10 ಸಾವಿರ ಮಂದಿ ಅತಿಥಿ ಉಪನ್ಯಾಸಕರನ್ನು ಏಕಕಾಲಕ್ಕೆ ನೇಮಕ ಮಾಡಿಕೊಳ್ಳಲಾಗಿದೆ. ಇದು 10 ತಿಂಗಳ ಅವಧಿಯದ್ದಾಗಿದೆ. ಆದರೆ ಮೈಸೂರು ವಿವಿಯಲ್ಲಿ ಶೈಕ್ಷಣಿಕ ಸಾಲು ಶೀಘ್ರ ಮುಕ್ತಾಯಗೊಳ್ಳಲಿದೆ ಎಂಬ ಕಾರಣ ನೀಡಿ 3 ತಿಂಗಳು ಮೊದಲೇ ಸೇವೆಯಿಂದ ಬಿಡುಗಡೆಗೊಳಿಸಲಾಗುತ್ತಿದೆ. ನಾವು ಪರೀಕ್ಷೆ ಮೌಲ್ಯಮಾಪನ ಮೊದಲಾದವುಗಳಲ್ಲಿ ಪಾಲ್ಗೊಳ್ಳುತ್ತಿದ್ದರೂ ಈ ಕ್ರಮ ಕೈಗೊಳ್ಳುತ್ತಿರುವುದು ಸರಿಯಲ್ಲ. ಇದರಿಂದಾಗಿ ಸೇವಾ ಮೆರಿಟ್ ಇತರೆ ಜಿಲ್ಲೆಗಳ ಅತಿಥಿ ಉಪನ್ಯಾಸಕರಿಗೆ ಹೋಲಿಸಿದಲ್ಲಿ ಕಡಿತಗೊಳ್ಳಲಿದೆ. ಜೊತೆಗೆ, ಕುಟುಂಬವನ್ನು ಆರ್ಥಿಕವಾಗಿ ನಡೆಸುವುದೂ ಕಷ್ಟವಾಗುತ್ತದೆ. ಆದ್ದರಿಂದ ರಾಜ್ಯದ ಇತರೆಡೆಯಂತೆಯೇ ಇಲ್ಲಿಯೂ ಒಂದೇ ಅವಧಿಯಲ್ಲಿ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿದರು. ಪರೀಕ್ಷೆಗಳಿಗೂ ಮುನ್ನ ಈ ಕುರಿತ ಆದೇಶ ವಾಪಸು ಪಡೆಯದಿದ್ದರೆ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯ ಬಹಿಷ್ಕರಿಸುವುದಾಗಿ ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಹನುಮಂತೇಶ್, ಡಾ.ರವೀಂದ್ರ, ಡಾ.ಶಿವೇಗೌಡ ಇದ್ದರು.

ನಿರುತ್ ಆನಂದ್‌ಗೆ 618 ಅಂಕ



ಮೈಸೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನಗರದ ಭಾರತೀಯ ವಿದ್ಯಾ ಭವನದ ವಿದ್ಯಾರ್ಥಿ ನಿರುತ್ ಆನಂದ್ 618 ಅಂಕ ಗಳಿಸಿ ರಾಜ್ಯದಲ್ಲೇ 8ನೇ ಸ್ಥಾನ ಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ವಿಜಯನಗರದ ಆನಂದ್ ಮತ್ತು ಶಿಲ್ಪಾ ದಂಪತಿ ಪುತ್ರ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.5.2026 ಶುಕ್ರವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ಹುಣ್ಣಿಮೆ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.
- **ನನ್ನವ್ವ ಸಾಂಸ್ಕೃತಿಕ ಕಲಾತಂಡ** : ಬುದ್ಧ ಪೂರ್ಣಿಮೆ ಭಗವಾನ್ ಬುದ್ಧ ಜಯಂತಿ ಅಂಗವಾಗಿ ಯುದ್ಧಕ್ಕೆ ಪರಿಹಾರ ಬುದ್ಧ ಸಂವಾದ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಎ.ಆರ್. ಕೃಷ್ಣಮೂರ್ತಿ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಶ್ರೀಮತಿ ಪ್ರಭಾಶಾಸ್ತ್ರಿ ಜೋಶ್ಯುಲ, ಡಾ. ಟಿ. ಪದ್ಮಶ್ರೀ, ಸತೀಶ್ ಹೆಗ್ಗೂರು, ಜೀಮಾರಹಳ್ಳಿ ರಂಗಸ್ವಾಮಿ, ಸ್ಥಳ: ನಮನ ಕಲಾ ಮಂಟಪ, ಅಶೋಕ ವೃತ್ತ, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಸುಯೋಗ್ ಆಸ್ಪತ್ರೆ** : ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ವ್ಯವಸ್ಥಾಪಕರು** : ಅಂತರರಾಷ್ಟ್ರೀಯ ಕಾರ್ಮಿಕರ ದಿನಾಚರಣೆ, ಮುಖ್ಯ ಅತಿಥಿಗಳು : ಮೈಪಾಲ್ ಸ್ಥಾಪಕ ಸಿ.ಡಿ. ನಾಗರಾಜನ್, ಸ್ಥಳ : ಜಗನ್ಮೋಹನ ಅರಮನೆ, ಬೆಳಗ್ಗೆ 10ಕ್ಕೆ.
- **ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ** : ಅಷ್ಟಮ ವರ್ಷದ ವಾರ್ಷಿಕೋತ್ಸವ, ಶ್ರೀ ಉತ್ತರಾದಿ ಮಠಾಧೀಶರಾದ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶೇಷ ಕಾರ್ಯಕ್ರಮಗಳು, ಪುರುಷರಿಂದ ಪುರುಷಸೂಕ್ತ ಪಾರಾಯಣ, ಸ್ತ್ರೀಯರಿಂದ ಲಕ್ಷ್ಮೀಶೋಭಾನ ಪಾರಾಯಣದ ಸಮರ್ಪಣಾ ಅಂಗವಾಗಿ ಪುರುಷಸೂಕ್ತ ಮತ್ತು ಶ್ರೀ ಸೂಕ್ತ ಹೋಮ, ರಾಜಬೀದಿಗಳಲ್ಲಿ ಮಹಾರಥೋತ್ಸವ, ಸ್ಥಳ: ಶ್ರೀ ವೆಂಕಟೇಶ್ವರ ಧ್ಯಾನ ಕೇಂದ್ರ, ಶ್ರೀ ಉತ್ತರಾದಿ ಮಠ, ಶ್ರೀರಾಂಪುರ.
- **ಬಸವ ಸಮಿತಿ** : ಶರಣ ಸಂಗಮ–317, ಶ್ರೀ ಬಸವೇಶ್ವರ ಜಯಂತಿ, ಅಕ್ಕಮಹಾದೇವಿ ಜಯಂತಿ ಹಾಗೂ ಕೃತಿಗಳ ಬಿಡುಗಡೆ ಸಮಾರಂಭ, ಬೆಳಗ್ಗೆ 10ಕ್ಕೆ ವಚನಗಾಯನ ಸ್ಪರ್ಧೆ, ಬೆಳಗ್ಗೆ 11 ಗಂಟೆಗೆ ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗ ಹಾಗೂ ಬಸವ ಸಮಿತಿ ಸದಸ್ಯರಿಂದ ವಚನಗಾಯನ, ಬಸವ ವಚನ ಚಿಂತನ–ಪ್ರೊ. ಮೊರಬದ ಮಲ್ಲಿಕಾರ್ಜುನ, ಅನುದಿನ ವಚನ – ಡಾ. ಬಿ.ವಿ. ವಸಂತಕುಮಾರ್, ಕೃತಿ ಬಿಡುಗಡೆ ನಂತರ ನಾಟಕ ಬಾಲ ಬಸವ, ಕೃತಿಗಳ ಬಿಡುಗಡೆ : ಪ್ರೊ. ಮೊರಬದ ಮಲ್ಲಿಕಾರ್ಜುನ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಉಪಸ್ಥಿತರು : ಸಂವಹನ ಪ್ರಕಾಶಕ ಡಿ.ಎನ್. ಲೋಕಪ್ಪ, ಸ್ಥಳ : ಬಸವ ಭವನ, ವಿಜಯನಗರ 1ನೇ ಹಂತ.
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಭಗವಾನ ಬುದ್ಧ ಜಯಂತ್ಯೋತ್ಸವ ಸಮಿತಿ** : 2570ನೇ ವೈಶಾಖ ಬುದ್ಧ ಪೂರ್ಣಿಮೆ ಭಗವಾನ ಬುದ್ಧ ಜಯಂತಿ, ಸಾನ್ನಿಧ್ಯ : ವಿಶ್ವಮೈತ್ರಿ ಬುದ್ಧ ವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ, ಮಹಾಬೋಧಿ ಶಾಖೆಯ ಪೂಜ್ಯ ಸೋಭಾನ ಭಂತೇಜಿ, ಘನ ಉಪಸ್ಥಿತರು : ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್, ಶಾಸಕರಾದ ಸಿ. ಅನಿಲ್ ಕುಮಾರ್, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ಕ್ಕೆ.
- **ಸೂತ್ರ ಫೌಂಡೇಷನ್** :ಚಿಣ್ಣರ ವನ ಬೇಸಿಗೆ ಶಿಬಿರದ ಸಮಾರೋಪ, ಉಪಸ್ಥಿತರು : ಶ್ರೀಮತಿ ಚೈತ್ರ ವಿ. ಅರಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಆರ್. ಮಂಜುನಾಥ್, ಜಿ. ಜಗದೀಶ್‌ಕುಮಾರ್, ಸ್ಥಳ: ಕಿರುರಂಗ ಮಂದಿರ, ಬೆಳಗ್ಗೆ 11.30ಕ್ಕೆ.
- **ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನಲ್ ಥಿಯೇಟರ್** : ಆರ್ಟ್ ಇಂಟ್ರೊ ಬೇಸಿಗೆ ಶಿಬಿರದಲ್ಲಿ ನಾಟಕ ಪ್ರದರ್ಶನ ಕಾರ್ಯಕ್ರಮ, Rabi Learned Roaring ಮತ್ತು Monku and Rabi ಹಾಗೂ ಹಿರಿಯ ರಂಗನಿರ್ದೇಶಕರಾದ ಪ್ರಸನ್ನ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಕನ್ನಡ ಮಕ್ಕಳ ನಾಟಕ Pippigondu Pappi ನಾಟಕಗಳ ಪ್ರದರ್ಶನ, ಸ್ಥಳ : ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನಲ್ ಥಿಯೇಟರ್, ಹಾರ್ಡ್ವಿಕ್ ಶಾಲೆ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ಕ್ಕೆ.
- **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್** : ಶ್ರೀ ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ, ಸ್ಥಳ: ಶ್ರೀಮತಿ ಲೀಲಾ ನಾಗರಾಜ್ ಅವರ ಸ್ವಗೃಹ, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4 ರಿಂದ.
- **ವಿಶ್ವಮೈತ್ರಿ ಬುದ್ಧ ವಿಹಾರ** : ಭಗವಾನ್ ಬುದ್ಧರ 2570ನೇ ಜನ್ಮ ದಿನಾಚರಣೆ, ಸಮ್ಮುಖ : ಡಾ. ಕಲ್ಯಾಣಸಿರಿ ಭಂತೇಜಿ, ಪೂಜ್ಯ ಭಿಕ್ಕು ಸೋಮಾನ ಭಂತೇಜಿ, ಉದ್ಘಾಟನೆ : ಗೃಹ ಸಚಿವ ಜಿ ಪರಮೇಶ್ವರ್, ಅಧ್ಯಕ್ಷತೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಡಾ. ವಿ. ಷಣ್ಮುಗಂ, ಶಾಸಕ ಟಿ.ಎಸ್. ಶ್ರೀವತ್ಸ, ಶ್ರೀಮತಿ ಭಾಗ್ಯಲಕ್ಷ್ಮೀ ಶ್ರೀನಿವಾಸ ಪ್ರಸಾದ್, ಪ್ರಾಸ್ತಾವಿಕ ನುಡಿ : ವಿಶ್ವಮೈತ್ರಿ ಬುದ್ಧ ವಿಹಾರದ ಮುಖ್ಯಸ್ಥ ವಿ. ಪುರುಷೋತ್ತಮ್, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಅಶೋಕ ವೃತ್ತ, ಸಂಜೆ 5.30ಕ್ಕೆ.
- **ಶ್ರೀ ಸುತ್ತೂರು ಮಠ** : ಬೆಳದಿಂಗಳ ಸಂಗೀತ–291ರ ಅಂಗವಾಗಿ ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ ಅವರಿಂದ ಗಾಯನ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿದ್ವಾನ್ ಮತ್ತೂರು ಶ್ರೀನಿಧಿ–ವಯೋಲಿನ್, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ದೀಕ್ಷಿತ್ ಆರೋಗ್ಯ ಧಾಮ** : ಬುದ್ಧ ಪೌರ್ಣಮಿ ಮಾಸದ ಕಾರ್ಯಕ್ರಮ, ವಿದುಷಿ ದಿವ್ಯ ಎ.ಜೆ. ಅವರಿಂದ ಸುಗಮ ಸಂಗೀತ, ಕಲಾಶ್ರೀ ಗಣೇಶ್ ಭಟ್–ಕೀಬೋರ್ಡ್, ವಿದ್ವಾನ್ ಪ್ರಸಾದ್ ಕೋಮಾರ್–ತಬಲ, ವಿದ್ವಾನ್ ಅರುಣ್ ಕುಮಾರ್–ರಿದಂ ಪ್ಯಾಡ್, ಡಾ. ಅಜಯ್ ಕೌಶಿಕ್ ಅವರಿಂದ ಡಯಾಬಿಟಿಕ್ ಫುಟ್ ಕುರಿತು ಉಪನ್ಯಾಸ, ಉಪಸ್ಥಿತರು : ಡಾ. ಚಂದ್ರಶೇಖರ್, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6ಕ್ಕೆ.
- **ನಾಲ್ವಡಿ ಸೋಷಿಯಲ್ ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್** : ಮಕ್ಕಳ ರಂಗ ಬೇಸಿಗೆ ಶಿಬಿರದ ಸಮಾರೋಪ, ಉದ್ಘಾಟನೆ : ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಕಾರ್ಯದರ್ಶಿ ಶ್ರೀಮತಿ ಲತಾ ಮೋಹನ್, ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ, ವಿಶ್ವ ರಂಗ ಟ್ರಸ್ಟ್ ಸದಸ್ಯ ನಿಖಿಲ್, ಸ್ಥಳ: ಜಿಲ್ಲಾ ಕಸಾಪ ಭವನ, ಸಂಜೆ 6ಕ್ಕೆ

ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠ:** ರೈತರ ಶಿಬಿರ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಬೆಂಗಳೂರಿನ ಕರ್ನಾಟಕ ಕೃಷಿ ಬೆಲೆ ಆಯೋಗ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಅಶೋಕ್ ದಳವಾಯಿ, ಅಧ್ಯಕ್ಷತೆ : ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್.ವಿ. ಸುರೇಶ್, ಮುಖ್ಯ ಅತಿಥಿಗಳು : ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯ ಅಧ್ಯಕ್ಷ ಡಾ. ಎ.ಬಿ. ಪಾಟೀಲ್, ಸ್ಥಳ: ಸುತ್ತೂರು ಶ್ರೀ ಕ್ಷೇತ್ರ, ಬೆಳಗ್ಗೆ 10 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಜ್ಞಾನ ಜ್ಯೋತಿ ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಪದಸಂಸ್ಕೃತಿ–ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಮತ್ತು ಸಂಜೆ 5.30–ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್–ಶಿಶು ಗೀತೆಗಳ ಕಾರ್ಯಕ್ರಮ, 8.35 ಕನ್ನಡ ಚಿತ್ರಗೀತೆಗಳು, 9.00–ನಮ್ಮ ಆರೋಗ್ಯ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ: ಜಿ. ಎನ್. ಮಂಜುನಾಥ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು, ಪ್ರಸ್ತುತಿ: ಜಿ ಶಾಂತ ಕುಮಾರ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, 4.00 ಮಹಿಳಾರಂಗ–ಸಖೀ ಸಾಹಿತ್ಯ, 4.30 ವೃತ್ತಿ ಮಾರ್ಗದರ್ಶನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕೃಷಿ ಕಾರ್ಮಿಕರ ಆರೋಗ್ಯ ರಕ್ಷಣೆ ಕುರಿತು ಸಂವಾದ ಭಾಗವಹಿಸುತ್ತಾರೆ–ಮೈಸೂರಿನ ಕೇಂದ್ರೀಯ ಆಸ್ಪತ್ರೆಯ ಹಿರಿಯ ವೈದ್ಯಾಧಿಕಾರಿಗಳಾದ ಡಾ. ಸಂದೀಪ್ ಮುನ್ನಾರಂ ಮತ್ತು ಡಾ. ಪಿ.ವಿ. ಶಿಲ್ಪಾ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ವಿಜ್ಞಾನ ಭಾರತಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

02.5.2026 ಶನಿವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.
- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಸುಯೋಗ್ ಆಸ್ಪತ್ರೆ** : ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಮೈಸೂರು ವಿವಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಬಟಾನಿಕಲ್ ಸೊಸೈಟಿ** : ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ವಿಶ್ರಾಂತ ಕುಲಪತಿ ಡಾ. ಎ.ಎಚ್. ರಾಜಾಸಾಬ್, ಮುಖ್ಯ ಅತಿಥಿಗಳು : ಡಾ. ಹೆಚ್. ಶೇಖರ್ ಶೆಟ್ಟಿ, ಡಾ. ಜಿ.ಆರ್. ಜನಾರ್ಧನ, ಡಾ. ಆರ್. ರಾಘವೇಂದ್ರರಾವ್, ಡಾ. ಎಂ. ಸಂಜಪ್ಪ, ಡಾ. ಕೆ.ಆರ್. ಶಿವಣ್ಣ, ಅಧ್ಯಕ್ಷತೆ : ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ. ಎಂ.ಎಸ್. ನಳಿನಿ, ಸ್ಥಳ: ಲೀನಿಯಸ್ ಹಾಲ್, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್** : ಶ್ರೀ ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ, ಸ್ಥಳ: ಲೀಲಾ ನಾಗರಾಜ್‌ರ ಸ್ವಗೃಹ, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4 ರಿಂದ.
- **ಕಲಾಸುರುಚಿ** : ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 930, ಕಥೆ ಹೇಳುವವರು: ಶ್ರೀಯುತ ಬಾಲಕೃಷ್ಣಯ್ಯ ಬಿ, ನಿವೃತ್ತ ಶಿಕ್ಷಕರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ, ಶಿಕ್ಷಣ ಇಲಾಖೆ, ಮೈಸೂರು, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್** : ಉಪಶಮನ ಆರೈಕೆಯ ನೆರವಿಗಾಗಿ ಸ್ವರಾನುಭೂತಿ ಖ್ಯಾತ ಗಾಯಕರಾದ ವಿಜಯ ಪ್ರಕಾಶ್ ಮತ್ತು ಹಿನ್ನೆಲೆ ಗಾಯಕಿ ಕು. ಅನುರಾಧ ಭಟ್ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಮುಕ್ತ ವಿವಿ ಘಟಿಕೋತ್ಸವ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 5.30ರಿಂದ.
- **ಶ್ರೀ ರಾಮಕೃಷ್ಣ ಆಶ್ರಮ**: ಸ್ವಾಮಿ ಪರಮಹಂಸಾನಂದ ಅವರಿಂದ ಡಿಸೈಪಲ್ಸ್ ಅಂಡ್ ಡಿವೋಟೀಸ್ ಆಫ್ ಶ್ರೀ ರಾಮಕೃಷ್ಣ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ–ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ: ಡಾ.ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಟ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ–ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಮತ್ತು ಸಂಜೆ 5.30–ಚೂಟಿ ಚೂಟಿ ಚುಟುಕ್ ಗುಳುಂ ಗುಟಕ್–ಶಿಶು ಗೀತೆಗಳ ಕಾರ್ಯಕ್ರಮ, 8.35 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ: ಡಾ.ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಬಟನ್ ಮಶ್ರೂಮ್ ಬೇಸಾಯ ಈ ಕುರಿತು ಮೈಸೂರು ತಾಲ್ಲೂಕು ಇಲವಾಲ ಹೋಬಳಿ ನಾಗವಾಲದ ಎನ್.ಎಂ. ನಂದೀಶ್ ಕುಮಾರ್ ಅವರೊಂದಿಗೆ ಸಂದರ್ಶನ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಹೆಚ್. ಎಂ. ಸ್ಮಿತಾ ಮತ್ತು ಸಿಂಧು ಸುಚೇತನಾ–ಯುಗಳ ವೈಯೋಲಿನ್ ವಾದನ

ಕೆಆರ್‌ಎಸ್ ನೀರಿನ ಮಟ್ಟ 15 ದಿನದಲ್ಲಿ 8 ಅಡಿ ಕುಸಿತ

ಬೆಳೆಗಳಿಗೆ ನೀರು ಬಿಡುಗಡೆ ತಕ್ಷಣ ಸ್ಥಗಿತ

• ಕುಡಿಯುವ ನೀರಿಗೆ ನಿತ್ಯ 4,379 ಕ್ಯುಸೆಕ್ಸ್ ಬಳಕೆ • ಗರಿಷ್ಟ 49 ಟಿಎಂಸಿ ಸಂಗ್ರಹದಲ್ಲಿ ಹಾಲಿ 18 ಟಿಎಂಸಿ ನೀರು ಸಂಗ್ರಹ • ಮೆಟ್ಟೂರಿಗೆ 800 ಕ್ಯುಸೆಕ್ ನೀರಿನ ಹರಿವು • ಮುಂಗಾರು ಶೀಘ್ರ ಆರಂಭವಾದರೆ ನೀರಿನ ಕೊರತೆ ಗೌಣ



ಮೈಸೂರು, ಏ.30(ಬಿಎಲ್‌ಯು, ಬಿಸಿಟಿ)– ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ರಾಜಧಾನಿ ಬೆಂಗಳೂರಿಗೆ ಕುಡಿಯುವ ನೀರಿನ ಮೂಲವಾಗಿರುವ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಕಳೆದ 15 ದಿನಗಳಲ್ಲಿ ತೀವ್ರವಾಗಿ ಕುಸಿದಿದ್ದು, ಬೇಸಿಗೆಯಲ್ಲಿ ನೀರಿನ ಲಭ್ಯತೆ ಬಗ್ಗೆ ಆತಂಕ ಎದುರಾಗಿದೆ.

ಕೆಆರ್ ಎಸ್ ಜಲಾಶಯದ ನೀರಿನ ಗರಿಷ್ಟ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 93.50 ಅಡಿಗಳಾಗಿವೆ. ಕಳೆದ 15 ದಿನದ ಹಿಂದೆ ಅಂದರೆ ಏಪ್ರಿಲ್ 15ರಂದು 101.40 ಅಡಿ ನೀರಿತ್ತು. ಏಪ್ರಿಲ್ 16ರಂದು 100 ಅಡಿಗೆ ಕುಸಿದಿದ್ದು, ಇಂದು 93 ಅಡಿಗಳಿಗೆ ಇಳಿದಿದೆ. ಕೇವಲ 15 ದಿನದಲ್ಲಿ 8 ಅಡಿ ಕೊರತೆಯನ್ನು ಇದು ಸೂಚಿಸುತ್ತದೆ.

ಜಲಾಶಯಕ್ಕೆ ಕೇವಲ 95 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಮೈಸೂರು ಹಾಗೂ ಬೆಂಗಳೂರಿನ ಕುಡಿಯುವ ನೀರಿಗಾಗಿ ಪ್ರತಿ ದಿನ 4,379 ಕ್ಯೂಸೆಕ್ ನೀರು ಬಿಡಲಾಗುತ್ತಿದೆ. ಬೇಸಿಗೆಯಲ್ಲಿ ಕುಡಿಯುವ ನೀರಿನ ಬಳಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕುಡಿಯುವ ನೀರಿಗಾಗಿ ಮೊದಲಿಗಿಂತ ಈಗ ಹೆಚ್ಚುವರಿ 339 ಕ್ಯುಸೆಕ್ ನೀರನ್ನು ಬಿಡಲಾಗುತ್ತಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಟ ನೀರಿನ ಸಂಗ್ರಹ 49 ಟಿಎಂಸಿಗಳಾಗಿದ್ದು, ಇಂದು 18 ಟಿಎಂಸಿ ನೀರು ಇದೆ. 9 ಟಿಎಂಸಿವರೆಗೂ ನೀರು ಸರಬರಾಜು ಮಾಡಬಹುದು. 9 ಟಿಎಂಸಿಗಿಂತ ಕೆಳಗಿನ ಡೆಡ್ ಸ್ಟೋರೇಜ್ ನಿಂದ ನೀರು ಸರಬರಾಜು ಸಾಧ್ಯವಿಲ್ಲ. ಅಲ್ಲಿಯವರೆಗೆ ಮುಂಗಾರು ಮಳೆ ಆರಂಭವಾದರೆ ನೀರಿನ ಸಮಸ್ಯೆ ನೀಗಲಿದೆ ಎಂಬ ಆಶಾಭಾವನೆ ಇದೆ.

ಕೆಆರ್‌ಎಸ್‌ನಿಂದ ನದಿ ಸೇರುತ್ತಿರುವ ನೀರು ಹೊಗೆನಕಲ್ ಜಲಪಾತದ ಮೂಲಕ ತಮಿಳುನಾಡಿಗೆ ಹರಿಯಲಿದ್ದು, ಅಲ್ಲಿ 1.500 ಕ್ಯುಸೆಕ್ ದಾಖಲಾಗಿದೆ. ತಮಿಳುನಾಡಿನ ಮೆಟ್ಟೂರು ಜಲಾಶಯ 800 ಕ್ಯುಸೆಕ್ ಒಳ ಹರಿವನ್ನು ಪಡೆಯುತ್ತಿದೆ. ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ಕುಸಿಯುತ್ತಿದ್ದರೂ ತಕ್ಷಣಕ್ಕೆ ಯಾವುದೇ ಸಮಸ್ಯೆ ಇಲ್ಲ. ಜಲಾಶಯದಲ್ಲಿ ಇನ್ನು 10 ಟಿಎಂಸಿ ನೀರಿನ ಸಂಗ್ರಹವಿದೆ ಎಂದು ಕೆಆರ್‌ಎಸ್ ನೀರು ನಿರ್ವಹಣಾ ಕಾರ್ಯನಿರ್ವಾಹಕ ಇಂಜಿನಿಯರ್ ಕಿಶೋರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜುಲೈ ಅಂತ್ಯದವರೆಗೆ ಯಾವುದೇ ತೊಂದರೆ ಇಲ್ಲ. ಒಂದು ವೇಳೆ ಮುಂಗಾರು ಕೈಕೊಟ್ಟರೆ ಕುಡಿಯುವ ನೀರಿಗೆ ತೊಂದರೆ ಆಗಲಿದೆ. ಆಗ ದಿನ ಬಿಟ್ಟು ದಿನ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸುವುದು ಅನಿವಾರ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಆದರೆ, ಇಂದಿನಿಂದ ಬೆಳೆಗೆ ನೀರು ಬಿಡುಗಡೆ ಸ್ಥಗಿತಗೊಳಿಸಲಾಗುವುದು. ಹಾಗಾಗಿ ಕುಡಿಯುವ ನೀರಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಕಿಶೋರ್ ವಿಶ್ವಾಸ ವ್ಯಕ್ತಪಡಿಸಿದರು.

ನೀರಿನ ಗುಣಮಟ್ಟದ ಮೇಲ್ವಿಚಾರಣೆ ತೀವ್ರ

ಮೈಸೂರಿನ ಕೆ.ಸಾಲುಂಡಿಯಲ್ಲಿ ಮೇ 2024ರಂದು ಕಲುಷಿತ ನೀರು ಸೇವನೆಯಿಂದ ಮೃತಪಟ್ಟ ಪ್ರಕರಣದ ಹಿನ್ನೆಲೆಯಲ್ಲಿ ಈ ಬಾರಿ ಜಿಲ್ಲಾಡಳಿತ ಕುಡಿಯುವ ನೀರಿನ ಗುಣಮಟ್ಟದ ಮೇಲ್ವಿಚಾರಣೆ ತೀವ್ರಗೊಳಿಸಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಕೆಆರ್‌ಎಸ್ ಹಾಗೂ ಕಬಿನಿ ಜಲಾ ಶಯದಿಂದ ನೀರು ಪೂರೈಕೆ ಮಾಡುವ ಮೊದಲು ನೀರನ್ನು ಕಟ್ಟು ನಿಟ್ಟಾದ ಪರೀಕ್ಷೆಗೆ ಒಳಪಡಿಸಲಾಗುವುದು. ಈ ಮೂಲಕ ಬ್ಯಾಕ್ಟೀರಿಯಾ ಮುಕ್ತ ಗೊಳಿಸಲು ಮೂರು ಹಂತದಲ್ಲಿ ಸಂಸ್ಕರಣಾ ಪ್ರಕ್ರಿಯೆ ಕೈಗೊಳ್ಳಲಾ ಗುತ್ತಿದೆ ಎಂದು ಹೇಳಿದರು.



ಲಕ್ಷ್ಮೀಕಾಂತರೆಡ್ಡಿ

ಪ್ರಾಥಮಿಕ ಶೋಧನೆ ಮಾಡಿ, ರಾಸಾಯನಿಕ ಸಂಸ್ಕರಣೆ ಮಾಡಲಾಗುವುದು. ತರುವಾಯ ಯುವಿ ಸೋಂಕುಗಳನ್ನು ಮುಕ್ತಗೊಳಿಸಲಾಗುವುದು. ಈ ಮೂಲಕ ನಿರಂತರ ಮೇಲ್ವಿಚಾರಣೆ ತರುವಾಯ ನೀರಿನ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

ಇಷ್ಟಾದರೂ ಗುಣಮಟ್ಟದಲ್ಲಿ ಲೋಪವಾದರೆ ತಕ್ಷಣ ಅದನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ ಆ ವೇಳೆ ಕುಡಿಯುವ ನೀರಿನ ಸುರಕ್ಷತೆ ಖಚಿತ ಪಡಿಸಿಕೊಳ್ಳಲು ಹೊಸ ಮಾದರಿಯ ಮರು ಪರೀಕ್ಷೆ ನಡೆಯಬೇಕು ಎಂದು ಸೂಚಿಸಲಾಗಿದೆ ಎಂದರು.

ಯಾವುದೇ ಕಾರಣಕ್ಕೂ ಕಲುಷಿತ ನೀರು ಸರಬರಾಜು ಆಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಎಂದು ಲಕ್ಷ್ಮೀಕಾಂತರೆಡ್ಡಿ ಅವರು ತಿಳಿಸಿದರು.

ನರ್ಮದಾ ನದಿಯಲ್ಲಿ ಮಗುಚಿದ ಪ್ರವಾಸಿಗರ ದೋಣಿ: 7 ಸಾವು, 18 ಮಂದಿ ನಾಪತ್ತೆ

ಜಬಲ್ಪುರ (ಮಧ್ಯಪ್ರದೇಶ): ಏಕಾಏಕಿ ಬಿರುಗಾಳಿ ಬೀಸಿದ್ದರಿಂದ ನರ್ಮದಾ ನದಿ ಯಲ್ಲಿ ಪ್ರವಾಸಿಗರಿದ್ದ ಕ್ರೂಸ್ ದೋಣಿ ಮುಳುಗಿ ಏಳು ಜನ ಮೃತಪಟ್ಟು, ಹಲವರು ನಾಪತ್ತೆಯಾಗಿರುವ ಘಟನೆ ಮಧ್ಯಪ್ರದೇಶದ ಜಬಲ್ಪುರ ಜಿಲ್ಲೆಯ ಬರಗಿ ಅಣೆಕಟ್ಟೆಯ ಬಳಿ ಇಂದು ಸಂಭವಿಸಿದೆ. 40 ಪ್ರಯಾಣಿಕರಿದ್ದ ಕ್ರೂಸ್ ದೋಣಿ ಬಿರುಗಾಳಿಯಿಂದ ನದಿಯಲ್ಲಿ ಮುಳುಗಿ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಯ ಬೆನ್ನಲ್ಲೇ ರಕ್ಷಣಾ ಕಾರ್ಯಾಚರಣೆ ಆರಂಭಿಸಿ, 18 ಜನರನ್ನು ರಕ್ಷಿಸಿದ್ದೇವೆ. ಆದರೆ ಇನ್ನೂ 15–18 ಜನರು ನಾಪತ್ತೆಯಾಗಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಬರಗಿ ಪಟ್ಟಣ) ಅಂಜುಲ್ ಮಿಶ್ರಾ ಮಾಹಿತಿ ನೀಡಿದ್ದಾರೆ.

ಹಠಾತ್ ಬಿರುಗಾಳಿಯಿಂದಾಗಿ ಕ್ರೂಸ್ ದೋಣಿ ಮುಳುಗಿದಾಗ ಅದರಲ್ಲಿ ಅಂದಾಜು 40 ಜನರಿದ್ದರು. ಸದ್ಯ ನದಿಯಿಂದ ಏಳು ಶವಗಳನ್ನು ಹೊರತೆಗೆಯಲಾಗಿದೆ. ಆದರೆ ಕಾಣೆಯಾದ ಪ್ರಯಾಣಿಕರನ್ನು ಪತ್ತೆ ಹಚ್ಚಲು ಮತ್ತು ರಕ್ಷಿಸಲು ಕಾರ್ಯಾಚರಣೆ ಭರದಿಂದ ಸಾಗುತ್ತಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಕೊಡಲಿಯಿಂದ ಕೊಚ್ಚಿ ಪತ್ನಿ ಕೊಂದು ಪೊಲೀಸರಿಗೆ ಶರಣಾದ ಪತಿ!

ಮೈಸೂರಲ್ಲಿ ಬೆಳ್ಳಂಬೆಳಿಗ್ಗೆ ಘೋರ ಘಟನೆ

ಮೈಸೂರು, ಏ.30(ಎಂಕೆ)– ಶೀಲ ಶಂಕಿಸಿ ಪತ್ನಿಯನ್ನ ಕೊಡಲಿಯಿಂದ ಕೊಚ್ಚಿ ಕೊಲೆಗೈದ ಪತಿ, ಬಳಿಕ ಪೊಲೀಸರಿಗೆ ಶರಣಾಗಿದ್ದಾನೆ. ಈ ಘೋರ ಘಟನೆ ಮೈಸೂರಿನಲ್ಲಿ ಗುರುವಾರ ಬೆಳ್ಳಂಬೆಳಗ್ಗೆ ನಡೆದಿದೆ.



ಪುಷ್ಪಾ

ಹಳೆ ಕೆಸರೆ ನಿವಾಸಿ ಪುಷ್ಪಾ (26) ಪತಿಯಿಂದಲೇ ಕೊಲೆಯಾದ ದುರ್ದೈವಿ. ಬ್ಯೂಟಿ ಪಾರ್ಲರ್ ಹಾಗೂ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಪುಷ್ಪಾಳನ್ನು ಆಕೆಯ ಪತಿ ಮಹೇಶ್ ಕೊಡಲಿಯಿಂದ ಕೊಚ್ಚಿ ಕೊಲೆ ಮಾಡಿದ್ದಾನೆ.

ಒಂದೂವರೆ ವರ್ಷದ ಹಿಂದೆ ಮದುವೆಯಾಗಿ ಹಳೆ ಕೆಸರೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಈ ಜೋಡಿಗೆ ಮಕ್ಕಳಿರಲಿಲ್ಲ. ಮದುವೆಯಾದ ಆರಂಭದಲ್ಲಿ ಬಾರ್‌ನಲ್ಲಿ ಕೆಲಸ ಮಾಡುತ್ತಿದ್ದ ಗಂಡನೊಂದಿಗೆ ಹೊಂದಾಣಿಕೆ ಇಲ್ಲದೆ ಪತಿಯ ಮನೆ ಬಿಟ್ಟು ಬಂದು ರಾಜೀವ್‌ನಗರ 3ನೇ ಹಂತದ ಅಮೃತ ಬಡಾವಣೆಯಲ್ಲಿರುವ ತನ್ನ ತಾಯಿ ಮನೆಗೆ ಪುಷ್ಪಾ ಬಂದಿದ್ದಳು ಎನ್ನಲಾಗಿದೆ.

ಬಳಿಕ ಪುಷ್ಪಾಳಿಗೆ ಬುದ್ಧಿಮಾತು ಹೇಳಿ ಗಂಡನ ಮನೆಗೆ ಕಳುಹಿಸಲಾಗಿತ್ತು. ಬ್ಯೂಟಿ ಪಾರ್ಲರ್‌ಗಳಲ್ಲಿ ಕೆಲಸಕ್ಕೆ ಹೋಗುವುದನ್ನು ಸಹಿಸದ ಮಹೇಶ್, ಪುಷ್ಪಾಳೊಂದಿಗೆ ಆಗಾಗ ಜಗಳವಾಡುತ್ತಿದ್ದು, ಬುಧವಾರ ರಾತ್ರಿಯೂ ಸಾಂಬಾರ್ ಚೆನ್ನಾಗಿಲ್ಲ ಎಂಬ ವಿಚಾರಕ್ಕೆ ಇಬ್ಬರ ನಡುವೆ ಜಗಳವಾಗಿದೆ.

ಮತ್ತೆ ಗುರುವಾರ ಮುಂಜಾನೆ 4 ರಿಂದ 5 ಗಂಟೆ ಸುಮಾರಿಗೆ ಇಬ್ಬರ ನಡುವೆ ಜಗಳವಾಗಿದ್ದು, ಈ ವೇಳೆ ಮಹೇಶ್ ಮನೆಯಲ್ಲಿದ್ದ ಕೊಡಲಿಯಿಂದ ಮಲಗಿದ್ದ ಪುಷ್ಪಾ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ. ಪುಷ್ಪಾ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾಳೆ. ಬಳಿಕ ಆರೋಪಿ ಮಹೇಶ್ ಎನ್.ಆರ್ ಠಾಣೆ ಪೊಲೀಸರಿಗೆ ಶರಣಾಗಿದ್ದಾನೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಎನ್.ಆರ್.ವಿಭಾಗದ ಎಸಿಪಿ ಕೆ.ಟಿ. ಮ್ಯಾಥ್ಯೂಸ್ ಥಾಮಸ್, ಎನ್.ಆರ್.ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಕುಮಾರ್, ಪಿಎಸ್‌ಐ ಗೋಪಾಲ್ ಮತ್ತು ಇನ್ನಿತರೆ ಸಿಬ್ಬಂದಿ ಸ್ಥಳ ಮಹಜರು ನಡೆಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ. ಈ ಸಂಬಂದ ಎನ್.ಆರ್.ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ.

ಆರ್‌ಸಿಬಿ ಮಣಿಸಿದ ಗುಜರಾತ್ ಟೈಟನ್ಸ್

ಅಹಮದಾಬಾದ್, ಏ.30(ವಿವಿಹೆಚ್)– ಬ್ಯಾಟಿಂಗ್ ಹಾಗೂ ಬೌಲಿಂಗ್ ವಿಭಾಗ ಸಾಂಘಿಕ ಹೋರಾಟ ಫಲವಾಗಿ ಅತಿಥೇಯ ಗುಜರಾತ್ ಟೈಟನ್ಸ್, ಬಲಿಷ್ಠ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿತು.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್–2026ರ 42ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು 19.2 ಓವರ್‌ಗಳಲ್ಲಿ ಸರ್ವಪತನ ಕಂಡು 155ರನ್ ಕಲೆಹಾಕಿತು. ಈ ಸಾಧಾರಣ ಮೊತ್ತ ಬೆನ್ನತ್ತಿದ ಗುಜರಾತ್ ಟೈಟನ್ಸ್ 15.5 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 158 ರನ್ ಪೇರಿಸಿತು.



ವಿರಾಟ್ ಕೊಹ್ಲಿ ವಿಕೆಟ್ ಕಿತ್ತ ರಬಾಡರನ್ನು ಸಹ ಆಟಗಾರರು ಅಭಿನಂದಿಸಿದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿಗೆ ಬ್ಯಾಟರ್‌ಗಳು ಕೈಕೊಟ್ಟರು. ದೇವ್‌ದತ್ ಪಡಿಕ್ಕಲ್ 24 ಎಸೆತಗಳಲ್ಲಿ 5ಬೌಂಡರಿ, 2ಸಿಕ್ಸರ್ ಸಹಿತ 40 ರನ್ ಗಳಿಸಿದ್ದು ಬಿಟ್ಟರೆ ಮತ್ತ್ಯಾರಿಂದಲೂ ಉತ್ತಮ ಪ್ರದರ್ಶನ ಕಂಡುಬರಲಿಲ್ಲ. ವಿರಾಟ್ ಕೊಹ್ಲಿ 28(13), ನಾಯಕ ರಜತ್ ಪಾಟಿದರ್ 19(15), ರೋಮರಿಯೋ ಶೇಫರ್ಡ್ 17(15) ರನ್ ಗಳಿಸಿದ್ದೆ ತಂಡದ ಪರವಾಗಿ ಹೆಚ್ಚು ರನ್ ಆಗಿತ್ತು.

ಉಳಿದಂತೆ ಜಾಕೋಬ್ ಬೆಥೆಲ್ 5(5), ಜಿತೇಶ್ ಶರ್ಮಾ 1(3), ಟಿಮ್ ಡೇವಿಡ್ 9(6), ಕೃನಾಲ್ ಪಾಂಡ್ಯ 4(4), ವೆಂಕಟೇಶ್ ಅಯ್ಯರ್ 12(15), ಹೇಜಲ್‌ವುಡ್ ಡಕ್‌ಔಟ್ ಹಾಗೂ ಭುವನೇಶ್ವರ್ ಕುಮಾರ್ ಅಜೇಯ 15(15) ರನ್ ಗಳಿಸಿದರು.

ಜಿಟಿ ಪರ ಅರ್ಷದ್ ಖಾನ್ 3 ವಿಕೆಟ್, ಜಾಸನ್ ಹೋಲ್ಡರ್ ಹಾಗೂ ರಶೀದ್ ಖಾನ್ ತಲಾ 2, ಕಗಿಸೋ ರಬಾಡ, ಮೊಹಮ್ಮದ್ ಸಿರಾಜ್ ಒಂದೊಂದು ವಿಕೆಟ್ ಕಿತ್ತು ಗಮನ ಸೆಳೆದರು.

ಆರ್‌ಸಿಬಿ ನೀಡಿದ ಸಾಧಾರಣ ಮೊತ್ತ ಬೆನ್ನತ್ತಿದ ಗುಜರಾತ್‌ಗೆ ಸಾಯ್ ಸುದರ್ಶನ್ 6(5) ನಿರಾಸೆ ಮೂಡಿಸಿದರು. ಇತ್ತ ಉತ್ತಮವಾಗಿ ಬ್ಯಾಟ್ ಬೀಸಿದ ನಾಯಕ ಶುಭ್‌ಮನ್ ಗಿಲ್ 18 ಎಸೆತ ಎದುರಿಸಿ 4 ಬೌಂಡರಿ, 3 ಸಿಕ್ಸರ್ ಸಹಿತ 43 ರನ್ ಗಳಿಸುವ ಮೂಲಕ ತಂಡಕ್ಕೆ ಆಸರೆಯಾದರು. ಇವರಿಗೆ ಸಾಥ್ ನೀಡಿದ ಜೋಸ್ ಬಟ್ಲರ್ 19 ಎಸೆತಗಳಲ್ಲಿ 39 ರನ್ ಚಚ್ಚಿದರು.

ಮಧ್ಯಮ ಕ್ರಮಾಂಕದಲ್ಲಿ ಆಡಿದ ವಾಷಿಂಗ್ಟನ್ ಸುಂದರ್ 12(12), ಶಾರುಖ್ ಖಾನ್ 8(8), ಜಾಸನ್ ಹೋಲ್ಡರ್ 12(10) ಉತ್ತಮ ಇನ್ನಿಂಗ್ಸ್ ಕಟ್ಟಿಕೊಡಲಿಲ್ಲ.

ಬಳಿಕ ಇಂಪ್ಯಾಕ್ಟ್ ಪ್ಲೇಯರ್ ಆಗಿ ಬಂದ ರಾಹುಲ್ ತೆವಾಟಿಯಾ ಜವಾಬ್ದಾರಿಯುತ ಬ್ಯಾಟಿಂಗ್ ಮಾಡುವ ಮೂಲಕ ತಂಡಕ್ಕೆ ಗೆಲುವು ತಂದು ಕೊಟ್ಟರು. ತೆವಾಟಿಯಾ ಅಜೇಯ 27(17), ರಶೀದ್ ಖಾನ್ ಅಜೇಯ 7(6) ರನ್ ಗಳಿಸಿದರು. ಆರ್‌ಸಿಬಿ ಪರ ಭುವನೇಶ್ವರ್ ಕುಮಾರ್ 3 ವಿಕೆಟ್, ರೊಮಾರಿಯೋ ಶೇಫರ್ಡ್ 2, ಸುಯೇಶ್ ಶರ್ಮಾ ಒಂದು ವಿಕೆಟ್ ಕಿತ್ತರು.

ಮೈಸೂರಲ್ಲಿ ಗುಡುಗು ಮಿಂಚಿನ ಅಬ್ಬರದೊಂದಿಗೆ ವರುಣಾರ್ಭಟ

ಮೈಸೂರು,ಏ.30– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಗುರುವಾರ ರಾತ್ರಿಯೂ ಗುಡುಗು ಮಿಂಚಿನ ಅಬ್ಬರದೊಂದಿಗೆ ಭಾರೀ ಮಳೆಯಾಗಿದೆ.

ಬುಧವಾರ ರಾತ್ರಿ ಸುರಿದ ಮಳೆಗಿಂತಲೂ ಒಂದು ಪಟ್ಟು ಜೋರಾಗಿಯೇ ಗುರುವಾರ ರಾತ್ರಿ ವರುಣ ಅಬ್ಬರಿಸಿದ್ದಾನೆ. ಮೈಸೂರಿನ ಹೃದಯಭಾಗ ಮಾತ್ರವಲ್ಲದೆ, ಆರ್‌ಟಿ ನಗರ, ಜೆಪಿ ನಗರ, ವಿದ್ಯಾರಣ್ಯಪುರಂ ಶ್ರೀರಾಂಪುರ, ಬೋಗಾದಿ, ರಾಮಕೃಷ್ಣನಗರ ಮೊದಲಾದೆಡೆ ಧಾರಾಕಾರ ಮಳೆಯಾಗಿದೆ.

ನಗರದ ಕೆಆರ್ ವೃತ್ತ, ಚಾಮರಾಜ ವೃತ, ಸಯ್ಯಾಜಿರಾವ್ ರಸ್ತೆ ಸೇರಿದಂತೆ ನಗರದ ಹೃದಯ ಭಾಗದ ರಸ್ತೆಗಳು ಹಾಗೂ ವಿವಿಧ ಬಡಾವಣೆಗಳ ರಸ್ತೆಗಳಲ್ಲಿ ತಗ್ಗು ಪ್ರದೇಶಗಳು ಮಳೆ ನೀರಿನಿಂದ ಜಲಾವೃತಗೊಂಡಿದ್ದವು. ಗಾಳಿ ಪರಿಣಾಮ ಕೆಲವೆಡೆ ಮರದ ಕೊಂಬೆಗಳು ಮುರಿದು ಬಿದ್ದಿದ್ದವು.

ಅಲ್ಲದೆ, ವಿವಿಧ ಕಾಮಗಾರಿಗಾಗಿ ರಸ್ತೆಬದಿಗಳಲ್ಲಿ ತೆಗೆದಿದ್ದ ಗುಂಡಿಗಳು ಮಳೆ ನೀರಿನಿಂದ ಆವೃತ್ತಗೊಂಡು ರಾತ್ರಿ ಪಾಳಿಯಲ್ಲಿ ವಿವಿಧೆಡೆ ಕೆಲಸ ನಿರ್ವಹಿಸುವ ಉದ್ಯೋಗಸ್ಥರು ಸಂಚಾರಕ್ಕೆ ಪರದಾಡಬೇಕಾಯಿತು.

ಕುವೆಂಪುನಗರದಲ್ಲಿ ಮರದ ಕೊಂಬೆಯೊಂದು ಮರಿದು, ಪಕ್ಕದಲ್ಲಿದ್ದ ಮನೆಯ ಮೇಲೆ ಒರಗಿತ್ತು. ಅಲ್ಲದೆ, ನಗರದ ಹೃದಯಭಾಗವಾದ ಆರ್‌ಟಿಓ (09) ಸರ್ಕಲ್‌ನಲ್ಲಿ ಮರದ ಕೊಂಬೆಯೊಂದು ನೆಲಕ್ಕುರುಳಿತ್ತು. ಹಲವೆಡೆ ಇದೇ ರೀತಿ ಕೊಂಬೆಗಳು ಮುರಿದು ಬಿದ್ದಿದ್ದವು. ಪಾಲಿಕೆ ಅಭಯ ತಂಡದವರು ಕಾರ್ಯಾಚರಣೆ ನಡೆಸಿ ಆ ಕೊಂಬೆಗಳನ್ನು ತೆರವುಗೊಳಿಸಿದರು. ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯಂತೆ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಮೇ 5ರವರೆಗೆ ಮಳೆಯಾಗುವ ಸಾಧ್ಯತೆ ಇದೆ.

ಜಲಜೀವನ್ ಮಿಷನ್ ಯೋಜನೆಯಡಿ ರಾಜ್ಯದಲ್ಲಿ ಕೇವಲ ಶೇ.14 ಆರ್ಥಿಕ ಪ್ರಗತಿ

ಸಿಎಂ ಸಿದ್ದರಾಮಯ್ಯರಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಪತ್ರ

ನವದೆಹಲಿ: ಜಲಜೀವನ್ ಮಿಷನ್ ಯೋಜನೆಯಡಿ ಕರ್ನಾಟಕದಲ್ಲಿ 66.344 ಯೋಜನೆಗಳ ಪೈಕಿ 24.888 (ಶೇ.35) ಯೋಜನೆಗಳಷ್ಟೇ ಪೂರ್ಣಗೊಂಡಿವೆ ಎಂದು ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ್ ವಿ.ಸೋಮಣ್ಣ ಆರೋಪಿಸಿದ್ದಾರೆ.



ರಾಜ್ಯದಲ್ಲಿ ಯೋಜನೆಯ ಪ್ರಗತಿಯ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಗುರುವಾರ ಪತ್ರ ಬರೆದಿರುವ ಅವರು, ರಾಜ್ಯದಲ್ಲಿ ಆರ್ಥಿಕವಾಗಿ ಕೇವಲ 9,325 ಯೋಜನೆಗಳು ಮುಗಿದಿದ್ದು, ಶೇ 14ರಷ್ಟು ಪ್ರಗತಿ ಆಗಿದೆ ಎಂದು ದೂರಿದ್ದಾರೆ.

ಯೋಜನೆಯಡಿ 2019ರಿಂದ 2024ರ ವರೆಗೆ ರಾಜ್ಯಕ್ಕೆ ಕೇಂದ್ರವು 28,623 ಕೋಟಿ ಹಂಚಿಕೆ ಮಾಡಿತ್ತು. ಆದರೆ, ನಿಧಾನ ಗತಿಯ ಕಾಮಗಾರಿ ಹಾಗೂ ಸಕಾಲಕ್ಕೆ ದಾಖಲೆಗಳನ್ನು ಸಲ್ಲಿಸದ ಕಾರಣಕ್ಕೆ 11,152 ಕೋಟಿ ಮಾತ್ರ ಬಿಡುಗಡೆ ಆಗಿದೆ. ಪಾಲಿನ ಉಳಿದ 16,863 ಕೋಟಿ ಬಳಸಿಕೊಳ್ಳುವಲ್ಲಿ ರಾಜ್ಯ ವಿಫಲವಾಗಿದೆ. ಕಾಂಗ್ರೆಸ್ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಜೆಜೆಎಂ ಪ್ರಗತಿಯಲ್ಲಿ ರಾಜ್ಯ 22ನೇ ಸ್ಥಾನದಲ್ಲಿದೆ ಎಂದು ಅವರು ದೂರಿದ್ದಾರೆ.

2019ರಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ನಲ್ಲಿ ನೀರಿನ ಸಂಪರ್ಕ ಶೇ 24ರಷ್ಟು ಇತ್ತು. ಈಗ ಶೇ 86ರಷ್ಟಕ್ಕೆ ಏರಿಕೆಯಾಗಿದೆ. ನೂತನ ಸಂಪರ್ಕ ಕಲ್ಪಿಸುವಲ್ಲಿ ಗಮನಾರ್ಹ ಸಾಧನೆ ಆಗಿದ್ದರೂ ಹರ್ ಘರ್ ಜಲ್ ಸರ್ಟಿಫಿಕೇಷನ್ ಅತೀ ಕಡಿಮೆ ಇದೆ 26,591 ಹಳ್ಳಿಗಳ ಪೈಕಿ ಕೇವಲ 6,986 ಹಳ್ಳಿಗಳು ಪ್ರಮಾಣಪತ್ರ ಪಡೆದಿವೆ. ರಾಜ್ಯದ ಯಾವುದೇ ಜಿಲ್ಲೆಗೆ ಪ್ರಮಾಣಪತ್ರ ಸಿಕ್ಕಿಲ್ಲ. ಇದು ರಾಜ್ಯ ಸರ್ಕಾರದ ಕಾರ್ಯವೈಖರಿಗೆ ಸಾಕ್ಷಿ ಎಂದು ಅವರು ಆರೋಪಿಸಿದ್ದಾರೆ.

26 ಯೋಜನೆಗಳಿಗೆ ಕಾರ್ಯಾದೇಶ ನೀಡದ ರಾಜ್ಯ: 66,344 ಯೋಜನೆಗಳ ಪೈಕಿ 1,716 ಕೋಟಿ ಮೊತ್ತದ 26 ಯೋಜನೆಗಳಿಗೆ 2024ರ ಮಾರ್ಚ್ ಅಂತ್ಯದೊಳಗೆ ರಾಜ್ಯ ಸರ್ಕಾರ ಕಾರ್ಯಾದೇಶ ನೀಡಿಲ್ಲ. ಇದು ರಾಜ್ಯ ಸರ್ಕಾರದ ವೈಫಲ್ಯಕ್ಕೆ ಉದಾಹರಣೆ. ಹಲವಾರು ದೂರುಗಳು ಬಂದ ಕಾರಣ ಪರಿಶೀಲನೆಗೆ ರಾಜ್ಯಕ್ಕೆ ತಂಡ ಕಳುಹಿಸಲಾಗಿತ್ತು. ಈ ತಂಡವು ರಾಜ್ಯದ ಹಲವು ಲೋಪಗಳನ್ನು ಪತ್ತೆ ಹಚ್ಚಿದೆ. ಯೋಜನಾ ವೆಚ್ಚದ ಅನವಶ್ಯಕ ಹೆಚ್ಚಳ, ವಿನ್ಯಾಸ ಅಥವಾ ತಾಂತ್ರಿಕ ಅಂಶಗಳಲ್ಲಿ ಬದಲಾವಣೆ, ಕಾನೂನಾತ್ಮಕ ಅನುಮತಿ ವಿಳಂಬ ಸೇರಿದಂತೆ ಹಲವು ಲೋಪಗಳು ಆಗಿವೆ. ಈ ಎಲ್ಲ ಅಂಶಗಳನ್ನು ಮುಚ್ಚಿಟ್ಟು ಕೇಂದ್ರದ ವಿರುದ್ಧ ಆರೋಪ ಮಾಡುವುದು ಸರಿಯಲ್ಲ ಎಂದಿದ್ದಾರೆ.

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಕುಸಿದು 7 ಮಂದಿ ಸಾವಿನ ಪ್ರಕರಣ

ಮುಖ್ಯಕಾರ್ಯದರ್ಶಿ, ಜಿಬಿಎ ಆಯುಕ್ತ ಇತರರ ವಿರುದ್ಧ ಲೋಕಾಯುಕ್ತ ಕೇಸ್‌ಗೆ ನಿರ್ಧಾರ

ದುರಂತ ನಡೆದ ಸ್ಥಳಕ್ಕೆ ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್ ಭೇಟಿ; ಉನ್ನತ ಅಧಿಕಾರಿಗಳೇ ದುರಂತಕ್ಕೆ ಹೊಣೆ!

ಬೆಂಗಳೂರು, ಏ.30– ಸಿಲಿಕಾನ್ ಸಿಟಿಯನ್ನು ಬೆಚ್ಚಿ ಬೀಳಿಸಿದ ಬೌರಿಂಗ್ ಆಸ್ಪತ್ರೆಯ ತಡೆಗೋಡೆ ಕುಸಿತದ ಭೀಕರ ದುರಂತವನ್ನು ಲೋಕಾಯುಕ್ತ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಏಳು ಮಂದಿಯ ಬಲಿ ತೆಗೆದುಕೊಂಡ ಈ ಘಟನೆಗೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿದೆ.

ಇಂದು ಮಧ್ಯಾಹ್ನ ಲೋಕಾಯುಕ್ತ ನ್ಯಾ. ಬಿ.ಎಸ್.ಪಾಟೀಲ್, ದುರಂತ ಸಂಭವಿಸಿದ ಬೌರಿಂಗ್ ಆಸ್ಪತ್ರೆಯ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಲೋಕಾಯುಕ್ತರು, ಅಧಿಕಾರಿಗಳ ಬೇಜವಾಬ್ದಾರಿತನದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಇದು ಅಕ್ಷರಶಃ ನಿರ್ಲಕ್ಷ್ಯದ ಪರಮಾವಧಿ. ಸಾರ್ವಜನಿಕರು ಓಡಾಡುವ ಜಾಗದಲ್ಲಿ ಇಂತಹ ಘಟನೆ ನಡೆಯಬಾರದಿತ್ತು. ಜಿಬಿಎ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ಪಷ್ಟ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂದು ನ್ಯಾ. ಬಿ.ಎಸ್. ಪಾಟೀಲ್ ಸಿಟ್ಟು ಹೊರಹಾಕಿದರು.

ಹಿರಿಯ ಅಧಿಕಾರಿಗಳೇ ಇನ್ನು ಆರೋಪಿಗಳು: ಈ ದುರಂತಕ್ಕೆ ಸಂಬಂಧಿಸಿದಂತೆ ಕೇವಲ ಕೆಳಹಂತದ ಸಿಬ್ಬಂದಿಯನ್ನಲ್ಲ, ಬದಲಿಗೆ ಆಡಳಿತ ಯಂತ್ರದ ಉನ್ನತ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲು ಲೋಕಾಯುಕ್ತ ನಿರ್ಧರಿಸಿದೆ. ಈ ನಿಟ್ಟಿನಲ್ಲಿ ಲೋಕಾಯುಕ್ತರು ಅತ್ಯಂತ ಮಹತ್ವದ ಘೋಷಣೆ ಮಾಡಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಬಿಎ ಮುಖ್ಯ ಆಯುಕ್ತ ಎಂ ಮಹೇಶ್ವರ ರಾವ್, ನಗರದ ಐದೂ ಪಾಲಿಕೆಗಳ ಆಯುಕ್ತರು, ಬೆಂಗಳೂರು ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಜಲ ಮಂಡಳಿ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳನ್ನು ಆರೋಪಿಗಳನ್ನಾಗಿ ಮಾಡಲಾಗಿದೆ.



ದುರಂತ ನಡೆದ ಸ್ಥಳಕ್ಕೆ ಲೋಕಾಯುಕ್ತ ನ್ಯಾ ಬಿ.ಎಸ್.ಪಾಟೀಲ್ ಭೇಟಿ ನೀಡಿ ಪರಿಶೀಲಿಸಿದರು.

ನಾವು ಎಲ್ಲರನ್ನೂ ಪಾರ್ಟಿ ಮಾಡಿ ಕೇಸ್ ನಡೆಸುತ್ತೇವೆ. ಯಾರೇ ಆಗಿರಲಿ, ವಿಧಾನಸಭಾ ಸದಸ್ಯರಾಗಿದ್ದರೂ ಸರಿಯೇ, ತಪ್ಪು ಮಾಡಿದ್ದರೆ ಕ್ರಮ ಆಗೇ ಆಗುತ್ತದೆ. ಶೀಘ್ರದಲ್ಲೇ ಎಲ್ಲರಿಗೂ ಸಮನ್ಸ್ ಜಾರಿ ಮಾಡಿ ವಿಚಾರಣೆಗೆ ಹಾಜರಾಗಲು ಸೂಚಿಸುತ್ತೇವೆ ಎಂದು ಗುಡುಗಿದರು.

ಒಂದೇ ಮಳೆಗೆ ಇಷ್ಟೆಲ್ಲಾ ಅವಾಂತರಗಳಾಗುತ್ತಿದ್ದರೂ ಜಿಬಿಎ ಮತ್ತು ಜಲ ಮಂಡಳಿ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಮರದ ರೆಂಬೆಗಳನ್ನು ತೆರವುಗೊಳಿಸುವಂತಹ ಪ್ರಾಥಮಿಕ ಕೆಲಸಗಳು ಏಕಾಗಿಲ್ಲ. ಗೋಡೆಗಳು ಶಿಥಿಲವಾಗಿದ್ದರೂ ವ್ಯಾಪಾರಕ್ಕೆ ಅನುಮತಿ ನೀಡಿದ್ದು ಯಾಕೆ. ವಿದ್ಯುತ್ ಹೊಡೆದು ಸಾವು ಸಂಭವಿಸಿದ ಪ್ರಕರಣಗಳಲ್ಲೂ ಯಾರೂ ಜವಾಬ್ದಾರಿ ತೆಗೆದುಕೊಂಡಿಲ್ಲವೇಕೆ. ವೈದ್ಯಕೀಯ ಶಿಕ್ಷಣ ಇಲಾಖೆಯು ಈ ತಡೆಗೋಡೆಯ ಬಗ್ಗೆ ಯಾವುದೇ ಗಮನ ಹರಿಸಿರಲಿಲ್ಲವೇ ಎಂದು ಪ್ರಶ್ನೆ ಕೇಳಿದ್ದಾರೆ. ದುರಂತಕ್ಕೆ ಸಂಬಂಧಿಸಿದಂತೆ ತಕ್ಷಣವೇ ವೈದ್ಯಕೀಯ ಶಿಕ್ಷಣ ಇಲಾಖೆಯಿಂದ ವರದಿ ಕೇಳಲಾಗಿದ್ದು, ಶೀಘ್ರದಲ್ಲೇ ವರದಿ ಸಲ್ಲಿಸಲು ಸೂಚಿಸಲಾಗಿದೆ. ಅಷ್ಟೇ ಅಲ್ಲದೆ, ನಗರದಲ್ಲಿರುವ ಇಂತಹ ಇತರ ಶಿಥಿಲಾವಸ್ಥೆಯ ಕಟ್ಟಡಗಳು ಮತ್ತು ಗೋಡೆಗಳನ್ನು ಗುರುತಿಸಿ ತಕ್ಷಣವೇ ತೆರವುಗೊಳಿಸಲು ಲೋಕಾಯುಕ್ತರು ಖಡಕ್ ಸೂಚನೆ ನೀಡಿದ್ದಾರೆ.

ಬೆಂಗಳೂರು ಪುಟ್‌ಪಾತ್‌ನಲ್ಲಿ ವ್ಯಾಪಾರಕ್ಕೆ ಬ್ರೇಕ್!



ಫೈಲ್ ಚಿತ್ರ

ಬೆಂಗಳೂರು, ಏ.30–ಬುಧವಾರ ಸಂಜೆ 1 ಗಂಟೆ ಅಬ್ಬರಿಸಿದ ಬಿರುಗಾಳಿ, ಆಲಿಕಲ್ಲು ಸಹಿತ ಮಳೆ ಬೆಂಗಳೂರಿನಲ್ಲಿ ಸಾಲು ಸಾಲು ಅವಘಡಗಳನ್ನು ಸೃಷ್ಟಿಸಿದೆ. ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ಕಾಂಪೌಂಡ್ ಕುಸಿದು ಒಂದು ಮಗು ಸೇರಿ 7 ಮಂದಿ ಉಸಿರು ಚೆಲ್ಲಿದ್ದಾರೆ. ವ್ಯಾಪಾರ ಮಾಡುತ್ತಿದ್ದವರು, ಖರೀದಿ ಮಾಡಲು ಬಂದಿದ್ದವರು ಸಾವಿನ ಮನೆ ಸೇರಿದ್ದಾರೆ. ಈ ಬೆನ್ನಲ್ಲೇ ಇನ್ಮುಂದೆ ಫುಟ್‌ಪಾತ್‌ನಲ್ಲಿ ಯಾರೂ ವ್ಯಾಪಾರ ಮಾಡುವಂತಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಡಕ್ ಸೂಚನೆ ನೀಡಿದ್ದಾರೆ. ನಗರದಲ್ಲಿ ಸುರಿದ ಭಾರೀ ಮಳೆಯಿಂದಾಗಿ ಹಲವೆಡೆ ಅವಾಂತರಗಳು ಸೃಷ್ಟಿ ಹಿನ್ನೆಲೆ ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ಮಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ರಸ್ತೆ ಮೇಲೆ ಬಿದ್ದಿರುವ ಮರದ ಕೊಂಬೆ ತೆರವು ಮಾಡಲು ಪೊಲೀಸರಿಗೆ ಈಗಾಗಲೇ ನಿರ್ದೇಶನವನ್ನೂ ನೀಡಿದ್ದೇನೆ. ನಗರದಾದ್ಯಂತ ಇರುವ ಸಮಸ್ಯೆ ಪಟ್ಟಿ ಮಾಡಲಾಗಿದೆ. ಎಲ್ಲಾ ಮಾಹಿತಿಯನ್ನ ಈಗ ಕಂಟ್ರೋಲ್ ರೂಂನಲ್ಲಿ ಕಲೆ ಹಾಕಿದ್ದಾರೆ. ಗೋಡೆ ಕುಸಿತ ಕೇಸ್‌ನಲ್ಲಿ ಅಧಿಕಾರಿ ನಿರ್ಲಕ್ಷ ಇದೆ ಎನ್ನಲ್ಲ. ಇನ್ಮುಂದೆ ಫುಟ್‌ಪಾತ್‌ನಲ್ಲಿ ಯಾರೂ ವ್ಯಾಪಾರ ಮಾಡುವಂತಿಲ್ಲ ಎಂದು ಸೂಚಿಸಿದ್ದೇನೆ ಎಂದರು.

ಕಾರ್ಯನಿರ್ವಾಹಕ ಇಂಜಿನಿಯರ್ ಅಮಾನತಿಗೆ ಸಿಎಂ ಸೂಚನೆ

ಬೆಂಗಳೂರು, ಏ.30– ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿದು ಏಳು ಜನರ ಸಾವಿನ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರ್‌ನನ್ನು ಅಮಾನತುಗೊಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.



ಭಾರೀ ಮಳೆಯಿಂದ ಬೌರಿಂಗ್ ಆಸ್ಪತ್ರೆ ದುರಂತದ ಹಿನ್ನೆಲೆಯಲ್ಲಿ ಇಂದು ಜಿಬಿಎ ಆಯುಕ್ತರ ಜೊತೆ ಸಭೆ ನಡೆಸಿದ ಸಿದ್ದರಾಮಯ್ಯ, ಗೋಡೆಗೆ ಹಾನಿ ಆಗಲಿದೆ ಎಂದು ತಿಳಿದಿದ್ದರೂ ಕಾಮಗಾರಿ ನಡೆಯುವಾಗ ಮಣ್ಣು ಸುರಿದದ್ದು ಏಕೆ ಎಂದು ಪ್ರಶ್ನಿಸಿದರು. ಗೋಡೆಗೆ ಹಾನಿಯಾಗುವಂತೆ ಮಣ್ಣು ಸುರಿದದ್ದು ನೀವು ಏಕೆ ನೋಡಿಕೊಳ್ಳಲಿಲ್ಲ ಎಂದು ಆಸ್ಪತ್ರೆ ಮುಖ್ಯಸ್ಥರನ್ನು ಮುಖ್ಯಮಂತ್ರಿಗಳು ಪ್ರಶ್ನಿಸಿದರು. ಬೌರಿಂಗ್ ಆಸ್ಪತ್ರೆ ಮುಖ್ಯಸ್ಥರಿಗೆ ನೋಟಿಸ್ ನೀಡಲು ಸಹ ಸೂಚಿಸಿದರು.

ಮುಂಗಾರು ಮಳೆ ಪ್ರಾರಂಭವಾಗುವ ಮೊದಲೇ ಅಗತ್ಯ ಸಿದ್ಧತೆಗಳನ್ನು ಮಾಡಿ ಕೊಳ್ಳಬೇಕು. ಬೆಂಗಳೂರಿನ ಐದೂ ವಲಯಗಳ ಆಯುಕ್ತರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಒಣಗಿರುವ ಅಪಾಯಕಾರಿ ಮರಗಳ ರೆಂಬೆಗಳನ್ನು ಕತ್ತರಿಸಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು. ಮುಂದಿನ ದಿನಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಗಳಿದ್ದು ರಾಜಕಾಲುವೆಗಳಲ್ಲಿ ಹೂಳು ತೆಗೆಯುವುದು, ಪ್ರವಾಹ ಉಂಟಾಗದಂತೆ ಕ್ರಮ ತೆಗೆದುಕೊಳ್ಳಬೇಕು ಎಂದರು. ಮಳೆಯಿಂದ ರಸ್ತೆಯಲ್ಲಿ ಬಿದ್ದಿರುವ ಕಸ, ರೆಂಬೆಗಳನ್ನು ಕೂಡಲೇ ತೆರವು ಮಾಡಲು ಸೂಚಿಸಿದರು. ಅಂಡರ್ ಪಾಸ್‌ಗಳಲ್ಲಿ ಮಳೆ ನೀರು ನಿಲ್ಲದಂತೆ ಹಾಗೂ ಜನ ಅಂಡರ್ ಪಾಸ್ ಬಳಸದಂತೆ ಕೂಡಲೇ ಬ್ಯಾರಿಕೇಡ್ ಹಾಕಿ ಎಂದು ಅವರು ಸೂಚಿಸಿದರು.

ನಕ್ಕರೆ ಅದೇ ಸ್ವರ್ಗ

ರೋಗಿ : ನನಗೆ ಮೂರು ತಿಂಗಳಿಂದ ಕೆಮ್ಮು ಇದೆ.
ಡಾಕ್ಟರ್ : ಇಷ್ಟು ದಿನ ಏನ್ ಮಾಡ್ತಾ ಇದ್ರಿ?
ರೋಗಿ : ಡಾಕ್ಟರೇ, ಕೆಮ್ತಾ ಇದ್ದೆ...

ಮೈಸೂರು ಮಿತ್ರ

ಶುಕ್ರವಾರ, ಮೇ 1, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಪ್ರತಿ ಅಂತ್ಯದಲ್ಲೂ ಒಂದು ಶುಭ ಆರಂಭದ ಸಂಕೇತವಿರುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಸಲುಗೆ ಕೊಟ್ಟರೆ ಸಾಕೂ ಹೆಗ್ಗಣವೂ ಸಹ ಏರುವುದು ಹೆಗಲಿಗೆ.

ನಿಮ್ಮ ಪತ್ರಗಳು

ಮನೆಗಣತಿ ಮಾಡುತ್ತಿರುವ ಗಣತಿದಾರರ ಸಂಕಷ್ಟಕ್ಕೆ ಸ್ಪಂದಿಸಿ

ಮಾನ್ಯರೆ,

ಈ ಬಾರಿಯ ಮನೆ ಗಣತಿ (Census) ಕಾರ್ಯದಲ್ಲಿ ತೊಡಗಿರುವ ಗಣತಿದಾರರು ವಿಶೇಷವಾಗಿ ಶಿಕ್ಷಕರು ಮತ್ತು ಸರ್ಕಾರಿ ನೌಕರರು, ಹಲವು ರೀತಿಯ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ಅಪರಿಚಿತ ಮನೆಗಳಿಗೆ, ವಿಶೇಷವಾಗಿ ಅಸುರಕ್ಷಿತ ಪ್ರದೇಶಗಳಿಗೆ ಹೋಗುವುದು, ಬೀದಿ ನಾಯಿಗಳ ಕಾಟ ಮತ್ತು ವಿಪರೀತ ಬಿಸಿಲಿನ ತಾಪದ ನಡುವೆ ಕೆಲಸ ಮಾಡುವುದು ಕಷ್ಟಕರವಾಗಿದೆ.

ದೇಶಾದ್ಯಂತ ಈಗ ಬಿಸಿಲಿನ ತೀವ್ರತೆ ಹೆಚ್ಚಿದೆ. ಮಧ್ಯಾಹ್ನದ ವೇಳೆ ಹೊರಗೆ ಹೋಗಲು ಸಾಧ್ಯವಾಗುತ್ತಿಲ್ಲ. ಬಿಸಿಲ ಝಳದಿಂದ ಜನರು ಬಳಲಿ ಬೆಂಡಾಗುತ್ತಿದ್ದಾರೆ. ಈ ನಡುವೆ ಜನಗಣತಿ ಕಾರ್ಯದಲ್ಲಿ ತೊಡಗಿದ್ದ ಇಬ್ಬರು ಶಾಲಾ ಶಿಕ್ಷಕರು ಬಿಸಿಲಿನ ಹೊಡೆತದಿಂದ ಮೃತಪಟ್ಟಿರುವುದು ಆಘಾತಕಾರಿ ಸಂಗತಿ. ಬಿಸಿಲು, ಸೆಖೆಯಲ್ಲಿ ಕೆಲಸ ಮಾಡುವ ಜನಗಣತಿದಾರರಿಗೆ ಸರ್ಕಾರವು ಪ್ರಾಮಾಣಿತ ಕಾರ್ಯಾಚರಣೆ ಕಾರ್ಯವಿಧಾನವನ್ನು ಹೊರಡಿಸುವುದು ಅಗತ್ಯವಿದೆ. ಹೆಚ್ಚುತ್ತಿರುವ ತಾಪಮಾನದಿಂದಾಗಿ ಅವರು ಬೆಳಗ್ಗೆ 11 ರಿಂದ ಮಧ್ಯಾಹ್ನ 3 ರವರೆಗೆ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದನ್ನು ನಿಷೇಧಿಸಿ, ದಿನಕ್ಕೆ ಇಂತಿಷ್ಟು ಮನೆಗಳ ಮನೆಗಣತಿ ಮಾಡಲೇಬೇಕೆಂಬ ಒತ್ತಾಯವನ್ನು ಯಾರು ಕೂಡ ಮಾಡದೇ, ಗಣತಿದಾರರು ಒತ್ತಡರಹಿತವಾಗಿ ನಿಗದಿಪಡಿಸಿದ ಒಂದು ತಿಂಗಳೊಳಗೆ ತಮಗೆ ವಹಿಸಿದ ಜವಾಬ್ದಾರಿಯನ್ನು ನಿರ್ವಹಿಸಲು ಮುಕ್ತ ಅವಕಾಶ ನೀಡಬೇಕಿದೆ. ಅಲ್ಲದೆ ಪ್ರತಿನಿತ್ಯ ಬಿಸಿಲಲ್ಲಿ ಸುತ್ತಾಡುವ ಗಣತಿದಾರರಿಗೆ ಸರ್ಕಾರ ಕೊಡೆ (ಛತ್ರಿ), ಟೋಪಿ, ಕುಡಿಯುವ ನೀರಿನ ಬಾಟೆಲ್ ಹಾಗೂ ಓರಲ್ ರೀಹೈಡ್ರೇಷನ್ ಸೊಲ್ಯೂಷನ್ (ORS) ಒಳಗೊಂಡಂತಹ ಕಿಟ್ ಅನ್ನು ಒದಗಿಸುವುದು ಅಗತ್ಯ. ಏಕೆಂದರೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಈಗಾಗಲೇ ಮನೆಗಣತಿ ಆರಂಭವಾಗಿ 15 ದಿನಗಳೇ ಕಳೆಯುತ್ತಾ ಬಂದರು ಇನ್ನೂ ಗಣತಿದಾರರಿಗೆ ಕಿಟ್‌ನ ಸೌಲಭ್ಯ ಒದಗಿಸದಿರುವುದು ದುರ್ದೈವದ ಸಂಗತಿ. ಹೀಗಾಗಿ ಸರ್ಕಾರ ಗಣತಿದಾರರಿಗೆ ಸೂಕ್ತ ಸೌಲಭ್ಯ ಒದಗಿಸಿ ಅವರಿಗೆ ಮನೆಗಣತಿ ಸಮಯದಲ್ಲಿ ಯಾವುದೇ ತೊಂದರೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ವಿದ್ಯಾರ್ಥಿಗಳ ಸಮಸ್ಯೆ ಅರಿತು ಸ್ಥಳಾಂತರಿಸಿ

ಮಾನ್ಯರೆ,

ಮೈಸೂರು ಶಕ್ತಿ ನಗರದ ತ್ರಿವೇಣಿ ವೃತ್ತದ ಸಮೀಪದಲ್ಲಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ದೀನ್ ದಯಾಳ್ ಉಪಾಧ್ಯಾಯ ಸೌಹಾರ್ದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಒಂದು ಕೊಠಡಿಯಲ್ಲಿ 06 ವಿದ್ಯಾರ್ಥಿಗಳಿದ್ದು ಪ್ರತ್ಯೇಕ ಸ್ನಾನದ ಕೊಠಡಿ, ಶುಚಿತ್ವ, ಗ್ರಂಥಾಲಯ ಮುಂತಾದ ಮೂಲಭೂತ ವ್ಯವಸ್ಥೆಗಳಿಲ್ಲದೆ ವಿದ್ಯಾರ್ಥಿಗಳಿಗೆ ಶೈಕ್ಷಣಿಕಾಭಿವೃದ್ಧಿಗೆ ತೊಡಕು ಉಂಟಾಗಿದೆ. ಕೊಠಡಿಗಳ ಕೊರತೆ ಅರಿತ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಹೊಸ ವಿದ್ಯಾರ್ಥಿ ನಿಲಯವನ್ನು ನಗರದ ಮಾನಸಗಂಗೋತ್ರಿ ಕ್ಯಾಂಪಸ್ ಹತ್ತಿರದಲ್ಲಿ ನಿರ್ಮಾಣ ಮಾಡಿದೆ. ಎಲ್ಲಾ ಸೌಕರ್ಯಗಳಿರುವ ಹೊಸ ವಿದ್ಯಾರ್ಥಿನಿಲಯಕ್ಕೆ ನಮ್ಮನ್ನು ಸ್ಥಳಾಂತರಿಸಲು ಕೋರಿದರೂ ಯಾವ ಸ್ಥಳೀಯ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸದೇ ವಿಳಂಬ ಮಾಡುತ್ತಿದ್ದಾರೆ. ಆದ್ದರಿಂದ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಈ ಕೂಡಲೇ ಸ್ಥಳಕ್ಕೆ ಭೇಟಿ ಕೊಟ್ಟು ವಿದ್ಯಾರ್ಥಿಗಳ ಸಮಸ್ಯೆಯನ್ನು ಅರಿತು ಕೂಡಲೇ ಸ್ಥಳಾಂತರ ಪ್ರಕ್ರಿಯೆ ಕೈಗೊಳ್ಳಲಿ.

–ನೊಂದ ವಿದ್ಯಾರ್ಥಿಗಳು, ದೀನ್ ದಯಾಳ್ ಉಪಾಧ್ಯಾಯ ಸೌಹಾರ್ದ ವಿದ್ಯಾರ್ಥಿ ನಿಲಯ, ಶಕ್ತಿನಗರ, ಮೈಸೂರು.

ಕೂಡ್ಲಾಪುರದಲ್ಲಿ ರಸ್ತೆ ಸರಿಪಡಿಸಿ ಡಾಂಬರು ಹಾಕಿಸಿ, ಕೆರೆಗಳಿಗೆ ನೀರು ತುಂಬಿಸಿ

ಮಾನ್ಯರೆ,

ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು ಕೂಡ್ಲಾಪುರ ಗ್ರಾಮದಲ್ಲಿ ರಸ್ತೆ ಹದಗೆಟ್ಟು ತುಂಬಾ ದಿನಗಳಾಗಿದೆ. ರಸ್ತೆ ಡಾಂಬರು ಕಾಣದೆ ಧೂಳುಮಯವಾಗಿದೆ. ಈ ರಸ್ತೆಯಲ್ಲಿ ಸುಮಾರು ಗ್ರಾಮಗಳು ಹಾದು ಹೋಗುತ್ತವೆ. ಈ ರಸ್ತೆ ಮಾರ್ಗದಲ್ಲಿ ಸಂಚರಿಸುವ ವಾಹನ ಸವಾರರಿಗೆ ತೀವ್ರ ತೊಂದರೆಯಾಗಿದೆ. ರಸ್ತೆ ಗುಂಡಿಗಳಿಂದಾಗಿ ಸವಾರರು ಬಿದ್ದು ಅಪಘಾತಗಳಾಗುತ್ತಿವೆ. ಕೂಡ್ಲಾಪುರ ಸುತ್ತಮುತ್ತಲಿನ ಗ್ರಾಮಗಳಿದ್ದು, ಭಾರೀ ವಾಹನಗಳು ಪ್ರತಿನಿತ್ಯ ಸಂಚರಿಸುತ್ತಿರುವ ರಸ್ತೆ ತುಂಬಾ ಹಾಳಾಗಿರುತ್ತದೆ. ಮಳೆ ಬಂದರೆ ಕೇಳಲೇಬೇಡಿ. ರಸ್ತೆಗೆ ಮಣ್ಣು ತುಂಬಿಕೊಳ್ಳುತ್ತದೆ. ಒಟ್ಟಿನಲ್ಲಿ ಸಾರ್ವಜನಿಕರು ಪ್ರಯಾಸದಿಂದ ಸಂಚರಿಸಬೇಕಿದೆ.

ಗ್ರಾಮದಲ್ಲಿ ಸುಮಾರು ಕೆರೆಕಟ್ಟೆಗಳಿದ್ದರೂ ನೀರಿಲ್ಲದೆ ಬತ್ತಿ ಹೋಗಿವೆ. ಇದರಿಂದ ದನಕರುಗಳಿಗೆ ಕುಡಿಯುವ ನೀರಿನ ಅಭಾವ. ಈ ಗ್ರಾಮವು ಅನಾದಿ ಕಾಲದಿಂದಲೂ ನೀರಿನ ಸಮಸ್ಯೆಯಿಂದ ಬಳಲುತ್ತಿದೆ. ಬೇರೆ ಬೇರೆ ಗ್ರಾಮಗಳಿಗೆ ಪೈಪು ಅಳವಡಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಆದರೆ ಈ ಗ್ರಾಮಕ್ಕೆ ಯಾವ ನೀರಿನ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ ಹದಗೆಟ್ಟಿರುವ ರಸ್ತೆಗೆ ಡಾಂಬರು ಹಾಕಿಸಿ, ಕೆರೆಗಳಿಗೆ ದೊಡ್ಡ ದೊಡ್ಡ ಪೈಪು ಅಳವಡಿಸಿ ನೀರು ತುಂಬಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಕೆ.ಪಿ.ಬಸವಯ್ಯ, ಕೂಡ್ಲಾಪುರ, ನಂಜನಗೂಡು ತಾ.


ಶಾಲಾ ಸಾಂಸ್ಕೃತಿಕ ಕ್ರಾಂತಿಗೆ ಮುನ್ನುಡಿ

ಮಾನ್ಯರೇ,

ಶಾಲಾ ಕಾರ್ಯಕ್ರಮಗಳಲ್ಲಿ ಅಶ್ಲೀಲ ಹಾಡುಗಳಿಗೆ ಶಿಕ್ಷಣ ಇಲಾಖೆ ನಿಷೇಧ ಹೇರಿರುವುದು ಸ್ವಾಗತಾರ್ಹ. ಇಂದಿನ ಶೇ. 80ರಷ್ಟು ಸಿನಿಮಾ ಹಾಡುಗಳು ದ್ವಂದ್ವಾರ್ಥ ಹಾಗೂ ನೈತಿಕ ಅಧಃಪತನದ ಸಾಹಿತ್ಯ ಹೊಂದಿವೆ. ಇವು ವಿದ್ಯಾರ್ಥಿಗಳ ಮೃದು ಮನಸ್ಸಿನ ಮೇಲೆ ಬೀರುವ ಶೇ. 90ರಷ್ಟು ಪ್ರಭಾವ ನಕಾರಾತ್ಮಕವಾಗಿರುತ್ತದೆ. ಶಾಲೆಯು ಜ್ಞಾನ ದೇಗುಲವೇ ಹೊರತು ಸಿನಿಮಾ ಕ್ಲಬ್ ಅಲ್ಲ.

ಸಂಸ್ಕಾರಯುತ ಶಿಕ್ಷಣವೇ ಸದೃಢ ದೇಶದ ಅಡಿಪಾಯ. ಕೇವಲ ಮನೋರಂಜನೆಗಾಗಿ ನಾಡಿನ ಸಂಸ್ಕೃತಿಯನ್ನು ಬಲಿ ಕೊಡುವುದು ಅಕ್ಷಮ್ಯ ಅಪರಾಧ. ಕೇವಲ ಸುತ್ತೋಲೆ ಹೊರಡಿಸಿದರೆ ಸಾಲದು. ನಿಯಮ ಉಲ್ಲಂಘಿಸುವ 100% ಶಾಲೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಶಾಲಾ ಆಡಳಿತ ಮಂಡಳಿಗಳು ರಾಷ್ಟ್ರೀಯತೆ, ಜಾನಪದ ಮತ್ತು ನೈತಿಕ ಮೌಲ್ಯದ ಹಾಡುಗಳಿಗೆ ಆದ್ಯತೆ ನೀಡಬೇಕು. ಈ ಬದಲಾವಣೆಯು ಮಕ್ಕಳಲ್ಲಿ ಶಿಸ್ತನ್ನು ವೃದ್ಧಿಸಿ, ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುತ್ತದೆ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.



ಸದ್ಗುರು
ಸಂಸ್ಥಾಪಕರು,
ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ಮಕ್ಕಳಿಗೆ ಯಾವುದೇ ಸೂಚನಾ ಕೈಪಿಡಿ ಅಗತ್ಯವಿಲ್ಲ

ಮಕ್ಕಳು ಜನಿಸಿದಾಗ ಯಾವುದೇ ಸೂಚನಾ ಕೈಪಿಡಿಯೊಂದಿಗೆ ಬರುವುದಿಲ್ಲ. ಹಾಗಾಗಿ ಒಬ್ಬ ವ್ಯಕ್ತಿಯು ಹುಟ್ಟಿನಿಂದ ಸಾಯುವವರೆಗೆ ಹೇಗಿರಬೇಕು ಎಂಬ ಕೈಪಿಡಿಯನ್ನು ಬರೆಯಬೇಕಾದರೆ, ಅದು ಹೇಗಿರುತ್ತದೆ ಎಂದು ಯಾರೋ ನನ್ನನ್ನು ಕೇಳಿದರು. ನನ್ನ ಪ್ರಕಾರ ಅದು ಒಂದು ಖಾಲಿ ಪುಸ್ತಕವಾಗಿದ್ದರೆ ಉತ್ತಮವಾಗಿರುತ್ತದೆ. ಈಗ ನೀವು ಎಲ್ಲವನ್ನೂ ಯಂತ್ರಗಳಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದೀರಿ. ಮಾನವರಿಗೆ ಉಪಯುಕ್ತ ಎಂದು 'ನೀವು' ಭಾವಿಸುವ ಕೆಲವು ರೀತಿಯಲ್ಲಿ ಮಕ್ಕಳನ್ನು ಕಾರ್ಯನಿರ್ವಹಿಸುವುದನ್ನು ಹೊರತುಪಡಿಸಿ ಇತರ ಆಯಾಮಗಳಿವೆ. ಮನುಷ್ಯರು ಯಾರಿಗೂ ಉಪಯುಕ್ತವಾಗಬೇಕಾಗಿಲ್ಲ. ಬಂಡಿಯಲ್ಲಿ ನೊಗಕ್ಕೆ ಸಿಕ್ಕಿದ ಎತ್ತುಗಳು ಕಾಡಿನಲ್ಲಿ ಅಡ್ಡಾಡುವ ಕಾಡು ಜಿಂಕೆಗಳನ್ನು ನೋಡಿ, ಅಯ್ಯೋ, ಅವು ತಮ್ಮ ಜೀವನವನ್ನು ಹೇಗೆ ಹಾಳುಮಾಡಿಕೊಳ್ಳುತ್ತಿವೆ, ಯಾರಿಗೂ ಉಪಯುಕ್ತವಲ್ಲ ಎಂದು ಯೋಚಿಸಬಹುದು. ಆದರೆ ಆ ಜಿಂಕೆಗಳಲ್ಲಿ ಸಂತೋಷವಿದೆ. ನೀವು ನೊಗಕ್ಕೆ ಒಳಗಾಗಿದ್ದೀರಿ ಮತ್ತು ನಿಮ್ಮಲ್ಲಿ ಸಂತೋಷವಿಲ್ಲ.

ಕೇವಲ ಉಪಯುಕ್ತವಾಗಲು ಪ್ರಯತ್ನಿಸುವ ಮೂಲಕ ನೀವೊಬ್ಬ ಆನಂದವಿಲ್ಲದ ವ್ಯಕ್ತಿಯಾದರೆ, ಜೀವನದ ಎಲ್ಲಾ ಉದ್ದೇಶಗಳು ಸೋಲುತ್ತವೆ. ನೀವು ಏನೇ ಮಾಡಿದರೂ ಅದು ಅರ್ಥವಿಲ್ಲದಾಗುತ್ತದೆ. ಸಾಮಾಜಿಕವಾಗಿ, ಬಹುಶಃ ಅವರು ನೀವು ಹೊತ್ತಿರುವ ಶೋಚನೀಯ ಮುಖಕ್ಕಾಗಿ ಮತ್ತು ಪ್ರಪಂಚದಲ್ಲಿ ನೀವು ಮಾಡಿದ ಕೆಲಸಗಳಿಗೆ ಅವರು ನಿಮಗೆ ಪ್ರಶಸ್ತಿಯನ್ನು ನೀಡಬಹುದೇನೋ, ಆದರೆ 'ಜೀವನ'ದಲ್ಲಿ ಅದು ಏನನ್ನೂ ಅರ್ಥೈಸುವುದಿಲ್ಲ.

ಸೂಚನಾ ಕೈಪಿಡಿಗಳನ್ನು ಬಿಡಿ!

ಬೇರೊಬ್ಬರ ಬುದ್ಧಿವಂತಿಕೆಯ ಮೂಲಕ ಜೀವನವನ್ನು ನೋಡುವುದನ್ನು ನಿಲ್ಲಿಸಿ. ನಿಮ್ಮ ಜೀವನವನ್ನು ಹೆಚ್ಚು ಬುದ್ಧಿವಂತಿಕೆಯಿಂದ ನೋಡಲು ಕಲಿಯಿರಿ. ಇತರ ಪ್ರಭಾವಗಳನ್ನು ತೆಗೆದುಹಾಕಿದರೆ, ಪ್ರತಿಯೊಬ್ಬರೂ ತಮ್ಮ ಜೀವನವನ್ನು ಸಂವೇದನಾಶೀಲವಾಗಿ ಜೀವಿಸುವ ಅಗತ್ಯ ಬುದ್ಧಿವಂತಿಕೆ ಹೊಂದಿದ್ದಾರೆ. ಸಮಸ್ಯೆಯೆಂದರೆ, ನೀವು ಹಿಂದಿನ ಮತ್ತು ಪ್ರಸ್ತುತ ನಾಯಕರಿಂದ ಪ್ರಭಾವಿತರಾಗಿದ್ದೀರಿ. ಕೊನೆಯಲ್ಲಿ, ನಿಮ್ಮ ಮನಸ್ಥಿತಿ ಕೇವಲ ಅಭಿಮಾನಿಗಳ ಸಂಘವಾಗಿದೆ. ಅಭಿಮಾನಿ ಬಳಗದವರದ್ದು ಅತ್ಯಂತ ಮೂಲ ಮನಸ್ಥಿತಿ.

ಎಲ್ಲ ಮಕ್ಕಳೂ ಸಂಪೂರ್ಣ ಜೀವಿಯಾಗಿ ಹುಟ್ಟಿರುತ್ತವೆ. ನೀವು



> “ಬೇರೊಬ್ಬರ ಬುದ್ಧಿವಂತಿಕೆ ಮೂಲಕ ಜೀವನವನ್ನು ನೋಡುವುದನ್ನು ನಿಲ್ಲಿಸಿ. ನಿಮ್ಮ ಜೀವನವನ್ನು ಹೆಚ್ಚು ಬುದ್ಧಿವಂತಿಕೆಯಿಂದ ನೋಡಲು ಕಲಿಯಿರಿ. ಇತರ ಪ್ರಭಾವಗಳನ್ನು ತೆಗೆದುಹಾಕಿದರೆ, ಪ್ರತಿಯೊಬ್ಬರೂ ತಮ್ಮ ಜೀವನವನ್ನು ಸಂವೇದನಾಶೀಲವಾಗಿ ಜೀವಿಸುವ ಅಗತ್ಯ ಬುದ್ಧಿವಂತಿಕೆ ಹೊಂದಿದ್ದಾರೆ. ಸಮಸ್ಯೆಯೆಂದರೆ, ನೀವು ಹಿಂದಿನ ಮತ್ತು ಪ್ರಸ್ತುತ ನಾಯಕರಿಂದ ಪ್ರಭಾವಿತರಾಗಿದ್ದೀರಿ. ಕೊನೆಯಲ್ಲಿ, ನಿಮ್ಮ ಮನಸ್ಥಿತಿ ಕೇವಲ ಅಭಿಮಾನಿಗಳ ಸಂಘವಾಗಿದೆ. ಅಭಿಮಾನಿ ಬಳಗದವರದ್ದು ಅತ್ಯಂತ ಮೂಲ ಮನಸ್ಥಿತಿ.

ಮಕ್ಕಳನ್ನು ಅವರ ಪೂರ್ಣ ಸಾಮರ್ಥ್ಯಕ್ಕೆ ಪೋಷಿಸುವುದನ್ನು ಮಾತ್ರ ಮಾಡಬಹುದು. ನೀವು ಅವರನ್ನು 'ಬೇರೆ ಏನನ್ನಾದರೂ' ಮಾಡಲು ಸಾಧ್ಯವಿಲ್ಲ. ತೆಂಗಿನ ಮರವು ನಿಮ್ಮ ಒಂದು ಆದರ್ಶ ಮರವಾಗಿದ್ದರೆ ಮತ್ತು ನಿಮ್ಮ ತೋಟದಲ್ಲಿ ಮಾವಿನ ಮರವು ಮೊಳಕೆಯೊಡೆದರೆ, ನೀವು ಏನು ಮಾಡುತ್ತೀರಿ? ಅದು ತೆಂಗಿನ ಮರದಂತೆ ಕಾಣುತ್ತಿಲ್ಲದ ಕಾರಣ, ನೀವು ಅದರ ಎಲ್ಲಾ ಕೊಂಬೆಗಳನ್ನು ಕತ್ತರಿಸಿ ಒಂದನ್ನು ಬಿಡುತ್ತೀರಿ. ಆಗ ಅದು ಅತ್ಯಂತ ಕಳಪೆ ಮಾವಿನ ಮರವಾಗಿರುತ್ತದೆ. ನೀವು ಮಾಡಬಹುದಾದ ಏಕೈಕ ವಿಷಯವೆಂದರೆ ಮಕ್ಕಳನ್ನು ಅವರ ಸಂಪೂರ್ಣ ಬುದ್ಧಿವಂತಿಕೆ, ದೈಹಿಕ ಯೋಗಕ್ಷೇಮ ಮತ್ತು ಭಾವನಾತ್ಮಕ ಯೋಗಕ್ಷೇಮಕ್ಕೆ ಪೋಷಿಸುವುದು. ಇದು ಸಾಧ್ಯವಾಗುವುದು ನೀವು ಕೇವಲ 'ಪೋಷಿಸಿದಾಗ' ಮಾತ್ರ, ಅದರಲ್ಲಿ ಹಸ್ತಕ್ಷೇಪ ಮಾಡುವುದರಿಂದಲ್ಲ.

ಅನುಕೂಲಕರ ವಾತಾವರಣವನ್ನು ಸೃಷ್ಟಿಸುವುದು

ಮಕ್ಕಳು ನಿಮ್ಮ ಮೂಲಕ ಬಂದಿದ್ದಾರೆ. ಅವರು ನಿಮ್ಮಿಂದ ಬಂದಿಲ್ಲ. ಅವರು ನಿಮ್ಮವರು ಎಂದು ಎಂದಿಗೂ ಭಾವಿಸಬೇಡಿ. ಅವರು ನಿಮ್ಮ ಮೂಲಕ ಸಂಭವಿಸಿದ್ದಾರೆ ಅದೇ ಸೌಭಾಗ್ಯ. ನಿಮ್ಮ ವ್ಯವಹಾರವು ಅವರಿಗೆ ಪ್ರೀತಿಯ ಮತ್ತು ಬೆಂಬಲದ ವಾತಾವರಣವನ್ನು ಒದಗಿಸುವುದು. ನಿಮ್ಮ ಆಲೋಚನೆಗಳು ಮತ್ತು ಭಾವನೆಗಳು, ನಿಮ್ಮ ತತ್ವಗಳು, ನಿಮ್ಮ ನಂಬಿಕೆ ವ್ಯವಸ್ಥೆಗಳು ಮತ್ತು ಅಸಂಬದ್ಧತೆಯನ್ನು ಮಗುವಿನ ಮೇಲೆ ಹೇರಲು ಪ್ರಯತ್ನಿಸಬೇಡಿ. ಅವರ ದಾರಿಯನ್ನು ಕಂಡುಕೊಳ್ಳಲು ಅವರ ಸ್ವಂತ ಬುದ್ಧಿವಂತಿಕೆ ಸಾಕು. ಅವರ ಬುದ್ಧಿವಂತಿಕೆಯು ಸಂಪೂರ್ಣವಾಗಿ ಬೆಳೆಯಲು ಬೇಕಾದ ಅಗತ್ಯ ವಾತಾವರಣವನ್ನು ನೀವು ಸೃಷ್ಟಿಸಿದರೆ, ಅವರು ಅದನ್ನು ತಮಗೆ ತಿಳಿದಿರುವ ರೀತಿಯಲ್ಲಿ ನಿರ್ವಹಿಸುತ್ತಾರೆ.

ಸರಿ, ಆದರೆ ಎಲ್ಲವೂ ಸರಿ ಹೋಗುತ್ತದೆಯೇ? ಇದು ಸರಿ ಹೋಗಬಹುದು, ಅದು ತಪ್ಪಾಗಬಹುದು–ಅದು ವಿಷಯವಲ್ಲ. ಆದರೆ ಅದು ತಪ್ಪಾಗುವ ಸಾಧ್ಯತೆ ಕಡಿಮೆ. ಮಕ್ಕಳು ತಮ್ಮ ಸ್ವಂತ ಬುದ್ಧಿಮಟ್ಟವನ್ನು ಪ್ರಯೋಗಿಸುತ್ತಾ ಬೆಳೆದಾಗ, ಅವರು ಒಂದು ತಪ್ಪು ಮಾಡಿದರೆ, ಅದನ್ನು ಸರಿಪಡಿಸುವ ಬುದ್ಧಿವಂತಿಕೆಯನ್ನು ಹೊಂದಿರುತ್ತಾರೆ. ಎಲ್ಲಿಯವರೆಗೆ ಅವರು ತಮ್ಮ ಯೋಗಕ್ಷೇಮಕ್ಕಾಗಿ ಕೆಲಸ ಮಾಡುತ್ತಾರೆ ಮತ್ತು ತಮ್ಮ ಜೀವನಕ್ಕೆ ವಿರುದ್ಧವಾಗಿ ಏನನ್ನೂ ಮಾಡುತ್ತಿಲ್ಲವೋ, ಅಲ್ಲಿಯವರೆಗೆ ನೀವು ಕಾಯಬೇಕು. ಮಗುವಿಗೆ ಇಪ್ಪತ್ತೊಂದು ವರ್ಷವಾಗುವವರೆಗೆ, ನೀವು ಇನ್ನೂ ಗರ್ಭಿಣಿಯಾಗಿದ್ದೀರಿ ಎಂದು ನೀವು ಭಾವಿಸಬೇಕು. ನೀವು ಗರ್ಭಿಣಿಯಾಗಿದ್ದಾಗ ಏನು ಮಾಡಿದಿರಿ? ಕೇವಲ ನಿರೀಕ್ಷಿಸುವುದು. ಮಗು ಒಳಗೆ ಇದ್ದಾಗ, ನೀವು ಏನೂ ಮಾಡಲಿಲ್ಲ, ಅಲ್ಲವೇ? ನಿಮ್ಮನ್ನು ಚೆನ್ನಾಗಿ ಪೋಷಿಸಿ ಕಾಯುತ್ತಿದ್ದೀರಿ ಅಷ್ಟೇ. ಅದರಂತೆಯೇ ಈಗಲೂ –ಅಗತ್ಯ ವಾತಾವರಣವನ್ನು ಒದಗಿಸುವುದು ಮತ್ತು ಕಾಯುವುದು.

ಸಂತನಂತಿದ್ದರು

ಎಸ್.ಎಂ.ಕೃಷ್ಣ



> “ಭಾಷೆ, ಸಂಸ್ಕೃತಿ, ಶಿಕ್ಷಣ, ಉದ್ಯಮ, ಸಾಮಾಜಿಕ ಮೌಲ್ಯ ಮತ್ತು ಜನರ ಆರ್ಥಿಕ ಅಭಿವೃದ್ಧಿಗಳ ಕುರಿತು ಗಮನಹರಿಸಿ ಸಹೃದಯಶೀಲರಾಗಿ ಎಸ್.ಎಂ.ಕೃಷ್ಣ, ನಾಡಿನೊಡನೆ, ನಾಡವರೊಡನೆ ಸ್ಪಂದಿಸಿದವರು. ನಾಡು ಮರೆಯದಂತಹ ಸಾಧನೆಯ ಶಿಖರವನ್ನು ನಿರ್ಮಿಸಿದ ಸಾಧಕರು. ಹಾಗಾಗಿ ಅವರನ್ನು ನಾಡು ಮರೆಯುವಂತೆಯೇ ಇಲ್ಲ ನಾಡು ಮರೆಯದ ಮಹಾನ್ ಸಾಧಕರವರು.

ಕರ್ನಾಟಕದ ಮುಖ್ಯಮಂತ್ರಿಗಳಾಗಿ ನಾಡಿನ ಸಮಗ್ರ ಅಭಿವೃದ್ಧಿಗೆ ತಮ್ಮದೇ ಆದ ಮಹತ್ತರ ಕೊಡುಗೆ ನೀಡಿ ಹಲವು ರೀತಿಯಲ್ಲಿ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಹೆಸರಾಗಿದ್ದ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅರ್ಥಾತ್ ಎಸ್.ಎಂ. ಕೃಷ್ಣ ಓರ್ವ ಪರಿಶುದ್ಧ ರಾಜಕಾರಣಿ. ಇತ್ತೀಚಿನ ಬೊಗಳೆ ರಾಜಕಾರಣಿಗಳಂತೆ ಅವರೆಂದೂ ಅಧಿಕಾರಕ್ಕಾಗಿ ಸ್ವಜಾತಿ ಸಂಘಟನೆ ಮಾಡಲಿಲ್ಲ. ಜಾತ್ಯಾತೀತವಾಗಿ ಜನ ಸಂಘಟನೆಯನ್ನಷ್ಟೇ ಮಾಡಿಕೊಂಡು ಬಂದವರು. ಅವರೆಂದೂ ಸ್ವಜಾತಿ ಸಮಾವೇಶ ಮಾಡಲಿಲ್ಲ. ಸರ್ವಜನಾಂದೋಲನ ಸಮಾವೇಶ ಮಾಡಿ ಜಾತ್ಯಾತೀತವಾಗಿ ಕೃಷ್ಣನ 'ಪಾಂಚಜನ್ಯ' ಮೊಳಗಿಸಿ ತಾವು ಪ್ರತಿನಿಧಿಸುತ್ತಿದ್ದ ಪಕ್ಷವನ್ನು ಅಧಿಕಾರಕ್ಕೆ ತಂದರು. ಜನಾಭಿಪ್ರಾಯದಂತೆ ತಾವೇ ಮುಖ್ಯಮಂತ್ರಿಗಳೂ ಆದರು.

ಇವತ್ತು ಅವರು ಭೌತಿಕವಾಗಿ ನಮ್ಮೊಡನಿಲ್ಲ. (ನಿಧನ 10–12– 2024). ಆದರೆ ತಮ್ಮ ಜಾತ್ಯಾತೀತ ಮನಸ್ಸಿನ ಮೇರು ವ್ಯಕ್ತಿತ್ವದಿಂದ ಶಾಶ್ವತವಾಗಿ ಅವರು ಕರ್ನಾಟಕದ ಜನಮಾನಸದಲ್ಲಿರುತ್ತಾರೆ.

ಶೈಕ್ಷಣಿಕವಾಗಿಯೂ ಅತ್ಯುನ್ನತ ಸಾಧನೆ ಮಾಡಿದ್ದ ಅವರು ಕಲೆ, ಸಾಹಿತ್ಯ, ಸಂಸ್ಕೃತಿ, ಸಿನಿಮಾ, ಸಾಂಸ್ಕೃತಿಕ ಮತ್ತು ಸಾಮಾಜಿಕ ಜೀವನದಲ್ಲೂ ಆಸಕ್ತಿ ತಳೆದಿದ್ದವರು. ಮಾತ್ರವಲ್ಲ, ಅವುಗಳ ಅಭಿವೃದ್ಧಿಗಾಗಿಯೂ ಶ್ರಮಿಸುತ್ತಿದ್ದರು. ಇಂತಹ ಸಾಮಾಜಿಕ ಕಳಕಳಿಯ ಬಹುಮುಖಿ ವ್ಯಕ್ತಿತ್ವದ ಜನಮುಖಿ ಸೇವಾಧುರೀಣ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅವರು 1932 ಮೇ 1ರಂದು ಸಕ್ಕರೆ ನಾಡು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಸೋಮನಹಳ್ಳಿಯಲ್ಲಿ ಜನಿಸಿದರು. ತಂದೆ ಗಾಂಧಿವಾದಿ, ಸ್ವಾತಂತ್ರ್ಯ ಹೋರಾಟಗಾರ, ಪ್ರಗತಿಪರ ರೈತ ಎಸ್.ಸಿ. ಮಲ್ಲಯ್ಯ. ತಾಯಿ ಸುಸಂಸ್ಕೃತ ಕುಟುಂಬದ ತಾಯಮ್ಮ. ಈ ದಂಪತಿಯ ಹತ್ತು ಮಕ್ಕಳ ಪೈಕಿ ಎಸ್.ಎಂ. ಕೃಷ್ಣ ಆರನೆಯವರು. ತಂದೆ–ತಾಯಿ ಮಲೆ ಮಹದೇಶ್ವರನ ವರಪ್ರಸಾದವೆನ್ನುತ್ತಾರೆ. ಬಾಲ್ಯದಿಂದಲೂ ಬಹು ಚೂಟಿಯಾಗಿ ಎಸ್.ಎಂ. ಕೃಷ್ಣ ಎಲ್ಲರ ಆಕರ್ಷಣೆಯ ಕೇಂದ್ರ ಬಿಂದುವಾಗಿರುತ್ತಾರೆ. ಮದ್ದೂರಿನ ಶಿವಪುರದ ಸ್ವಾತಂತ್ರ್ಯ ಹೋರಾಟಗಾರರ ಸೌಧಕ್ಕೆ ಒಮ್ಮೆ ಮಹಾತ್ಮ ಗಾಂಧಿ ಬಂದಿದ್ದ ಸಂದರ್ಭದಲ್ಲಿ ಬಾಲಕ ಎಸ್.ಎಂ.ಕೃಷ್ಣ ತಮ್ಮ ತಂದೆ ಮಲ್ಲಯ್ಯನವರ ಜೊತೆಯಲ್ಲಿ ಗಾಂಧೀಜಿ ಕಂಡು ಮಾತನಾಡಿಸಿ ಪುಳಕಿತರಾಗಿ ಆಗಲೇ ಅವರಿಂದ ನಾಡ ಸೇವೆ, ದೇಶ ಸೇವೆಯ ಪ್ರೇರಣೆ ಹೊಂದಿದ್ದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಹುಟ್ಟೂರಿನಲ್ಲಿ ಕಲಿತು ನಂತರ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆ, ಮಹಾಜನ ಹೈಸ್ಕೂಲುಗಳಲ್ಲಿ ಓದಿ, ಮಹಾರಾಜ ಕಾಲೇಜಿನಲ್ಲಿ ಕಲಾ ಪದವಿ ಪೂರ್ಣಗೊಳಿಸಿದರು. ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದರು. ಮುಂದೆ ಅಮೆರಿಕದ ಟೆಕ್ಸಾಸ್‌ನ ಡಲ್ಲಾಸ್‌ನಲ್ಲಿರುವ ದಕ್ಷಿಣ ಮೆಥೋಡಿಸ್ಟ್ ವಿಶ್ವವಿದ್ಯಾಲಯ ಮತ್ತು ಜಾರ್ಜ್ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ಕಾನೂನು ಶಾಲೆಯಲ್ಲಿಯೂ ಫುಲ್‌ಬ್ರೈಟ್ ವಿದ್ಯಾರ್ಥಿ ವೇತನ ಪಡೆದು ಕಾನೂನು ವ್ಯಾಸಂಗ ಮಾಡಿದರು.

ರಾಜಕೀಯ ಪ್ರವೇಶ: ಎಸ್.ಎಂ.ಕೃಷ್ಣ ಅವರು ವಿದೇಶದಲ್ಲಿ ವಿದ್ಯಾಭ್ಯಾಸ ಮುಗಿಸಿ ಭಾರತಕ್ಕೆ ಮರಳಿದ ನಂತರ 1962ರಲ್ಲಿ ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದರ ಮೂಲಕ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸುತ್ತಾರೆ. ಅದೂ ಅವತ್ತಿನ ಕಾಲದಲ್ಲಿ ಪ್ರಮುಖ ರಾಜಕಾರಣಿಯಾಗಿ ರಾಜ್ಯದಲ್ಲೇ ಹೆಸರುವಾಸಿಯಾಗಿದ್ದ, ಅಂದು ಮುಖ್ಯಮಂತ್ರಿ ಅಭ್ಯರ್ಥಿ ಎಂದೇ ಬಿಂಬಿತರಾಗಿದ್ದ ಕಾಂಗ್ರೆಸ್ ಪಕ್ಷದ ನೇತಾರ ಎಚ್.ಕೆ.ವೀರಣ್ಣಗೌಡರ ಎದುರು!

ಆ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿ ರಾಜ್ಯ ವಿಧಾನಸಭೆಗೆ ಮೊಟ್ಟ ಮೊದಲಿಗೆ ಎಸ್.ಎಂ.ಕೃಷ್ಣ ಆಯ್ಕೆಯಾಗುತ್ತಾರೆ. ಅಂದಿನ ಪ್ರಧಾನಿ ಸ್ಥಾನದ ಪಂಡಿತ್ ಜವಾಹರಲಾಲ್ ನೆಹರು ಅವರು ಎಚ್.ಕೆ.ವೀರಣ್ಣಗೌಡರ ಪರವಾಗಿ ಚುನಾವಣಾ ಪ್ರಚಾರ ಮಾಡಿದ್ದರೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಮುಖ ರಾಜಕಾರಣಿ ಎಚ್.ಕೆ.ವೀರಣ್ಣ ಗೌಡ ಅವರನ್ನು ಮೊದಲ ಎಂಟ್ರಿಯಲ್ಲೇ ಯುವಕ ಎಸ್.ಎಂ.ಕೃಷ್ಣ ಸೋಲಿಸಿದ್ದು ಅದೊಂದು ಅಪೂರ್ವ ದಾಖಲೆಯೇ ಸರಿ. ತನ್ಮೂಲಕ 1952ರಲ್ಲಿ ನಡೆದಿದ್ದ ಮೊದಲ ಚುನಾವಣೆಯಲ್ಲಿ ತಮ್ಮ ತಂದೆ ಎಸ್.ಸಿ.ಮಲ್ಲಯ್ಯನವರನ್ನು ಅದೇ ಅಖಾಡದಲ್ಲಿ ಸೋಲಿಸಿದ್ದ ಎಚ್.ಕೆ.ವೀರಣ್ಣ ಗೌಡರಿಗೆ ಮಲ್ಲಯ್ಯನವರ ಪುತ್ರ ಕೃಷ್ಣ, ಸೋಲಿನ ರುಚಿ ತೋರಿಸಿ ತಿರುಗೇಟು ನೀಡಿದ್ದರು. ಅಲ್ಲಿಂದೀಚೆಗೆ ಎಸ್.ಎಂ.ಕೃಷ್ಣ ಅವರಿಗೆ ರಾಜಕಾರಣ ಮತ್ತು ಜನಸೇವೆ ಎಂಬುದು ಉಸಿರಿನಷ್ಟೇ ಸರಾಗವಾಗಿತ್ತು.

ನಂತರದ ದಿನಗಳಲ್ಲಿ ಎಸ್.ಎಂ.ಕೃಷ್ಣ ಅವರು ಪ್ರಜಾ ಸೋಷಿಯಲಿಸ್ಟ್ ಪಕ್ಷಕ್ಕೆ ಸೇರ್ಪಡೆಗೊಳ್ಳುತ್ತಾರೆ. 1967ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮದ್ದೂರಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ಎಂ.ಎಂ.ಗೌಡ ವಿರುದ್ಧ ಸೋಲುತ್ತಾರೆ. 1968ರಲ್ಲಿ ಮಂಡ್ಯದ ಹಾಲಿ ಸಂಸದರು ನಿಧನರಾದಾಗ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸ್ಪರ್ಧಿಸಿ ದಾಖಲೆಯ ಗೆಲುವನ್ನು ಸಾಧಿಸುತ್ತಾರೆ.

ಸುಖೀ ಸಂಸಾರಿ ಕೃಷ್ಣ: 1966 ಏಪ್ರಿಲ್ 29 ರಂದು ಮಲೆನಾಡಿನ ಸುಸಂಸ್ಕೃತ ಮನೆತನದ ಶಿವಮೊಗ್ಗ ಜಿಲ್ಲೆಯ ಕುಡು ಮಲ್ಲಿಗೆ ಗ್ರಾಮದ ಚನ್ನಪ್ಪಗೌಡ ಹಾಗೂ ಕಮಲಾಕ್ಷಮ್ಮ ದಂಪತಿಯ ಪುತ್ರಿ ಪ್ರೇಮಾ ಅವರೊಡನೆ ಕೃಷ್ಣ ವಿವಾಹವಾದರು. ತಮ್ಮ ಸುಖೀ ದಾಂಪತ್ಯದಲ್ಲಿ ಮಾಳವಿಕಾ ಮತ್ತು ಶಾಂಭವಿ ಎಂಬ ಇಬ್ಬರು ಮುದ್ದಾದ ಹೆಣ್ಣು ಮಕ್ಕಳನ್ನು ಹೊಂದಿದ್ದರು. ಹಿರಿಯ ಮಗಳು ಮಾಳವಿಕಾರನ್ನು ಖ್ಯಾತ ಉದ್ಯಮಿ ಕಾಫಿ ಡೇ ಕಂಪನಿಯ ಸಂಸ್ಥಾಪಕ ವಿ.ಜಿ. ಸಿದ್ದಾರ್ಥ ಹೆಗಡೆ ಅವರ ಜೊತೆ ವಿವಾಹ ಮಾಡಿದ್ದರು. ಹಾಗೂ ಕಿರಿಯ ಮಗಳು ಶಾಂಭವಿಯನ್ನು ಮತ್ತೊಬ್ಬ ಪ್ರಸಿದ್ಧ ಉದ್ಯಮಿ ಉಮೇಶ್ ಅವರೊಡನೆ ವಿವಾಹ ಮಾಡಿ ಕೊಟ್ಟಿದ್ದರು.


ಪ್ರಬುದ್ಧರಾದ ಕೃಷ್ಣ: 1968ರಲ್ಲಿ ಕೃಷ್ಣ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಪ್ರಜಾ ಸಮಾಜವಾದಿ ಪಕ್ಷದ ಸದಸ್ಯರ ನಡುವಿನ ಸಮನ್ವಯದಲ್ಲಿ ಪ್ರಭಾವಶಾಲಿಯಾಗುತ್ತಾರೆ. ಹಾಗಾಗಿ ಆ ಸಂದರ್ಭದಲ್ಲಿ ನಡೆದ ಉಪಚುನಾವಣೆಯಿಂದ ಸಮಾಜವಾದಿಯಾಗಿ ಕರ್ನಾಟಕದ ಮಂಡ್ಯ ಕ್ಷೇತ್ರದಿಂದ 3 ಬಾರಿ ಸಂಸದರಾಗಿ ಸೇವೆ ಸಲ್ಲಿಸುತ್ತಾರೆ. ಮುಂದಿನ ಎರಡು ಅವಧಿಗಳಲ್ಲಿ ಕಾಂಗ್ರೆಸ್ಸಿಗರಾಗಿ 1971 ಮತ್ತು 1980ರಲ್ಲಿ ನಡೆಯುವ ಚುನಾವಣೆಗಳಲ್ಲಿಯೂ ವಿಜಯಶಾಲಿಯಾಗುತ್ತಾರೆ. ಅಷ್ಟೇ ವಿಶ್ವಾಸದಿಂದ, ಉತ್ಸಾಹದಿಂದ ಹೆಚ್ಚೆಚ್ಚು ಅಭಿವೃದ್ಧಿಯ ಕೆಲಸಗಳನ್ನು ಮಾಡುತ್ತಾರೆ.

ಎಸ್.ಎಂ.ಕೃಷ್ಣ ಅವರು ರಾಜ್ಯ ರಾಜಕಾರಣದತ್ತ ಉತ್ಸುಕರಾಗಿ 1972ರಲ್ಲಿ ಲೋಕಸಭೆಗೆ ರಾಜೀನಾಮೆ ನೀಡಿ ಕರ್ನಾಟಕದಲ್ಲಿ ಎಂಎಲ್‌ಸಿ ಆಗಿ ಅಂದಿನ ದೇವರಾಜ ಅರಸರ ಸರ್ಕಾರದಲ್ಲಿ ಸಚಿವರಾಗುತ್ತಾರೆ. 1980ರಲ್ಲಿ ಮತ್ತೆ ಲೋಕಸಭೆಗೆ ಮರಳಿ, 1983–1984ರ ಅವಧಿಯಲ್ಲಿ ಇಂದಿರಾ ಗಾಂಧಿಯವರ ಸರ್ಕಾರದಲ್ಲಿ ಸಚಿವರಾಗಿ ಸೇವೆ ಸಲ್ಲಿಸುತ್ತಾರೆ. 1984ರಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಸೋಲುತ್ತಾರೆ. ಸೋತರೂ 1996 ಮತ್ತು 2006ರ ವರ್ಷಗಳಲ್ಲಿ ರಾಜ್ಯಸಭೆ ಸದಸ್ಯರಾಗುತ್ತಾರೆ. ಅವರು ವಿವಿಧ ಸಂದರ್ಭಗಳಲ್ಲಿ ಕರ್ನಾಟಕ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. 1989 ಮತ್ತು 1993ರ ನಡುವೆ ಕರ್ನಾಟಕ ವಿಧಾನಸಭೆಯ ಸ್ಪೀಕರ್ ಮತ್ತು 1993 ರಿಂದ 1994ರವರೆಗೆ ಉಪ ಮುಖ್ಯಮಂತ್ರಿಯಾಗಿದ್ದರು. ಅವರು 1999ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ, ತಮ್ಮ ಪಕ್ಷವನ್ನು ಗೆಲುವಿನತ್ತ ಮುನ್ನಡೆಸಿ 2004ರವರೆಗೆ ಕರ್ನಾಟಕದ ಮುಖ್ಯಮಂತ್ರಿಗಳಾದರು. ಕೃಷ್ಣ ಅವರು ಕೆಲಕಾಲ ಮಹಾರಾಷ್ಟ್ರದ ರಾಜ್ಯಪಾಲರಾಗಿದ್ದು, 2008ರಲ್ಲಿ ಆ ಹುದ್ದೆಗೆ ರಾಜೀನಾಮೆ ನೀಡಿದರು. ರಾಜ್ಯಸಭೆ ಪ್ರವೇಶಿಸಿ 2009–2012ರ ಅವಧಿಯಲ್ಲಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ಸರ್ಕಾರದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಕಾರ್ಯನಿರ್ವಹಿಸಿದರು. ಎಸ್.ಎಂ. ಕೃಷ್ಣ ಅವರು 2017ರಿಂದ ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿ ಭಾರತೀಯ ಜನತಾ ಪಕ್ಷ ಸೇರಿದ್ದರು.

ನಾಡು ಮರೆಯದ ಮಾಣಿಕ್ಯ: ಎಸ್.ಎಂ.ಕೃಷ್ಣ ಸಾಹಿತ್ಯ ಹಾಗೂ ಸಾಂಸ್ಕೃತಿಕ ಆಸಕ್ತಿಗಳನ್ನೂ ರಾಜಕಾರಣದ ಜೊತೆ ಜೊತೆಯಾಗಿಟ್ಟುಕೊಂಡು ಬಂದವರು. ದೊಡ್ಡ ಸ್ಥಾನಗಳಲ್ಲಿದ್ದಾಗಲೂ ಸಾಮಾನ್ಯರಂತೆ ಸಭೆ ಸಮಾರಂಭಗಳಲ್ಲಿ ಅವರು ಪ್ರೇಕ್ಷಕರಾಗಿ ಭಾಗವಹಿಸಿದ್ದಿದೆ. ಅವರ ಜೀವನಾನುಭವ ಆಧರಿಸಿದ 'ಸ್ಮೃತಿವಾಹಿನಿ' ಜೀವನ ಚರಿತ್ರೆ ಕೂಡ ಪ್ರಕಟಗೊಂಡಿದೆ. ಶಿಕ್ಷಣ, ತಾಂತ್ರಿಕ, ಐಟಿ, ಬಿಟಿ ಉದ್ಯಮ ಮುಂತಾದ ಕ್ಷೇತ್ರಗಳಲ್ಲಿ ಎಸ್.ಎಂ.ಕೃಷ್ಣ ಕೊಡುಗೆ ಅಪರಿಮಿತ. ರಾಜಕೀಯದಲ್ಲಿ ನಡೆಯುವ ಕ್ಷುದ್ರ ಜಾತೀಯ ಕಲಹಗಳಿಗೆ ಬೆಲೆ ಕೊಡದೆ ಎಲ್ಲ ವರ್ಗದ ಜನರನ್ನೂ ಗೌರವಿಸಿ, ಭಾಷೆ, ಸಂಸ್ಕೃತಿ, ಶಿಕ್ಷಣ, ಉದ್ಯಮ, ಸಾಮಾಜಿಕ ಮೌಲ್ಯ ಮತ್ತು ಜನರ ಆರ್ಥಿಕ ಅಭಿವೃದ್ಧಿಗಳ ಕುರಿತು ಗಮನಹರಿಸಿ ಸಹೃದಯಶೀಲರಾಗಿ ಎಸ್.ಎಂ.ಕೃಷ್ಣ, ನಾಡಿನೊಡನೆ, ನಾಡವರೊಡನೆ ಸ್ಪಂದಿಸಿದವರು. ನಾಡು ಮರೆಯದಂತಹ ಸಾಧನೆಯ ಶಿಖರವನ್ನು ನಿರ್ಮಿಸಿದ ಸಾಧಕರು. ಹಾಗಾಗಿ ಅವರನ್ನು ನಾಡು ಮರೆಯುವಂತೆಯೇ ಇಲ್ಲ ನಾಡು ಮರೆಯದ ಮಹಾನ್ ಸಾಧಕರವರು.

ಮಹತ್ತರ ಯೋಜನೆಯ ರುವಾರಿ: ಕರ್ನಾಟಕದಲ್ಲಿ ಬರದ ಕಾರ್ಮೋಡ ಆವರಿಸಿದ್ದ ಕಾಲಘಟ್ಟದಲ್ಲಿ 1999ರಿಂದ 2004ರ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ.ಕೃಷ್ಣ ಅವರು ಅಂತಹ ಕಷ್ಟಕರ ಪರಿಸ್ಥಿತಿಯಲ್ಲೂ ನಾಡಿನಲ್ಲಿ ಅಭಿವೃದ್ಧಿಯ ಕೆಲಸಗಳನ್ನು ಮಾಡಿದ ರೀತಿಯಂತೂ ಇಡೀ ದೇಶ ಮೆಚ್ಚುವಂಥದ್ದು. ಈ ದೃಷ್ಟಿಯಲ್ಲಿ ಕರ್ನಾಟಕವನ್ನು ಆಳಿದ ಯಾವ ಮುಖ್ಯಮಂತ್ರಿಗಳು ಕೂಡ ಎಸ್.ಎಂ. ಕೃಷ್ಣರ ಸಾಧನೆಗೆ ಸರಿಸಾಟಿಯಾಗಲಾರರು! ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ರಚಿಸಿದ್ದ ತೆರಿಗೆ ಸುಧಾರಣಾ ಆಯೋಗ, ಆಡಳಿತ ಸುಧಾರಣಾ ಆಯೋಗ, ಬೆಂಗಳೂರು ಅಭಿವೃದ್ಧಿ ಕಾರ್ಯಪಡೆ, ಬಂಡವಾಳ ಹೂಡಿಕೆದಾರರ ಜಾಗತಿಕ ಸಮಾವೇಶ, ಐಟಿ ಮತ್ತು ಬಿಟಿ ಉದ್ಯಮಕ್ಕೆ ಕೊಟ್ಟ ಪ್ರೋತ್ಸಾಹ, ಕನ್ನಡ ಲಿಪಿ ತಂತ್ರಾಂಶ, ಲಾಟರಿಗೆ ಕಡಿವಾಣ, ಶಾಲಾ ಮಕ್ಕಳಿಗೆ ಬಿಸಿಯೂಟ, ಯಶಸ್ವಿನಿ ಆರೋಗ್ಯ ಯೋಜನೆ, ಸ್ತ್ರೀ ಶಕ್ತಿ ಸಂಘಗಳು, ಗ್ರಾಮೀಣ ಪ್ರದೇಶದಲ್ಲಿ ವಸತಿ ನಿರ್ಮಾಣದಂತಹ ಯೋಜನೆಗಳು ಒಂದು ಸರ್ಕಾರ ಹೊಂದಿರಬೇಕಾದ ಅಭಿವೃದ್ಧಿಯ ಮುನ್ನೋಟಕ್ಕೆ ಮಾದರಿಯಾಗಿತ್ತು.

1962ರಲ್ಲಿ ಮದ್ದೂರು ಕ್ಷೇತ್ರದಲ್ಲಿ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಿಂದ ಸ್ಪರ್ಧಿಸುವುದರ ಮೂಲಕ ಪ್ರಾರಂಭವಾದ ಎಸ್.ಎಂ.ಕೃಷ್ಣ ಅವರ ರಾಜಕೀಯ ಚದುರಂಗದಾಟ 2017ರ ಜನವರಿ 29ರಂದು ಕಾಂಗ್ರೆಸ್ ತ್ಯಜಿಸಿ ಅದೇ ವರ್ಷ ಮಾರ್ಚ್‌ನಲ್ಲಿ ಬಿಜೆಪಿ ಸೇರ್ಪಡೆಗೊಂಡ ಕೆಲ ತಿಂಗಳಲ್ಲೇ ಅವರ ರಾಜಕೀಯ ನಿವೃತ್ತಿಯಲ್ಲಿ ಕೊನೆಗೊಂಡಿತ್ತು. ಹಾಗೆಯೇ ಅವರ ಜೀವನದ ವರ್ಣರಂಜಿತ ಚದುರಂಗ ದಾಟ ಕೂಡ 2024ರ ಡಿಸೆಂಬರ್ 10ರ ಮಂಗಳವಾರ ಮುಂಜಾನೆ ಮುಕ್ತಾಯಗೊಂಡಿತ್ತು. ಅಂದು ಮತ್ತೆ ಬಾರದ ಲೋಕದತ್ತ ಕೃಷ್ಣ ಸದ್ದಿಲ್ಲದೆ ನಡೆದುಬಿಟ್ಟಿದ್ದರು.



ಬನ್ನೂರು ಕೆ.ರಾಜು
ಸಾಹಿತಿ, ಪತ್ರಕರ್ತ
ಮೊ.94815 33167

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದಿನಿಂದ ಮೈಸೂರು–ಹೈದರಾಬಾದ್ ಹೆಚ್ಚುವರಿ ವಿಮಾನ ಹಾರಾಟ

ಸಂಸದ ಯದುವೀರ್ ವಿದ್ಯುಕ್ತ ಚಾಲನೆ; ಶಾಸಕ ಜಿ.ಟಿ.ದೇವೇಗೌಡ ಉಪಸ್ಥಿತಿ



ಮೈಸೂರು ಹೈದಾರಾಬಾದ್ ನಡುವೆ ಶುಕ್ರವಾರ (ಮೇ1)ದಿಂದ ಆರಂಭವಾಗುವ ಹೆಚ್ಚುವರಿ ವಿಮಾನ ಹಾರಾಟದ ವೇಳಾಪಟ್ಟಿ

- ಹೈದರಾಬಾದ್‌ನಿಂದ ಮಧ್ಯಾಹ್ನ 12.10 ಗಂಟೆಗೆ ನಿರ್ಗಮನ
- ಮೈಸೂರಿಗೆ ಮಧ್ಯಾಹ್ನ 2 ಗಂಟೆಗೆ ಆಗಮನ
- ಮೈಸೂರಿನಿಂದ ಮಧ್ಯಾಹ್ನ 2.20 ನಿರ್ಗಮನ
- ಹೈದರಾಬಾದ್‌ಗೆ ಸಂಜೆ 4 ಗಂಟೆಗೆ ಆಗಮನ

ಮೈಸೂರು, ಏ.30(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ಮುತ್ತಿನ ನಗರಿ ಹೈದರಾಬಾದ್ ನಡುವೆ ಹೆಚ್ಚುವರಿ ವಿಮಾನ ಹಾರಾಟ ನಾಳೆ (ಮೇ 1)ಯಿಂದ ಆರಂಭವಾಗಲಿದ್ದು, ಮೈಸೂರು ವಿಮಾನ ನಿಲ್ದಾಣದಲ್ಲಿ ನಾಳೆ ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಅವರು ವಿದ್ಯುಕ್ತ ಚಾಲನೆ ನೀಡಲಿದ್ದಾರೆ.

ಹೈದರಾಬಾದ್‌ನಿಂದ ನಾಳೆ ಮಧ್ಯಾಹ್ನ 12 ಗಂಟೆಗೆ ಹೊರಡುವ ವಿಮಾನ, ಮಧ್ಯಾಹ್ನ 2 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದೆ.

ತರುವಾಯ ಮಧ್ಯಾಹ್ನ 2.20ಕ್ಕೆ ಮೈಸೂರಿನಿಂದ ಹೊರಡುವ ಇದೇ ವಿಮಾನ ಸಂಜೆ 4 ಗಂಟೆಗೆ ಹೈದರಾಬಾದ್ ತಲುಪಲಿದೆ. ಮೈಸೂರು ವಿಮಾನ ನಿಲ್ದಾಣದಲ್ಲಿ ನಾಳೆ ಮಧ್ಯಾಹ್ನ 12 ಗಂಟೆಗೆ ನಡೆಯುವ ಸರಳ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಅವರು ಮೈಸೂರು ಹಾಗೂ ಹೈದರಾಬಾದ್ ನಡುವಿನ ವಿಮಾನ ಹಾರಾಟಕ್ಕೆ ಚಾಲನೆ ನೀಡಲಿದ್ದಾರೆ. ಆ ವೇಳೆ ಶಾಸಕ ಜಿ.ಟಿ.ದೇವೇಗೌಡ, ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳು ಉಪಸ್ಥಿತರಿರುವರು.

ಈ ವಿಮಾನ ಪ್ರತಿದಿನ ಸಂಚರಿಸಲಿದ್ದು, ಇದರಿಂದ ಮೈಸೂರು ಹಾಗೂ ಹೈದರಾಬಾದ್ ನಡುವಿನ ಸಂಪರ್ಕಕ್ಕೆ ಅನುಕೂಲವಾಗಲಿದೆ. ಈ ಹೆಚ್ಚುವರಿ ವಿಮಾನ ಸೇವೆಯಿಂದ ಮೈಸೂರು ವಿಮಾನ ನಿಲ್ದಾಣದಲ್ಲಿ ವಿಮಾನಗಳ ಹಾರಾಟ ಸಂಖ್ಯೆ ಹೆಚ್ಚಳವಾಗಲಿದ್ದು, ಪ್ರಾದೇಶಿಕ ಸಂಪರ್ಕ ಬಲಪಡಿಸುವುದರ ಜೊತೆಗೆ ಪ್ರವಾಸೋದ್ಯಮ ಮತ್ತು ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ದೊರೆಯಲಿದೆ.

ನಾಳೆಯಿಂದ ಹೆಚ್ಚುವರಿಯಾಗಿ ಆರಂಭವಾಗುವ ವಿಮಾನ ಸೇವೆಯ ಜೊತೆಗೆ ಮೈಸೂರು ಹಾಗೂ ಹೈದರಾಬಾದ್ ನಡುವಿನ ಮತ್ತೊಂದು ವಿಮಾನ ಸೇವೆ ಮೈಸೂರು ಹಾಗೂ ಚೆನ್ನೈ ನಡುವಿನ ವಿಮಾನ ಹಾರಾಟ ಎಂದಿನಂತೆ ಕಾರ್ಯಾಚರಿಸಲಿವೆ.

ಈಗಾಗಲೇ ಸೇವೆಯಲ್ಲಿರುವ ಹೈದರಾಬಾದ್‌ನಿಂದ ಹೊರಡುವ ವಿಮಾನ ಮಧ್ಯಾಹ್ನ 1.55 ಗಂಟೆಗೆ ಮೈಸೂರಿಗೆ ಆಗಮಿಸಲಿದೆ. ಹಾಗೆಯೇ ಸಂಜೆ 4.15 ಗಂಟೆಗೆ ಮೈಸೂರಿನಿಂದ ಹೈದರಾಬಾದ್‌ಗೆ ತೆರಳಲಿದೆ. ತಮಿಳುನಾಡಿನ ಚೆನ್ನೈನಿಂದ ಸಂಜೆ 6.50 ಗಂಟೆಗೆ ಮೈಸೂರಿಗೆ ಆಗಮಿಸಲಿರುವ ವಿಮಾನ ತರುವಾಯ ಮೈಸೂರಿನಿಂದ ರಾತ್ರಿ 7.10 ಗಂಟೆಗೆ ಚೆನ್ನೈಗೆ ಪ್ರಯಾಣಿಸಲಿದೆ.

ಸಚಿವ ಕೆ.ಹೆಚ್.ಮುನಿಯಪ್ಪಗೆ ಅಭಿನಂದನೆ



ಒಳಮೀಸಲಾತಿ ಹಂಚಿಕೆ ಹಿನ್ನೆಲೆಯಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ ಅವರನ್ನು ಮೈಸೂರಿನಲ್ಲಿ ದಲಿತ ನಾಯಕರು ಹಾಗೂ ಮುಖಂಡರು ಅಭಿನಂದಿಸಿದರು. ಈ ವೇಳೆ ವಿಧಾನಪರಿಷತ್ ಡಾ.ಡಿ.ತಿಮ್ಮಯ್ಯ, ಮಾಜಿ ಎಂಎಲ್‌ಸಿ ರಮೇಶ್, ಮಾಜಿ ಸಚಿವ ಎಂ.ಶಿವಣ್ಣ, ಮಾಜಿ ಮೇಯರ್ ನಾರಾಯಣ್, ನಗರಪಾಲಿಕೆ ಮಾಜಿ ಸದಸ್ಯ ಆರ್.ಸುನಂದಕುಮಾರ್ ಇನ್ನಿತರ ಮಾದಿಗ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳಿಂದ ಡಾ.ಅಂಬೇಡ್ಕರ್, ಡಾ.ಬಾಬೂಜಿ ಜಯಂತಿ ಆಚರಣೆ

ಇಬ್ಬರೂ ಮಹನೀಯರ ಸಾಧನೆ ಮಹತ್ತರವಾದುದು; ಮಾಹಿತಿ ಆಯೋಗದ ಆಯುಕ್ತ ಹರೀಶ್‌ಕುಮಾರ್ ಅಭಿಮತ



ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಗುರುವಾರ ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಅವರ ಜನ್ಮ ದಿನ ಆಚರಿಸಲಾಯಿತು.

ಮೈಸೂರು, ಏ.30(ಎಂಕೆ)–ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಅವರನ್ನು ಸ್ಮರಿಸುವುದೆಂದರೆ ದೇಶದಲ್ಲಿನ ಸಾಮಾಜಿಕ ನ್ಯಾಯದ ಪ್ರಗತಿಯನ್ನು ಮೌಲ್ಯಮಾಪನ ಮಾಡಿದಂತೆ. ಅಸಮಾನತೆಯುಳ್ಳ ಸಾಮಾಜಿಕ ವ್ಯವಸ್ಥೆಯ ನಡುವೆಯೂ ಈ ಇಬ್ಬರೂ ಮಹನೀಯರ ಸಾಧನೆ ಅಚ್ಚಳಿಯದೆ ಉಳಿದಿದೆ ಎಂದು ಕರ್ನಾಟಕ ರಾಜ್ಯ ಮಾಹಿತಿ ಆಯೋಗದ ಆಯುಕ್ತ ಕೆ.ಹರೀಶ್‌ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಮೈಸೂರು ಜಿಲ್ಲಾ ಬಿಸಿಎಂ ವಿದ್ಯಾರ್ಥಿನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ವತಃ ಡಾ.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಂ ಅವರ ನಡುವೆ ಎಂದಿಗೂ ವೈಯಕ್ತಿಕ ತಕರಾರು ಇರಲಿಲ್ಲ. ಇದ್ದದ್ದು ತಾತ್ವಿಕವಾಗಿ ಮಾತ್ರ. ಈ ರೀತಿಯ ತಕರಾರುಗಳನ್ನು ನಾವುಗಳು ಮುಂದುವರೆಸಿದರೆ ನಮ್ಮ ಹಿನ್ನಡೆಗೆ ಕಾರಣವಾಗುತ್ತವೆ ಎಂದು ತಿಳಿಸಿದರು.

ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರವೂ ದೇಶದಲ್ಲಿದ್ದ ಜಾತಿ ಮತ್ತು ವರ್ಗ ಅಸಮಾನತೆಯುಳ್ಳ ಸಮಾಜದಲ್ಲಿನ ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಇಬ್ಬರು ಮಹನೀಯರು ಶ್ರಮಿಸಿ, ಸಮಸ್ಯೆಗಳನ್ನು ಮೆಟ್ಟಿನಿಂತು ದೇಶದ ರಾಜಕೀಯ ಕ್ಷೇತ್ರದಲ್ಲಿ ಅಚ್ಚಳಿಯದಂತೆ ಉಳಿದಿದ್ದಾರೆ. ಯಾವ ಸಮುದಾಯವನ್ನು ರಾಜಕೀಯದಿಂದ ಹೊರಗಿಡಲಾಗಿತ್ತೋ ಅದೇ ಸಮುದಾಯದ ಮಹನೀಯರು, ದೇಶದ ಎಲ್ಲಾ ಜನತೆಯ ವಿಶ್ವಾಸಗಳಿಸಿರುವುದು ಸೋಜಿಗದ ಸಂಗತಿಯಾಗಿದೆ ಎಂದು ಸ್ಮರಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಅವರ ಬಗ್ಗೆ ನಾವುಗಳು ತೆಗೆಯುತ್ತಿರುವ ತಾತ್ವಿಕ ತಕರಾರುಗಳು ಇರುವಂತೆಯೇ ಪಟ್ಟಭದ್ರ ಹಿತಾಸಕ್ತಿಗಳು ನೋಡಿಕೊಂಡು ಬಂದಿದ್ದಾರೆ. ಅಂಬೇಡ್ಕರ್ ಅವರನ್ನು ಸಂವಿಧಾನ ರಚನಾ ಸಭೆಗೆ ಬರಬಾರದು ಎಂದು ತಡೆದಂತಹ ಶಕ್ತಿಗಳೇ, ಬಾಬು ಜಗಜೀವನರಾಂ ಅವರು ಪ್ರಧಾನಿಯಾಗಬಾರದು ಎಂದು ತಡೆದಿದ್ದವು. ಪಟ್ಟಭದ್ರರಿಂದ ನಿರಂತರವಾಗಿ ಶೋಷಣೆಗೆ ಒಳಗಾದ ಈ ಇಬ್ಬರೂ ನಾಯಕರು ನಮಗೆ ಆದರ್ಶವಾಗಿದ್ದಾರೆ ಎಂದು ಹೇಳಿದರು.

ಡಾ.ಅಂಬೇಡ್ಕರ್ ಅವರು ತಮಗೆ ದೊರೆತ ಎಲ್ಲಾ ಅವಕಾಶಗಳನ್ನು ತಮ್ಮ ವೈಯಕ್ತಿಕ ಹಿತಾಸಕ್ತಿಗೆ ಬಳಸಿಕೊಂಡಿದ್ದರೆ, ಅತ್ಯಂತ ಸುಖವಾಗಿ ಬದುಕಿರುತ್ತಿದ್ದರು. ಅದೇ ರೀತಿ ಬಾಬು ಜಗಜೀವನರಾಂ ಅವರು ಪಡೆದ ಶಿಕ್ಷಣದಿಂದ ಬಹಳ ಸುಲಭವಾಗಿ ತಮ್ಮ ವೈಯಕ್ತಿಕ ಬದುಕನ್ನು ಕಟ್ಟಿಕೊಳ್ಳಬಹುದಾಗಿತ್ತು. ಆದರೆ, ಈ ಇಬ್ಬರು ಮಹನೀಯರು ಮಾಡಿದ್ದು, ದಲಿತರ ಸಬಲೀಕರಣ, ಸಾಮಾಜಿಕ ನ್ಯಾಯದ ವಿಸ್ತರಣೆ ಮತ್ತು ದೇಶದಲ್ಲಿ ತಳ ಸಮುದಾಯಗಳು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವುದಾಗಿತ್ತು ಎಂದು ಸ್ಮರಿಸಿದರು.

ಚಿಂತಕ ವಿಕಾಸ್ ಆರ್.ಮೌರ್ಯ ಮಾತನಾಡಿ, ಅಂಬೇಡ್ಕರ್ ಹಾಗೂ ಬಾಬು ಜಗಜೀವನ್‌ರಾವ್‌ರವರ ಸಿದ್ಧಾಂತಗಳು ಈ ದೇಶವನ್ನು ಮುನ್ನೆಡೆಸಿವೆ. ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಂ ಇಬ್ಬರೂ ಜಾತಿ ವಿನಾಶವಾಗಬೇಕು ಎಂದು ಬಯಸಿದ್ದರು. ಅಂಬೇಡ್ಕರ್‌ರವರು ರಾಜಕೀಯದ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಇರಬೇಕು ಎಂದು ಬಯಸಿದ್ದರು ಎಂದರು.

ದೇಶ ದೊಡ್ಡದು: ಹಿರಿಯ ಕೆ.ಎ.ಎಸ್ ಅಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಜಾತಿ ಪದ್ಧತಿ, ಧರ್ಮದ ಸಂಕೋಲೆ, ಅಸಮಾನತೆ, ಮೇಲುಕೀಳು ಎಂಬ ಮನೋಭಾವನೆಗಳನ್ನು ಬಿಟ್ಟು ನಾವೆಲ್ಲರೂ ಸಮಾನರು. ನಾವು ಮಾನವರು ನಮಗಿಂತ ದೇಶ ದೊಡ್ಡದು ಎಂದು ತಿಳಿದುಕೊಂಡು ನಮ್ಮ ಸುತ್ತಮುತ್ತ ಇರುವವರನ್ನು ಶಿಕ್ಷಿತರನ್ನಾಗಿ ಮಾಡೋಣ. ಇಲ್ಲಿ ಯಾರೂ ಮೇಲಲ್ಲ, ಯಾರು ಕೀಳಲ್ಲ ಎಂದು ತಿಳಿದು ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಳ್ಳೋಣ ಸಮ ಸಮಾಜ ನಿರ್ಮಾಣ ಮಾಡೋಣ ಎಂದರು.

> **ಅತೀ ಹೆಚ್ಚು ಉದ್ಯೋಗಗಳಿರುವ ಸೇವಾ ವಲಯಗಳಾದ ರೈಲ್ವೆ ಇಲಾಖೆ, ಅಂಚೆ ಇಲಾಖೆ, ವಿಮಾನಯಾನ ಸಂಸ್ಥೆಯನ್ನು ಡಾ.ಬಾಬು ಜಗಜೀವನರಾಂ ಬಲಪಡಿಸಿದರು. ಆದರೆ ಇಂದು ಅದೇ ಸಂಸ್ಥೆಗಳು ಖಾಸಗಿಯವರ ಪಾಲಾಗುತ್ತಿವೆ. ಯಾವುದು ಸಾಮಾಜಿಕ ನ್ಯಾಯಪರವೋ ಅದನ್ನು ಅಭಿವೃದ್ಧಿ ವಿರೋಧಿ ಎಂದು ಬಿಂಬಿಸಲಾಗುತ್ತಿದೆ. ಆದ್ದರಿಂದ ಇಂತಹ ಸಮಸ್ಯೆಗಳಿಗೆ ಡಾ.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನರಾಂ ಅವರ ಚಿಂತನೆಗಳು ಪರಿಹಾರ ಒದಗಿಸಲಿವೆ.**
> –ಕೆ.ಹರೀಶ್‌ಕುಮಾರ್, ಆಯುಕ್ತ, ಕರ್ನಾಟಕ ರಾಜ್ಯ ಮಾಹಿತಿ ಆಯೋಗ

ಮಹನೀಯರ ಜಯಂತಿ ಆಚರಣೆಗೆ ಭಿನ್ನಾಭಿಪ್ರಾಯ...!

ಕಾರ್ಯಕ್ರಮದ ವೇಳೆ ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನರಾಂ ಅವರ ಜನ್ಮ ದಿನಾಚರಣೆಯನ್ನು ಒಟ್ಟಾಗಿ ಆಚರಣೆ ಮಾಡುತ್ತಿರುವುದು ಸರಿಯಲ್ಲ ಎಂಬ ಭಿನ್ನಾಭಿಪ್ರಾಯಗಳು ಕೇಳಿಬಂದವು. ಇದರಿಂದ ಕೆಲವರು ವೇದಿಕೆಯಿಂದ ಹೊರಗುಳಿದರೆ, ಕೆಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮುಂಜಾಗ್ರತೆಯಿಂದ ಪೊಲೀಸರ ಭದ್ರತೆಯೊಂದಿಗೆ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದ ಬಳಿಕ ಕೆಲವರು ಪೊಲೀಸರೊಂದಿಗೆ ವಾಗ್ವಾದ ನಡೆಸುತ್ತಿದ್ದ ದೃಶ್ಯಗಳು ಕಂಡುಬಂದವು.

ಐಸಿಎಸ್‌ಇ 10ನೇ ತರಗತಿ ಪರೀಕ್ಷೆ; ನೈಪುಣ್ಯ ಶಾಲೆಗೆ ಶೇ.100 ಫಲಿತಾಂಶ

ಮೈಸೂರು: ಮೈಸೂರಿನ ಆರ್‌ಟಿ ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯು ಐಸಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಸಾಧಿಸಿದೆ. ಈ ಶಾಲೆಯು 2022–23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಆರಂಭವಾಗಿದ್ದು, 10ನೇ ತರಗತಿ ಪ್ರಥಮ ತಂಡದ ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗುವ ಮೂಲಕ ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ. ಜಾನವಿ ರಮೇಶ್(ಶೇ.96.4) ಹಾಗೂ ಮನಸ್ ಪಿ.(ಶೇ.90.4) ಶಾಲೆಯ ಟಾಪರ್‌ಗಳಾಗಿದ್ದಾರೆ. ಎಲ್ಲಾ ವಿದ್ಯಾರ್ಥಿಗಳನ್ನೂ ಪ್ರಾಂಶುಪಾಲರಾದ ಶ್ರೀಮತಿ ದೇಚಮ್ಮ ಹಾಗೂ ಆಡಳಿತ ಮಂಡಳಿಯವರು ಅಭಿನಂದಿಸಿದ್ದಾರೆ.



ಜಾನವಿ ರಮೇಶ್



ಮನಸ್ ಪಿ.

ವಾರ್ತಾ–ಸಾರ್ವಜನಿಕ ಸಂಪರ್ಕ ಇಲಾಖೆ ವಾಹನ ಚಾಲಕ ಮಂಜುನಾಥ್ ವಯೋನಿವೃತ್ತಿ

ಅಭಿನಂದಿಸಿ, ಆತ್ಮೀಯ ಬೀಳ್ಕೊಡುಗೆ



ಮೈಸೂರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ವಾಹನ ಚಾಲಕ ಮಂಜುನಾಥ್ ಪಿ.ಅವರನ್ನು ಅವರ ಧರ್ಮಪತ್ನಿ ರತಿಶ್ರೀಗೌಡ ಅವರೊಂದಿಗೆ ಅಭಿನಂದಿಸಲಾಯಿತು.

ಮೈಸೂರು, ಏ.30– ವಯೋನಿವೃತ್ತಿ ಹೊಂದಿದ ಮೈಸೂರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವಾಹನ ಚಾಲಕ ಮಂಜುನಾಥ್ ಪಿ. ಅವರಿಗೆ ಗುರುವಾರ ಕಚೇರಿಯಲ್ಲಿ ಆತ್ಮೀಯವಾಗಿ ಅಭಿನಂದಿಸಿ, ಬೀಳ್ಕೊಡಲಾಯಿತು.

ಈ ವೇಳೆ ಉಪನಿರ್ದೇಶಕ ವಿನೋದ್ ಚಂದ್ರ ಮಾತನಾಡಿ, ಸರ್ಕಾರದ ಯೋಜನೆಗಳನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ವಾರ್ತಾ ಇಲಾಖೆ ಪಾತ್ರ ಪ್ರಮುಖವಾದದ್ದು. ಪತ್ರಕರ್ತರ ವಾಹನದ ಚಾಲಕರಾಗಿ ಸೇವೆ ಸಲ್ಲಿಸುವಾಗ ತಾಳ್ಮೆ, ಸಂಯಮದಿಂದ ಕರ್ತವ್ಯ ನಿರ್ವಹಿಸಿದ್ದಾರೆ. ಸವಾಲಿನ ಸಂದರ್ಭಗಳಲ್ಲಿಯೂ ಇವರು ತೋರುತ್ತಿದ್ದ ಸಂಯಮ ಮತ್ತು ಕಾರ್ಯ ದಕ್ಷತೆ ಇತರರಿಗೆ ಮಾದರಿ ಎಂದರು.

ಸುದೀರ್ಘ 27 ವರ್ಷ ಕಾಲ ಮೈಸೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಿ ಇವರ ಅಪಾರ ಅನುಭವವು ಇಲಾಖೆ ಕಿರಿಯ ಅಧಿಕಾರಿಗಳಿಗೆ ದಾರಿದೀಪವಾಗಿದೆ. ಇವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದರು.

ಮಂಡ್ಯ ಜಿಲ್ಲೆಯ ಹಿರಿಯ ಸಹಾಯಕ ನಿರ್ದೇಶಕ ಹರೀಶ್ ಟಿ.ಕೆ. ಮಾತನಾಡಿ, ಮಂಜುನಾಥ್ ಸೂಕ್ಷ್ಮ ಜೀವಿಗಳಾಗಿದ್ದರು. ಅತ್ಯಂತ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ತಮ್ಮ ಕೆಲಸವನ್ನು ನಿರ್ವಹಿಸಿದ್ದಾರೆ. ಅವರ ನಿವೃತ್ತಿ ಜೀವನ ನೆಮ್ಮದಿಯಿಂದ ಕೂಡಿರಲಿ ಎಂದು ಶುಭ ಕೋರಿದರು.


ಸಹಾಯಕ ನಿರ್ದೇಶಕಿ ನಿರ್ಮಲ ಎಸ್.ಹೆಚ್. ಮಾತನಾಡಿ, ಮಂಜುನಾಥ್ ತಮ್ಮ ವೃತ್ತಿಯನ್ನು ಅಪಾರವಾಗಿ ಗೌರವಿಸುವ ವ್ಯಕ್ತಿ. ಅವರು ಎಷ್ಟೇ ಕಾರ್ಯ ಒತ್ತಡದಲ್ಲಿದ್ದರೂ ತಮ್ಮ ವೈಯಕ್ತಿಕ ಕೆಲಸ ಗಳನ್ನು ಬದಿಗಿಟ್ಟು ವೃತ್ತಿಪರತೆಗೆ ಮೊದಲ ಆದ್ಯತೆ ನೀಡುತ್ತಾರೆ. ಇವರ ಈ ಕರ್ತವ್ಯ ನಿಷ್ಠೆ ನಮಗೆ ಸಂತೋಷ ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಮಂಜುನಾಥ್ ಪಿ. ಮಾತನಾಡಿ, ಕೇವಲ ಚಾಲನೆ ಮಾಡುವುದು ನನ್ನ ಕೆಲಸವಲ್ಲ, ಪ್ರಯಾಣಿಕರ ಸುರಕ್ಷತೆ ಮತ್ತು ಸಮಯಕ್ಕೆ ಸರಿಯಾಗಿ ತಲುಪಿಸುವುದು ನನ್ನ ವ್ಯಕ್ತಿ ಧರ್ಮ. ಸರ್ಕಾರಿ ವಾಹನ ಚಾಲಕನಾಗಿ ಸಾಮಾನ್ಯ ಜನರ ಸೇವೆ ಮಾಡುವ ಅವಕಾಶ ಸಿಕ್ಕಿದ್ದು ನನ್ನ ಪುಣ್ಯ. ಇಷ್ಟು ವರ್ಷಗಳ ಕಾಲ ವೃತ್ತಿ ಜೀವನ ತೃಪ್ತಿ ನೀಡಿದೆ ಎಂಬುದು ನನ್ನ ನಿವೃತ್ತ ಜೀವನಕ್ಕೆ ದೊಡ್ಡ ಆಸ್ತಿ ಎಂದು ಭಾವುಕರಾಗಿ ನುಡಿದರು.

ಕಾರ್ಯಕ್ರಮದಲ್ಲಿ ವಾರ್ತಾ ಸಹಾಯಕ ರಮೇಶ್ ಕೆ.ಎನ್. ಸ್ವಾಗತಕಾರರು ಹಾಗೂ ಗ್ರಂಥಪಾಲಕರಾದ ಗಾಯತ್ರಿ, ದ್ವಿತೀಯ ದರ್ಜೆ ಸಹಾಯಕ ಪ್ರತಾಪ್ ಎಂ.ಡಿ., ಮಂಜುನಾಥ್ ಅವರ ಧರ್ಮಪತ್ನಿ ರತಿಶ್ರೀ ಗೌಡ, ಮಗಳಾದ ಮಂಜುಶ್ರೀ ಗೌಡ ಇನ್ನಿತರ ಸಿಬ್ಬಂದಿ ಉಪಸ್ಥಿತರಿದ್ದರು.

ನಿಧನ

ನಾಗಮ್ಮ



ಮೈಸೂರು, ಏ.30– ಟಿ.ನರಸೀಪುರ ತಾಲೂಕು ರಂಗಸಮುದ್ರ ಗ್ರಾಮದ ನಿವಾಸಿ ಶ್ರೀಮತಿ ನಾಗಮ್ಮ(58) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ಪತಿ ವೆಂಕಟೇಶ್, ಪುತ್ರ ಸೋಮಣ್ಣ, ಪುತ್ರಿ ಯಶೋಧ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಮೇ 1) ಬೆಳಗ್ಗೆ 11 ಗಂಟೆಗೆ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು, ಬೆಂಗಳೂರು, ಮಂಗಳೂರಲ್ಲಿ ಡೇಟಾ ಪಾರ್ಕ್ ಸ್ಥಾಪನೆಗೆ ನಿರ್ಣಯ

ಇಂಧನ ಸಚಿವ ಕೆ.ಜೆ.ಜಾರ್ಜ್ ಅಧ್ಯಕ್ಷತೆಯ ಸಭೆಯಲ್ಲಿ ಮಹತ್ವದ ತೀರ್ಮಾನ




ಬೆಂಗಳೂರಿನ ಶಕ್ತಿ ಭವನದಲ್ಲಿ ಡೇಟಾ ಪಾರ್ಕ್ ಸ್ಥಾಪನೆ ಸಂಬಂಧ ಇಂಧನ ಸಚಿವ ಕೆ.ಜೆ.ಜಾರ್ಜ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಐಟಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಇತರೆ ಅಧಿಕಾರಿಗಳಿದ್ದಾರೆ.

ಬೆಂಗಳೂರು, ಏ.30(ಬಿಎಲ್‌ಯು)– ರಾಜ್ಯದ ಕೈಗಾರಿಕೆಗಳ ಅಭಿವೃದ್ಧಿಗೆ ಸುಸ್ಥಿರ ಡೇಟಾ ಕೇಂದ್ರ (ಸಸ್ಟೈನಬಲ್ ಡೇಟಾ ಸೆಂಟರ್ಸ್)ಗಳ ಅಗತ್ಯವನ್ನು ಮನಗಂಡು ಮೈಸೂರು, ಬೆಂಗಳೂರು ಹಾಗೂ ಮಂಗಳೂರಿನಲ್ಲಿ ಡೇಟಾ ಪಾರ್ಕ್ ಸ್ಥಾಪಿಸಲು ತೀರ್ಮಾನ ಕೈಗೊಳ್ಳಲಾಗಿದೆ.

ಬೆಂಗಳೂರಿನ ಶಕ್ತಿ ಭವನದಲ್ಲಿ ಇಂದು ಇಂಧನ ಸಚಿವ ಕೆ.ಜೆ.ಜಾರ್ಜ್, ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹಾಗೂ ಐಟಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮಹತ್ವದ ತೀರ್ಮಾನಿಸಲಾಗಿದೆ.

ಬೆಂಗಳೂರಿನ ಹೊಸಕೋಟೆ ಬಳಿ 500 ಮೆಗಾ ವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಪಾರ್ಕ್ ಸ್ಥಾಪಿಸಲಾಗುವುದು. ಮಂಗಳೂರಿನಲ್ಲಿ ಕೂಡ ಡೇಟಾ ಪಾರ್ಕ್ ಸ್ಥಾಪನೆಗೆ ಭೂಮಿ ಲಭ್ಯವಿದೆ. ಆದರೆ ಮೈಸೂರಿನಲ್ಲಿ ಮಾತ್ರ ಸೂಕ್ತ ಜಾಗ ಗುರುತಿಸಲು ನಿರ್ಧರಿಸಲಾಯಿತು. ಈ ಪಾರ್ಕ್ ಸ್ಥಾಪನೆಗೆ ಹೂಡಿಕೆ ಮಾಡುವವರಿಗೆ ಸಮರ್ಪಕ ವಿದ್ಯುತ್ ಹಾಗೂ ನೀರು ನೀಡಲಾಗುವುದು. ಈ ಸಂಬಂಧ ಹೂಡಿಕೆದಾರರ ಜೊತೆ ಸಭೆ ನಡೆಸಲು ತೀರ್ಮಾನಿಸಲಾಯಿತು. ಮುಂದಿನ ಹಂತದಲ್ಲಿ ಜಲ ಸಂಪನ್ಮೂಲ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿರುವ ತಂಡ ರಚನೆ ಮಾಡಿ, ತ್ವರಿತವಾಗಿ ಡೇಟಾ ಪಾರ್ಕ್ ಸ್ಥಾಪನೆ ಮಾಡಲು ನಿರ್ಣಯ ಮಾಡಲಾಯಿತು. ಇಂದಿನ ಸಭೆಯಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಇಂಧನ ಮತ್ತು ಜಲಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ ಗುಪ್ತ, ಐಟಿ ಇಲಾಖೆ ಕಾರ್ಯದರ್ಶಿ ಮಂಜುಳಾ ಸೇರಿದಂತೆ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ಚಾಮುಂಡೇಶ್ವರಿ ದರ್ಶನ



ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಡಾ.ಎಲ್.ಮುರುಗನ್ ಅವರು ಗುರುವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಆಕಾಶವಾಣಿ ಉಪನಿರ್ದೇಶಕ ಕೇಶವ ಮೂರ್ತಿ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಮರು ಮೌಲ್ಯ ಮಾಪನದಲ್ಲಿ 1 ಅಂಕ ಹೆಚ್ಚಳ

ಎಲ್.ಅಮೃತ ಕಾಮರ್ಸ್ ವಿಭಾಗದಲ್ಲಿ ಮೈಸೂರಿಗೆ ಪ್ರಥಮ; ರಾಜ್ಯ ಮಟ್ಟದಲ್ಲಿ ನಾಲ್ಕನೇ ಸ್ಥಾನ



ಎಲ್.ಅಮೃತ

ಮೈಸೂರು,ಏ.30(ಎಂಟಿವೈ)– ದ್ವಿತೀಯ ಪಿಯುಸಿ ಮರು ಮೌಲ್ಯಮಾಪನದಿಂದಾಗಿ ಮೈಸೂರಿನ ವಿದ್ಯಾರ್ಥಿನಿಯೊಬ್ಬರಿಗೆ ಒಂದು ಅಂಕ ಹೆಚ್ಚು ಬಂದಿದ್ದು, ಇದರಿಂದ ಕಾಮರ್ಸ್ ವಿಭಾಗದಲ್ಲಿ ಈಕೆ ಮೈಸೂರು ಜಿಲ್ಲೆಗೆ ಪ್ರಥಮ ಹಾಗೂ ರಾಜ್ಯಮಟ್ಟದಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದಾಳೆ.

ಮೈಸೂರಿನ ಬೋಗಾದಿ ರಸ್ತೆಯ ಗಂಗೋತ್ರಿ ಪದವಿ ಪೂರ್ವ ಕಾಲೇಜಿನ ಕಾಮರ್ಸ್ ವಿಭಾಗದ ವಿದ್ಯಾರ್ಥಿನಿ ಎಲ್.ಅಮೃತಗೆ ಈ ಮೊದಲು 596 ಅಂಕ ಬಂದಿತ್ತು. ಹಾಗಾಗಿ ಮೈಸೂರು ಜಿಲ್ಲೆಯಲ್ಲಿ ಎರಡನೇ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 5ನೇ ಸ್ಥಾನ ಘೋಷಿಸಲಾಗಿತ್ತು. ಬಿಸಿನೆಸ್ ಸ್ಟಡೀಸ್ ಮತ್ತು ಅಕೌಂಟೆನ್ಸಿಯಲ್ಲಿ 100ಕ್ಕೆ 99 ಅಂಕ ಬಂದಿದ್ದರೂ, ಮರು ಮೌಲ್ಯಮಾಪನಕ್ಕೆ ಹಾಕಿದ್ದರು. ಈಗ ಫಲಿತಾಂಶ ಪ್ರಕಟವಾಗಿದ್ದು, ಎಲ್.ಅಮೃತಗೆ ಬಿಸಿನೆಸ್ ಸ್ಟಡೀಸ್‌ನಲ್ಲಿ 1 ಅಂಕ ಹೆಚ್ಚುವರಿ ಬಂದಿದ್ದು, 100ಕ್ಕೆ 100 ದೊರೆತಿದೆ. ಇದರಿಂದ 600 ಅಂಕಕ್ಕೆ 597 ಅಂಕ ಪಡೆದು ಕಾಮರ್ಸ್ ವಿಭಾಗದಲ್ಲಿ ಜಿಲ್ಲೆಗೆ ಮೊದಲ ಸ್ಥಾನ, ರಾಜ್ಯದಲ್ಲಿ 4ನೇ ಸ್ಥಾನ ತನ್ನದಾಗಿಸಿಕೊಂಡಿದ್ದಾರೆ.

> **ನನಗೆ ಬಿಸಿನೆಸ್ ಸ್ಟಡೀಸ್ ಮತ್ತು ಅಕೌಂಟೆನ್ಸಿಯಲ್ಲಿ 100ಕ್ಕೆ 100 ಅಂಕ ಬರುತ್ತದೆ ಎಂಬ ವಿಶ್ವಾಸ ಇತ್ತು. ಆ ಕಾರಣದಿಂದ ಮರು ಮೌಲ್ಯಮಾಪನಕ್ಕೆ ಹಾಕಿದೆ. ಈಗ ಬಿಸಿನೆಸ್ ಸ್ಟಡೀಸ್‌ನಲ್ಲಿ ಒಂದು ಅಂಕ ಹೆಚ್ಚಾಗಿ ಬಂದಿದೆ. ಇಂಗ್ಲೀಷ್‌ನಲ್ಲಿ 100, ಹಿಂದಿ 98, ಎಕನಾಮಿಕ್ಸ್ 100, ಬಿಸಿನೆಸ್ ಸ್ಟಡೀಸ್ 100, ಅಕೌಂಟೆನ್ಸಿ 99, ಕಂಪ್ಯೂಟರ್ ಸೈನ್ಸ್ 100 ಅಂಕ ಬಂದಿದೆ.**
> –ಎಲ್.ಅಮೃತ, ಕಾಮರ್ಸ್ ವಿಭಾಗದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿ.

ಭರತನಾಟ್ಯ, ಸಂಗೀತ ತರಬೇತಿಗೆ ಪ್ರವೇಶಾತಿ ಆರಂಭ

ಮೈಸೂರು,ಏ.30–ಮೈಸೂರಿನ ಅಗ್ರಹಾರದ ನಂಜುಮಳಿಗೆ ವೃತ್ತದ ಬಳಿಯಿರುವ ರುಕ್ಮಿಣಿ ಅಕಾಡೆಮಿ ನೃತ್ಯ ಮತ್ತು ಸಂಗೀತ ತರಬೇತಿ ಸಂಸ್ಥೆಯ ವತಿಯಿಂದ 2026ನೇ ಸಾಲಿನ ಭರತನಾಟ್ಯ ಮತ್ತು ಕರ್ನಾಟಕ ಸಂಗೀತ ತರಬೇತಿಗೆ ಪ್ರವೇಶಾತಿ ಆರಂಭವಾಗಿದೆ. 5 ವರ್ಷ ಮೇಲ್ಪಟ್ಟ ಮಕ್ಕಳು ಹಾಗೂ ವಯಸ್ಕರಿಗೆ ಪ್ರವೇಶಾತಿಗೆ ಅವಕಾಶ ಇರುತ್ತದೆ. ತರಗತಿಗಳು ಜೂನ್ ತಿಂಗಳಿಂದ ಆರಂಭವಾಗಲಿವೆ. ಹೆಚ್ಚಿನ ಮಾಹಿತಿಗೆ ಮೊ: 9113839197 ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಶುದ್ಧ ಕುಡಿಯುವ ನೀರಿನ ಘಟಕದ ದುಸ್ಥಿತಿ

ಅಧಿಕಾರಿಗಳ ನಿರ್ವಹಣೆ ವೈಫಲ್ಯಕ್ಕೆ ನಿದರ್ಶನ!



ಕೃಷ್ಣಮೂರ್ತಿಪುರಂನ ಶುದ್ಧ ಕುಡಿಯುವ ನೀರಿನ ಘಟಕ ಕೆಟ್ಟು ನಿಂತಿರುವುದು.

ಮೈಸೂರು, ಏ.30(ವಿವಿಹೆಚ್)– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಮೈಸೂರು ಮಹಾನಗರ ಪಾಲಿಕೆ ನಾಗರಿಕ ಸೇವಾ ಕೇಂದ್ರ ಮತ್ತು ವಲಯ ಕಚೇರಿ–2 ಆವರಣದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಸ್ಥಾಪಿಸಲಾಗಿದ್ದ ಶುದ್ಧ ಕುಡಿಯುವ ನೀರಿನ ಘಟಕ ಹಲವು ದಿನಗಳಿಂದ ಹಾಳಾಗಿದ್ದು, ಬೇಸಿಗೆಯ ತಾಪದಲ್ಲಿ ನಾಗರಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ.

ಶುದ್ಧ ಕುಡಿಯುವ ನೀರಿನ ಘಟಕ ಕಳೆದ ಹಲವು ದಿನಗಳಿಂದ ಹಾಳಾಗಿರುವ ಪರಿಣಾಮ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಸ್ಥಳೀಯ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಉದ್ದೇಶದಿಂದ ಅಳವಡಿಸಲಾಗಿದ್ದ ಈ ಘಟಕ ಇದೀಗ ನಿರ್ವಹಣೆಯ ಕೊರತೆಯಿಂದ ಹಾಳಾಗಿದೆ. ಪ್ರತಿದಿನ ನೂರಾರು ಜನರು ಈ ನೀರಿನ ಘಟಕವನ್ನು ಅವಲಂಬಿಸುತ್ತಿದ್ದರು. ಘಟಕದ ನೀರು ಪೂರೈಕೆ ವ್ಯವಸ್ಥೆಯಲ್ಲಿ ದೋಷ ಉಂಟಾಗಿರುವುದರಿಂದ ಹಲವು ದಿನಗಳಿಂದ ನೀರು ಬರುತ್ತಿಲ್ಲ ಎಂದು ಸ್ಥಳೀಯರು ದೂರಿದ್ದಾರೆ. ಬೇಸಿಗೆಯ ತಾಪಮಾನ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಹಿನ್ನೆಲೆ ಸಾರ್ವಜನಿಕ ಕುಡಿಯುವ ನೀರಿನ ಘಟಕಗಳ ನಿರ್ವಹಣೆ ಅತ್ಯಗತ್ಯವಾಗಿದೆ ಹೀಗಿದ್ದರೂ ಇದಾವುದರ ಬಗ್ಗೆಯೂ ಕಿಂಚಿತ್ತು ಯೋಚನೆ ಮಾಡದೆ, ಸಮರ್ಪಕ ನಿರ್ವಹಣೆ ಮಾಡುವಲ್ಲಿ ಪಾಲಿಕೆ ಎಡವುತ್ತಿದೆ ಎಂದು ನಾಗರಿಕರು ಬೇಸರಿಸಿದ್ದಾರೆ.

ಕಳೆದ ಒಂದು ವಾರದಿಂದ ಈ ಘಟಕ ಕೆಟ್ಟು ನಿಂತಿದೆ. ಪಾಲಿಕೆ ವಲಯ ಕಚೇರಿ–2 ಕೂಡ ಇಲ್ಲೇ ಇದ್ದು, ಘಟಕ ನಿರ್ವಹಣೆಗೆ ಗಮನ ನೀಡದಿರುವುದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಘಟಕದಲ್ಲಿ ಹಾಕಲಾಗಿರುವ ವಿದ್ಯುತ್ ಬಲ್ಬ್‌ಗಳು ಬೆಳಗ್ಗೆ, ರಾತ್ರಿಯೆನ್ನದೇ ಉರಿಯುತ್ತಲೇ ಇರುತ್ತವೆ. ಅವುಗಳನ್ನು ಬಂದ್ ಮಾಡುವ ಕೆಲಸಕ್ಕೂ ಈವರೆಗೆ ಯಾರೂ ಮುಂದಾಗಿಲ್ಲ. ಇನ್ನೂ ಮೈದಾನದ ಧೂಳು, ಕಸದ ರಾಶಿಗಳು ಸುತ್ತಲೂ ಚೆಲ್ಲಿರುತ್ತವೆ. ಸ್ವಚ್ಛತೆಯೆಡೆಗೆ ಯಾರಿಗೂ ಗಮನವೇ ಇಲ್ಲ. ಜನನಿಬಿಡ ಪ್ರದೇಶದಲ್ಲಿಯೇ ಈ ರೀತಿಯ ನಿರ್ಲಕ್ಷ್ಯ ತೋರುವುದು ಖಂಡನೀಯ ಎಂದು ವಿವರಿಸಿದರು.

ಜನರಿಗೆ ಅನುಕೂಲವಾಗಲೆಂದು ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಇಂತಹ ಸೌಲಭ್ಯಗಳನ್ನು ಕಲ್ಪಿಸುತ್ತವೆ. ಆದರೆ ಸರಿಯಾದ ನಿರ್ವಹಣೆ ಇಲ್ಲದಿದ್ದರೆ ಸಾರ್ವಜನಿಕರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಸ್ಥಳೀಯ ಸಾಮಾಜಿಕ ಕಳಕಳಿಯುಳ್ಳ ಸಾರ್ವಜನಿಕರೊಬ್ಬರು ಅಸಮಾಧಾನ ವ್ಯಕ್ತಪಡಿಸಿದರು.


ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಘಟಕವನ್ನು ದುರಸ್ತಿಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಬೇಕು ಎಂದು ನಿವಾಸಿಗಳು ಆಗ್ರಹಿಸಿದ್ದಾರೆ. ಬೇಸಿಗೆಯ ಸಂದರ್ಭದಲ್ಲಿ ನಗರದಲ್ಲಿನ ಎಲ್ಲಾ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪರಿಶೀಲಿಸಿ ಸಮರ್ಪಕ ನಿರ್ವಹಣೆ ಕೈಗೊಳ್ಳಬೇಕೆಂಬ ಒತ್ತಾಯವೂ ಈ ವೇಳೆ ಕೇಳಿಬಂದಿದೆ.

ಮೇ 10ರಂದು ಮೊಬೈಲ್ ಫೋಟೋಗ್ರಫಿ ಮಾಸ್ಟರ್‌ಕ್ಲಾಸ್

ಮೈಸೂರು, ಏ.30–ಹವ್ಯಾಸಿ ಛಾಯಾಗ್ರಾಹಕ ಜಿ.ಎಲ್.ತ್ರಿಪುರಾಂತಕ ಮೇ 10ರಂದು ಮೈಸೂರಿನ ಮೆಟ್ರೊಪೋಲ್ ಹೋಟೆಲ್‌ನಲ್ಲಿ ಒಂದು ದಿನದ ಮೊಬೈಲ್ ಫೋಟೋಗ್ರಫಿ ಹಾಗೂ ವಿಡೀಯೋಗ್ರಫಿ ಕಾರ್ಯಾಗಾರ ಹಮ್ಮಿಕೊಂಡಿದ್ದಾರೆ.

ಇದು 7ನೇ ಕಾರ್ಯಾಗಾರವಾಗಿದ್ದು, ಇವರೊಟ್ಟಿಗೆ ಹಿರಿಯ ಛಾಯಾಗ್ರಾಹಕ ಬಿ.ಎಸ್.ರಾಜಾರಾಂ ಸಹ ಕಾರ್ಯಾಗಾರದಲ್ಲಿ ತರಬೇತುದಾರರಾಗಿರುತ್ತಾರೆ. ಸಾಧಾರಣ ಮೊಬೈಲ್ ಕ್ಯಾಮೆರಾದಲ್ಲಿಯೇ ಅಸಾಧಾರಣ ಚಿತ್ರ ಹಾಗೂ ವಿಡಿಯೋ ಮಾಡುವುದು ಹಾಗೂ ಮೊಬೈಲ್ ಆಪ್‌ಗಳನ್ನು ಬಳಸಿ ಎಡಿಟಿಂಗ್ ಮಾಡುವ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ಈ ತರಬೇತಿ ಕಾರ್ಯಾಗಾರದಲ್ಲಿ ತಿಳಿಸಿಕೊಡಲಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಫೋಟೋ ಹಾಗೂ ವಿಡೀಯೋಗಳನ್ನು ಅಪ್‌ಲೋಡ್ ಮಾಡುವ ತರಬೇತಿ ಸಹ ನೀಡಲಿದ್ದಾರೆ. ಮೊಬೈಲ್‌ನಲ್ಲಿ ಚಿತ್ರಿಸಿದ ಫೋಟೋಗಳ ಪ್ರದರ್ಶನ ಸಹ ಇರುತ್ತದೆ. ಆಸಕ್ತರು ಮಾಹಿತಿಗಾಗಿ ಮೊ.ಸಂ.9686677284 ಸಂಪರ್ಕಿಸಬಹುದು.

ನಾರಾಯಣಪುರ ಡೇರಿ ಬಿಎಂಸಿ ಘಟಕಕ್ಕೆ ಚಾಲನೆ



ಬಿಎಂಸಿ ಘಟಕಕ್ಕೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.

ಚಿನಕುರಳಿ, ಏ.30– ಇಲ್ಲಿಗೆ ಸಮೀಪದ ನಾರಾಯಣಪುರ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನೂತನ ಬಿಎಂಸಿ ಘಟಕಕ್ಕೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಹಾಲು ಉತ್ಪಾದಕರ ಸಹಕಾರ ಸಂಘಗಳು ದೇವಸ್ಥಾನವಿದ್ದಂತೆ. ಡೇರಿಗಳಲ್ಲಿ ರಾಜಕೀಯ ಬದಿಗೊತ್ತಿ ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು. ಜೊತೆಗೆ ಯಾವುದೇ ಅವ್ಯವಹಾರ ನಡೆಯದಂತೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದರು.

ರೈತರು ಡೇರಿಗೆ ಗುಣಮಟ್ಟದ ಹಾಲು ಪೂರೈಕೆ ಮಾಡಬೇಕು. ಒಕ್ಕೂಟದ ಹಾಲನ್ನು ಹೊರ ರಾಜ್ಯಗಳಲ್ಲೂ ಮಾರಾಟ ಮಾಡಲಾಗುತ್ತಿದೆ. ಪ್ರಸ್ತುತ ಒಕ್ಕೂಟಕ್ಕೆ 12 ಲಕ್ಷಕ್ಕೂ ಅಧಿಕ ಹಾಲು ಪೂರೈಕೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಇನ್ನೂ ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.

ನಾನು ನಿರ್ದೇಶಕನಾದ ಬಳಿಕ ತಾಲೂಕಿನ ಎಲ್ಲಾ ಸಹಕಾರ ಸಂಘಗಳಿಗೂ ಭೇಟಿ ನೀಡಿದ್ದು, ಬಹುತೇಕ ಸಹಕಾರ ಸಂಘಗಳು ಲಾಭದಾಯಕವಾಗಿ ನಡೆಯುತ್ತಿವೆ. ಆದರೆ ನಾರಾಯಣಪುರ ಸಂಘವು ನಷ್ಟದಲ್ಲಿ ನಡೆಯುತ್ತಿದೆ. ಮುಂದಿನ ವರ್ಷದೊಳಗೆ ಸಂಘವನ್ನು ಲಾಭದಾಯಕವಾಗಿ ಮುನ್ನಡೆಸಬೇಕು ಎಂದ ಅವರು ಮುಂದಿನ ದಿನಗಳಲ್ಲಿ ಡೇರಿಯ ಮೇಲಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದ ಬಳಿಕ ಶಾಸಕ ದರ್ಶನ್ ಪುಟ್ಟಣ್ಣಯ್ಯ ಡೇರಿಗೆ ಆಗಮಿಸಿ ಶುಭ ಕೋರಿದರು. ಈ ವೇಳೆ ಮಾರ್ಗ ವಿಸ್ತರಣಾಧಿಕಾರಿಗಳಾದ ಪ್ರಜ್ವಲ್, ನಾಗೇಂದ್ರ, ಡಾ. ಸಂತೋಷ್, ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ರಾಧಾಕೃಷ್ಣ, ಡೇರಿ ಅಧ್ಯಕ್ಷ ಮರೀಗೌಡ, ಉಪಾಧ್ಯಕ್ಷೆ ನಯನ, ನಿರ್ದೇಶಕರಾದ ಕೃಷ್ಣೇಗೌಡ, ಯೋಗೇಶ್, ರವಿ, ಸೋಮು, ಎನ್.ಬಿ.ಅನಿಲ್ ಕುಮಾರ್, ಎನ್.ಜಿ.ದಯಾನಂದ್, ಮಂಜುಳ, ಶಾರದಮ್ಮ, ರಾಧಮ್ಮ, ರೇಖಾ, ಕಾರ್ಯದರ್ಶಿ ಎನ್.ಎಸ್.ರಘುಕುಮಾರ್, ಮುಖಂಡರಾದ ಪುಟ್ಟೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕುಮಾರ್, ಹನುಮೇಗೌಡ, ಸ್ವಾಮಿ, ಬೋರಲಿಂಗಯ್ಯ, ಚಿನಕುರಳಿ ರಮೇಶ್, ಮಂಜುನಾಥ್ ಸೇರಿದಂತೆ ಹಲವರಿದ್ದರು.

ಗುಣಮಟ್ಟದ ಆಹಾರ ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಿ

ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ



ಕಾರ್ಯಕ್ರಮಕ್ಕೆ ನಿಶ್ಚಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು.

ಭಾರತೀನಗರ, ಏ.30– ಪ್ರಸ್ತುತ ಜನರು ಹಣದ ಮೋಹಕ್ಕೆ ಒಳಗಾಗಿ ದೇಹದ ಮೇಲಿನ ಕಾಳಜಿಯನ್ನೇ ಮರೆತು ಬಿಟ್ಟಿದ್ದಾರೆ. ಪ್ರತಿಯೊಬ್ಬರೂ ಗುಣಮಟ್ಟದ ಆಹಾರ ಸೇವಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ಭಾರತೀನಗರ ಸ್ಫೂರ್ತಿ ಲಯನ್ಸ್ ಸಂಸ್ಥೆಯಿಂದ ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ಆಯೋಜಿಸಿದ್ದ ಹಸಿವು–ಆರೈಕೆ ಹಾಗೂ ಹೆಲ್ತ್‌ಕಿಟ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ತಮ್ಮ ಹುಟ್ಟುಹಬ್ಬ ಹಾಗೂ ಇತರೆ ಶುಭ ಸಮಾರಂಭಗಳನ್ನು ಮೋಜು ಮಸ್ತಿಯಿಂದ ಮಾಡುವ ಬದಲು ಇಂತಹ ಸೇವಾ ಕಾರ್ಯಕ್ಕೆ ಕೈ ಜೋಡಿಸಿದರೆ ಹಸಿದವರಿಗೆ ಊಟ ನೀಡಿದಂತಾಗುತ್ತದೆ. ಇದೊಂದು ಪುಣ್ಯದ ಕಾರ್ಯವಾಗಿದೆ ಎಂದರು.

ಸ್ಫೂರ್ತಿ ಲಯನ್ಸ್ ಸಂಸ್ಥೆ ಅಧ್ಯಕ್ಷ ಕೆ.ಎಲ್.ಶಿವರಾಮು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ ವೇಳೆ ಆಸ್ಪತ್ರೆಯಲ್ಲಿದ್ದ ರೋಗಿಗಳಿಗೆ ಮತ್ತು ಸಾರ್ವಜನಿಕರಿಗೆ ಹಸಿವು–ಆರೈಕೆ ಕಾರ್ಯಕ್ರಮದಡಿ ಆಹಾರ ವಿತರಿಸಲಾಯಿತು.

ಕಾರ್ಯಕ್ರಮಕ್ಕೂ ಮುನ್ನಾ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ಎತ್ತಿನಗಾಡಿಯಲ್ಲಿ ನಿಶ್ಚಲಾನಂದನಾಥ ಸ್ವಾಮೀಜಿ ಮತ್ತು ಗಣ್ಯರನ್ನು ಸಿದ್ದೇಗೌಡರ ಕಲಾ ತಂಡ, ಪೂಜಾ ಕುಣಿತದೊಂದಿಗೆ ಮೆರವಣಿಗೆ ಮೂಲಕ ವೇದಿಕೆಗೆ ಕರೆ ತರಲಾಯಿತು.

ವೇದಿಕೆಯಲ್ಲಿ ಲಯನ್ಸ್ ಸಂಸ್ಥೆ ಜಿಲ್ಲಾ ರಾಜ್ಯಪಾಲ ಕೆ.ಎಲ್.ರಾಜಶೇಖರ್, ಜಿಲ್ಲಾ 2ನೇ ಉಪ ರಾಜ್ಯಪಾಲ ಸಿದ್ದೇಗೌಡ, ಪ್ರಾಂತೀಯ ಅಧ್ಯಕ್ಷ ಟಿ.ಆರ್.ಸೋಮೇಗೌಡ, ಸಂಸ್ಥೆ ಕಾರ್ಯದರ್ಶಿ ಬಿ.ಎಸ್.ಬೋರೇಗೌಡ, ಖಜಾಂಚಿ ಪುಟ್ಟರಾಮರಾಜೇ ಅರಸು, ಸಿ.ಚಂದ್ರಶೇಖರ್, ಪತ್ರಿಕಾ ಕಾರ್ಯದರ್ಶಿ ಅಣ್ಣೂರು ಸತೀಶ್, ಸದಸ್ಯರಾದ ಸಂದೀಪ್, ಚನ್ನಶೆಟ್ಟಿ, ಬೋರೇಗೌಡ, ದೇವರಾಜು, ರಘು, ವೆಂಕಟೇಶ್, ಹನುಮಯ್ಯ, ಕೃಷ್ಣೇಗೌಡ, ಪಿಡಿಓ ಸುಧಾ, ಇನ್ನರ್ ವ್ಹೀಲ್ ಸಂಸ್ಥೆ ಅಧ್ಯಕ್ಷೆ ಧರಣಿ, ಲೀಲಾ, ತಾರಾ, ಸೌಭಾಗ್ಯಮ್ಮ, ಸಿದ್ದರಾಮೇಗೌಡ, ದಾಸೇಗೌಡ ಸೇರಿದಂತೆ ಹಲವರಿದ್ದರು.

> “ ಪ್ರಸ್ತುತ ಜನರು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ. ತಮ್ಮ ಆರೋಗ್ಯದ ಬಗ್ಗೆ ಗಮನ ಹರಿಸುವ ಜನರ ಸಂಖ್ಯೆಯೇ ಕಡಿಮೆಯಾಗುತ್ತಿದೆ. ಈ ಹಿಂದೆ 100 ವರ್ಷ ಜೀವಿಸುತ್ತಿದ್ದ ಮಾನವ ಇಂದು 30ನೇ ವಯಸ್ಸಿಗೆ ಹಲವು ಕಾಯಿಲೆಗಳಿಗೆ ಒಳಗಾಗುತ್ತಿದ್ದಾನೆ. ಹಾಗಾಗಿ ಜಂಕ್‌ಫುಡ್‌ಗಳಂತಹ ಆಹಾರವನ್ನು ಬಿಟ್ಟು ಗುಣಮಟ್ಟದ ಆಹಾರ ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಿ.–ಡಾ.ಟಿ.ಹೆಚ್.ಅಂಜನಪ್ಪ, ಖ್ಯಾತ ಹಿರಿಯ ತಜ್ಞವೈದ್ಯ

ಬಿಜೆಪಿ ಸಂಘಟನೆಗೆ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಸಲಹೆ



ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಇತರರು ಸ್ವಾಗತಿಸಿದರು.

ಶ್ರೀರಂಗಪಟ್ಟಣ, ಏ.30– ಜಿಲ್ಲೆಯಲ್ಲಿ ಪಕ್ಷ ಸಂಘಟನೆಗೆ ಬಿಜೆಪಿ ಕಾರ್ಯಕರ್ತರು ಮುಂದಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಲಹೆ ನೀಡಿದರು.

ಶ್ರೀರಂಗಪಟ್ಟಣ ಮಾರ್ಗವಾಗಿ ಬುಧವಾರ ಮೈಸೂರಿಗೆ ತೆರಳುತ್ತಿದ್ದ ಅವರು, ಕಿರಂಗೂರು ವೃತ್ತದ ಬನ್ನಿ ಮಂಟಪದ ಬಳಿ ಪಕ್ಷದ ಮುಖಂಡರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿ, ಬಿಜೆಪಿ ಬಗ್ಗೆ ಜನರಲ್ಲಿ ಅಪಾರ ಒಲವಿದೆ. ಪಕ್ಷದ ಬಗೆಗಿನ ಜನರ ಅಭಿಪ್ರಾಯವನ್ನು ಮತ್ತಷ್ಟು ಗಟ್ಟಿಗೊಳಿಸಬೇಕು. ಎಲ್ಲಾ ವರ್ಗದ ಜನರನ್ನೂ ವಿಶ್ವಾಸಕ್ಕೆ ಪಡೆಯಬೇಕು ಎಂದರು.

ಈ ವೇಳೆ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ನಗರ ಘಟಕದ ಅಧ್ಯಕ್ಷ ಜಿ.ಇ.ಸುಧಾಕರ್, ಪುರಸಭೆ ಮಾಜಿ ಸದಸ್ಯರಾದ ಎಸ್.ಪ್ರಕಾಶ್, ಗಂಜಾಂ ಶಿವು, ಹೆಚ್.ಎಸ್.ಪುಟ್ಟರಾಮು, ಎಪಿಎಂಸಿ ಮಾಜಿ ಅಧ್ಯಕ್ಷ ಪಾಲಹಳ್ಳಿ ಶಂಕರೇಗೌಡ, ಮುಖಂಡರಾದ ಉಮೇಶ್‌ಕುಮಾರ್, ಹೇಮಂತ ಕುಮಾರ್, ಎಂ.ಜೆ. ಪುಟ್ಟರಾಜು, ಪ್ರಭಾಕರ್, ಮಹದೇವಸ್ವಾಮಿ, ಚೇತನ್, ಶೇಖರ್ ಇತರರಿದ್ದರು.

ಪತ್ನಿ ಹತ್ಯೆಗೈದ ಪತಿಗೆ ಜೀವಾವಧಿ ಶಿಕ್ಷೆ

ಮಂಡ್ಯ, ಏ.30– ಪತ್ನಿ ಶೀಲ ಶಂಕಿಸಿ ಆಕೆಯನ್ನು ಹತ್ಯೆಗೈದ ಪತಿಗೆ ಮಂಡ್ಯದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದೆ.

ಮೂಲತಃ ರಾಮನಗರ ನಿವಾಸಿ, ಮಳವಳ್ಳಿ ತಾಲೂಕಿನ ಧನಗೂರು ಗ್ರಾಮದಲ್ಲಿ ವಾಸವಾಗಿದ್ದ ಅಜ್ವಲ್ ಖಾನ್ ಶಿಕ್ಷೆಗೆ ಒಳಗಾದವರು. ಈತ 2006ರ ಜ.21ರಂದು ಸಲ್ಮಾ ಬೇಗಂ ಎಂಬಾಕೆಯನ್ನು ವಿವಾಹವಾಗಿದ್ದ. ನಂತರ 3 ವರ್ಷ ಈ ದಂಪತಿ ಅನ್ಯೋನ್ಯವಾಗಿದ್ದರು. ಬಳಿಕ ಅಜ್ವಲ್ ಖಾನ್ ಸಲ್ಮಾ ಬೇಗಂ ಶೀಲದ ಮೇಲೆ ಅನುಮಾನ ಪಡುತ್ತಿದ್ದ ಎನ್ನಲಾಗಿದೆ. ಆಕೆ ಯಾವುದೇ ಗಂಡಸರ ಜೊತೆ ಮಾತನಾಡಿದರೂ ಸಂಬಂಧ ಇದೆ ಎಂದು ಸಲ್ಮಾ ಬೇಗಂಗೆ ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡುತ್ತಿದ್ದ. ಸದರಿ ವಿಚಾರವನ್ನು ಸಲ್ಮಾ ಬೇಗಂ ತನ್ನ ತಂದೆ, ಸಹೋದರರು ಮತ್ತು ಸಹೋದರಿಗೆ ತಿಳಿಸಿದ್ದಳು. ಪೋಷಕರು ಬೇಗಂಗೆ ಧೈರ್ಯ ಹೇಳಿ ಅನುಸರಿಸಿಕೊಂಡು ಜೀವನ ನಡೆಸುವಂತೆ ಬುದ್ಧಿವಾದ ಹೇಳಿದ್ದರಿಂದ ಆಕೆ ಅಜ್ವಲ್‌ಖಾನ್ ಜೊತೆಗೆ ಹೊಂದಾಣಿಕೆಯೊಂದಿಗೆ ಜೀವನ ನಡೆಸುತ್ತಿದ್ದಳು. ಹೀಗಿದ್ದರೂ ನೀನು ಅಜಾಂ ಪಾಷ ಎಂಬಾತನೊಂದಿಗೆ ಸಂಬಂಧ ಹೊಂದಿದ್ದೀಯಾ ಎಂದು ಬೇಗಂ ಶೀಲ ಶಂಕಿಸಿ ಅಜ್ವಲ್ ಖಾನ್ ಕಿರುಕುಳ ನೀಡುವುದನ್ನು ಮುಂದುವರೆಸಿದ್ದ ಎನ್ನಲಾಗಿದೆ.

2023ರ ಮೇ 8ರಂದು ಅಜ್ವಲ್ ಖಾನ್ ಧನಗೂರು ಗ್ರಾಮದ ಮನೆಯಲ್ಲಿ ಸಲ್ಮಾ ಬೇಗಂ ಒಬ್ಬಳೇ ಇದ್ದಾಗ ತನ್ನ ಮಗನೊಂದಿಗೆ ಸೇರಿ ಆಕೆಯೊಂದಿಗೆ ಜಗಳ ತೆಗೆದು ಬೆಡ್ ರೂಂನ ಮಂಚದ ಮೇಲೆ ಕುತ್ತಿಗೆ ಅದುಮಿ ಉಸಿರುಗಟ್ಟಿಸಿ, ಪಕ್ಕದಲ್ಲಿದ್ದ ತಲೆದಿಂಬು ತೆಗೆದುಕೊಂಡು ಮುಖದ ಮೇಲೆ ಅದುಮಿ ಹತ್ಯೆ ಮಾಡಿದ್ದಾನೆ ಎಂದು ಆರೋಪಿ ವಿರುದ್ಧ ಹಲಗೂರು ಪೊಲೀಸರು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಬಳಿಕ ಪ್ರಕರಣ ಸಂಬಂಧ ಮಂಡ್ಯದ 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಸಾಕ್ಷ್ಯಾಧಾರಗಳು ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶೆ ಸಯೀದುನ್ನಿಸಾ ಅವರು ಪತ್ನಿ ಕೊಂದ ಪತಿಗೆ ಭಾರತೀಯ ದಂಡ ಸಂಹಿತೆ ಕಲಂ 302ರ ಅಡಿ ಅಪರಾಧಕ್ಕೆ ಜೀವಾವಧಿ ಶಿಕ್ಷೆ ಮತ್ತು ಒಂದು ಲಕ್ಷ ರೂ. ದಂಡ ಮತ್ತು ಭಾರತೀಯ ದಂಡ ಸಂಹಿತೆ ಕಲಂ.120(ಬಿ)ರ ಅಡಿ ಅಪರಾಧಕ್ಕೆ ಜೀವಾವಧಿ ಶಿಕ್ಷೆ ಮತ್ತು 1 ಲಕ್ಷ ರೂ. ದಂಡ, ಭಾರತೀಯ ದಂಡ ಸಂಹಿತೆ ಕಲಂ.498(ಎ)ರ ಅಡಿ ಅಪರಾಧಕ್ಕೆ 2 ವರ್ಷಗಳ ಸಜೆ ಮತ್ತು 25 ಸಾವಿರ ರೂ. ದಂಡ ವಿಧಿಸಿ ಆದೇಶ ಹೊರಡಿಸಿದ್ದಾರೆ. ಅಲ್ಲದೇ ಮೃತಳ ಮಕ್ಕಳಿಗೆ ಕಾನೂನು ಸೇವಾ ಪ್ರಾಧಿಕಾರಿದಿಂದ ಪರಿಹಾರ ನೀಡಲು ಆದೇಶಿಸಿದ್ದು, ಅಭಿಯೋಜನೆ ಪರವಾಗಿ ಸರ್ಕಾರಿ ಅಭಿಯೋಜಕ ನಾಗರಾಜ ಕೆ. ವಾದ ಮಂಡಿಸಿದರು.

ನಾಳೆ ಎಸ್.ಎಂ.ಕೃಷ್ಣ ಸಂಸ್ಮರಣೆ



ಮಂಡ್ಯ: ಜಿಲ್ಲಾ ವಕೀಲರ ಸಂಘದಿಂದ ಮೇ 2ರಂದು ಸಂಜೆ 5 ಗಂಟೆಗೆ ಸಂಘದ ಆವರಣದಲ್ಲಿ ಸವಾಲುಗಳನ್ನು ಮೆಟ್ಟಿ ನಿಂತ ಅದ್ಭುತ ಆಡಳಿತಗಾರ, ಜಂಟಲ್‌ಮನ್ ರಾಜಕಾರಣಿ ಎಸ್.ಎಂ.ಕೃಷ್ಣ ಸಂಸ್ಮರಣೆ ಕಾರ್ಯಕ್ರಮ ನಡೆಯಲಿದೆ.

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀಮುಕ್ತಿದಾನಂದ ಮಹಾರಾಜ್ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸುವರು. ಇದೇ ವೇಳೆ 75 ವಸಂತಗಳನ್ನು ಪೂರೈಸಿದ ಹಿರಿಯ ವಕೀಲ ಹಾಗೂ ಮಾಜಿ ಶಾಸಕ ಎಂ.ಶ್ರೀನಿವಾಸ್ ಅವರಿಗೆ ವಕೀಲರ ಸಂಘದ ಸಹೋದ್ಯೋಗಿ ಮಿತ್ರರಿಂದ ಅಭಿನಂದನೆ ಏರ್ಪಡಿಸಲಾಗಿದ್ದು, ರಾಜ್ಯ ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಆತ್ಮಾನಂದ ಗೌರವ ಸಮರ್ಪಣೆ ಮಾಡಲಿದ್ದಾರೆ. ವಕೀಲರ ಸಂಘದ ಅಧ್ಯಕ್ಷ ಟಿ.ಎಸ್.ಸತ್ಯಾನಂದ ಅಧ್ಯಕ್ಷತೆ ವಹಿಸುವರು. ಸಂಸದ ಡಾ.ಕೆ.ಸುಧಾಕರ್ ಅವರು ಮರೆತರು ಮರೆಯಲಾಗದ ಜಂಟಲ್ ಮನ್ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕುರಿತು ಮಾತನಾಡುವರು. ಶಾಸಕರಾದ ಪಿ.ರವಿಕುಮಾರ್, ಕೆ.ಎಂ.ಉದಯ್, ಎಂಎಲ್‌ಸಿ ದಿನೇಶ್ ಗೂಳಿಗೌಡ ಸೇರಿದಂತೆ ಇತರರು ಕೃಷ್ಣ ಸಂಸ್ಮರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಸಿ.ಜೋಗಿಗೌಡ, ಜಿಪಂ ಮಾಜಿ ಸದಸ್ಯ ಹೆಚ್.ಎನ್.ಯೋಗೇಶ್, ಮನ್‌ಮುಲ್ ಮಾಜಿ ಅಧ್ಯಕ್ಷ ಕದಲೂರು ರಾಮಕೃಷ್ಣ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸಿ.ಚಲುವಯ್ಯ ಸಮಾರಂಭದಲ್ಲಿ ಭಾಗವಹಿಸುವರು. ಸಂಜೆ 5 ಗಂಟೆಗೆ ಸುಮಧುರ ವಾದ್ಯಗೋಷ್ಠಿ ಮತ್ತು ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಸತೀಶ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ



ಮಂಡ್ಯ, ಏ.30– 66/11 ಕೆವಿ ಕೋಲಕಾರನದೊಡ್ಡಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಫ್–07 ಪುರ ಫೀಡರ್ ಮಾರ್ಗದಲ್ಲಿ ಲಿಂಕ್‌ಲೈನ್ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 1 ರಂದು ಬೆಳಗ್ಗೆ 9 ರಿಂದ ಸಂಜೆ 6ರವರೆಗೆ ಟಿ.ಮಲ್ಲಿಗೆರೆ, ತಗ್ಗಹಳ್ಳಿ, ಹಳುವಾಡಿ, ಪುರ, ಮಾರಸಿಂಗನಹಳ್ಳಿ, ತಿಮ್ಮನಹೊಸೂರು, ಲೋಕಸರ, ಲೋಕಸರ ಫಾರಂ, ಕಮ್ಮನಾಯಕನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಂಡ್ಯ ಯುವ ಸಂಭ್ರಮ ಕಾರ್ಯಕ್ರಮ ರದ್ದು

ಮಂಡ್ಯ, ಏ.30– ಕಳೆದ ರಾತ್ರಿ ಸುರಿದ ಮಳೆಯಿಂದಾಗಿ ಗುರುವಾರ ನಡೆಯಬೇಕಿದ್ದ ಮಂಡ್ಯ ವಿಶ್ವವಿದ್ಯಾಲಯದ ಮುಖ್ಯ ಪ್ರವೇಶ ದ್ವಾರ ಉದ್ಘಾಟನೆ ಹಾಗೂ ನವ ವಸಂತ–2026 ಮಂಡ್ಯ ಯುವ ಸಂಭ್ರಮ ಕಾರ್ಯಕ್ರಮ ರದ್ದುಗೊಂಡಿದೆ. ಶಾಸಕ ರವಿಕುಮಾರ್ ಗಣಿಗ ನೇತೃತ್ವದಲ್ಲಿ ಕಾರ್ಯಕ್ರಮದ ಎಲ್ಲಾ ಸಿದ್ಧತೆ ನಡೆದು ಬೃಹತ್ ವೇದಿಕೆ ಸಹ ಸಿದ್ಧಪಡಿಸಲಾಗಿತ್ತು. ಮಳೆಯಿಂದಾಗಿ ವೇದಿಕೆ, ಶಾಮಿಯಾನ, ಚೇರುಗಳು ಎಲ್ಲವೂ ಅಸ್ತವ್ಯಸ್ಥಗೊಂಡಿದ್ದರಿಂದ ಇಂದು ಬೆಳಗ್ಗೆ ಸ್ಥಳಕ್ಕೆ ಭೇಟಿ ನೀಡಿದ ಶಾಸಕರು ಕಾರ್ಯಕ್ರಮ ಮುಂದೂಡುವುದಾಗಿ ಹೇಳಿದರು.

ಒಂದನೇ ಪುಟದಿಂದ

ಡಿಜಿಎಫ್ ಮಾಲೀಕ ಚಿನ್ನತಂಬಿ ಬಂಧನ

ಅವರು ಮೈಸೂರಿನ ಧನಗಣಪತಿ ಗೋಲ್ಡನ್ ಅಂಡ್ ಡೈಮಂಡ್ ಸಂಸ್ಥೆಯಿಂದ ಬಂದಿರುವುದಾಗಿ ತಿಳಿಸಿದರು. ಈ ವ್ಯಕ್ತಿಗಳು ನನ್ನ ಖಾತೆಯೂ ಸೇರಿದಂತೆ ಸುಷ್ಮಾ, ಮಾಲಾ, ಪುಷ್ಪಾ, ಬ್ರಹ್ಮಾರೆಡ್ಡಿ ಅವರ ಬ್ಯಾಂಕ್ ಖಾತೆಗಳಿಗೆ 62,05,000 ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾಯಿಸಿದರು.

ಬಳಿಕ ಮೈಸೂರಿಗೆ ಅವರ ಕಾರಿನಲ್ಲೇ ಕರೆದುಕೊಂಡು ಬಂದು ಚಿನ್ನವನ್ನು ತೂಕ ಮಾಡಿದರು. ತೂಕದಲ್ಲಿ ಸಹ ಮೋಸ ಮಾಡಿದರು. ನಾನು ಬೇಡವೆಂದಾಗ ಇಲ್ಲಿಂದ ಜೀವಂತ ಹೋಗಲು ಸಾಧ್ಯವಿಲ್ಲ. ಆದ್ದರಿಂದ ನಾವು ಹೇಳಿದ ಹಾಗೆ ಮಾಡಬೇಕು ಎಂದು ಬೆದರಿಕೆ ಹಾಕಿದರು. ಅವರು ನಮ್ಮ ಎದುರೇ ಸುಮಾರು 560 ಗ್ರಾಂ ತೂಕದ ಚಿನ್ನಾಭರಣ ಹಾಗೂ 100 ಗ್ರಾಂ ಚಿನ್ನದ ಬಿಸ್ಕೇಟ್ ಅನ್ನು ಕರಗಿಸಿದರು. ಉಳಿದ ಚಿನ್ನವನ್ನು ಗಿರಿವಿ ಇಟ್ಟುಕೊಳ್ಳುವುದಾಗಿ 6 ತಿಂಗಳ ನಂತರ ಬಿಡಿಸಿಕೊಳ್ಳುವಂತೆ ಸೂಚಿಸಿ ರಶೀದಿಗಳನ್ನು ನೀಡಿದರು. ಜೊತೆಗೆ ಈಗಾಗಲೇ ಬ್ಯಾಂಕಿಗೆ ವರ್ಗಾಯಿಸಿದ್ದ ಹಣದ ಜೊತೆಗೆ 2,00,000 ರೂ. ನಗದು ಹಣ ನೀಡಿದರು. ಇದಾದ 6 ತಿಂಗಳಿಂದ ನಾನು ದೂರವಾಣಿ ಮೂಲಕ ಸಂಪರ್ಕಿಸಿ ಗಿರಿವಿ ಇಟ್ಟಿರುವ ಚಿನ್ನಾಭರಣಗಳನ್ನು ಬಿಡಿಸಿಕೊಳ್ಳುವುದಾಗಿ ತಿಳಿಸಿದಾಗ, ಇಲ್ಲ ನೀವು ಚಿನ್ನಾಭರಣಗಳನ್ನು ಮಾರಾಟ ಮಾಡಿದ್ದೀರಿ. ನಿಮಗೆ ಚಿನ್ನಾಭರಣ ವಾಪಸ್ಸು ಕೊಡಲು ಬರುವುದಿಲ್ಲ ಎಂದು ಹೇಳುತ್ತಾ ಬಂದರು.

ನಮ್ಮ ಚಿನ್ನಾಭರಣವನ್ನು ನಮಗೆ ವಾಪಸ್ಸು ನೀಡದೇ ವಂಚಿಸಿ ನಮಗೆ ಬೆದರಿಕೆ ಹಾಕಿರುವ ಧನಗಣಪತಿ ಗೋಲ್ಡನ್ ಅಂಡ್ ಡೈಮಂಡ್ ಸಂಸ್ಥೆ (ಡಿಜಿಎಫ್) ಹಾಗೂ ಇತರೆ ಸಂಸ್ಥೆಗಳ ಮಾಲೀಕ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಮತ್ತು ಆತನ ಸಹಚರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ನ್ಯಾಯ ದೊರಕಿಸಿ ಕೊಡಬೇಕೆಂದು ಅವರು ದೂರಿನಲ್ಲಿ ಕೋರಿದ್ದಾರೆ.

ಪ್ರತಿಭಟನೆ: ಸೌಂದರ್ ರಾಜ್ ಮಾಲೀಕತ್ವದ ಸಂಸ್ಥೆಯಿಂದ ವಂಚನೆಗೆ ಒಳಗಾಗಿದ್ದಾರೆ ಎನ್ನಲಾದ ಗ್ರಾಹಕರು ಬುಧವಾರ ನಗರ ಪೊಲೀಸ್ ಆಯುಕ್ತರ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದ್ದರು. ನಜರ್‌ಬಾದ್ ಠಾಣೆಗೂ ಈ ಬಗ್ಗೆ ದೂರು ನೀಡಿದ್ದರು.

ನೂರಾರು ಜನರಿಗೆ ವಂಚಿಸಿರುವ ಸೌಂದರ್ ರಾಜ್‌ನನ್ನು ಬಂಧಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದ್ದರು.

ನೋಂದಣಿಗೆ ಚಾ.ನಗರದಲ್ಲಿ ಚಾಲನೆ

ಸಮಯ ಉಳಿತಾಯ ವಾಗುವಂತೆ ವಿನ್ಯಾಸಗೊಳಿಸಲಾಗಿದೆ. ನೂತನ ವ್ಯವಸ್ಥೆಯು ಡಿಜಿಟಲ್ ಭವಿಷ್ಯದತ್ತ ಒಂದು ಮಹತ್ವದ ಹೆಜ್ಜೆಯಾಗಿದ್ದು, ತಂತ್ರಜ್ಞಾನದ ಮೂಲಕ ಸಾರ್ವಜನಿಕ ಸೇವೆಗಳನ್ನು ಸುಧಾರಿಸಲು ಸರ್ಕಾರದ ಬದ್ಧತೆಯನ್ನು ತೋರಿಸುತ್ತದೆ. ಕಾಗದರಹಿತ ನೋಂದಣಿ ವ್ಯವಸ್ಥೆಯ ಮೂಲಕ ಪಾರದರ್ಶಕತೆ, ವೇಗ ಮತ್ತು ನಾಗರಿಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶವನ್ನು ನಮ್ಮ ಸರ್ಕಾರ ಹೊಂದಿದೆ ಎಂದು ಹೇಳಿದರು.

ನೋಂದಣಿ ಉಪ ಮಹಾಪರಿವೀಕ್ಷಕರಾದ ಎಚ್.ಎನ್. ಪ್ರಭಾಕರನ್, ಚಾಮರಾಜನಗರ ಜಿಲ್ಲಾ ನೋಂದಣಾಧಿಕಾರಿ ಕಿರಣ್, ಮಂಡ್ಯ ಜಿಲ್ಲಾ ನೋಂದಣಾಧಿಕಾರಿ ಎಸ್. ಸಿದ್ದೇಶ್, ಕೇಂದ್ರ ಸ್ಥಾನಿಕ ಸಹಾಯಕರಾದ ಬಿ.ಜಿ. ಮಂಜುನಾಥ್, ಚಾ. ನಗರ ಉಪ ನೋಂದಣಾಧಿಕಾರಿ ರಾಘವೇಂದ್ರ, ಗುಂಡ್ಲುಪೇಟೆ ಉಪ ನೋಂದಣಾಧಿಕಾರಿ ಆರ್. ರಾಜೇಂದ್ರ ಪ್ರಸಾದ್, ತಾಲೂಕು ಪತ್ರ ಬರಹಗಾರರ ಸಂಘದ ಅಧ್ಯಕ್ಷ ನಂದೀಶ್ವರ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಮಹದೇವ ಸ್ವಾಮಿ ಕೋರಿಯರ್, ಪದಾಧಿಕಾರಿಗಳು ಈ ವೇಳೆ ಉಪಸ್ಥಿತರಿದ್ದರು.

ನವನಗರ ನಿರ್ಮಾಣ ನಿರ್ಧಾರ

ಸರ್ಕಾರ ನಿಗದಿಪಡಿಸಿರುವ ಹಣ ವನ್ನು ತಲುಪಿಸುವ ಕೆಲಸ ಇನ್ನೊಂದೆಡೆ ನಡೆದಿದೆ. ಇದೇ ಕಾರಣಕ್ಕಾಗಿ ಚಲ್ಲಘಟ್ಟವರೆಗೆ ಇರುವ ಮೆಟ್ರೊ ರೈಲು ಸಂಪರ್ಕವನ್ನು ಬಿಡದಿವರೆಗೂ ವಿಸ್ತರಿಸಲು ಸರ್ಕಾರ ಈಗಾಗಲೇ ನಿರ್ಧರಿಸಿದೆ.

ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿ: ರಾಜ್ಯದ ವಿಧಾನಸಭಾ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತರ ಕಾಲೋನಿಗಳ ಅಭಿವೃದ್ಧಿಗೆ 600 ಕೋಟಿ ರೂ.ಗಳ ಕ್ರಿಯಾ ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ.

ಕೇಂದ್ರ ಸರ್ಕಾರ ಪ್ರಾಯೋಜಿತ ಬೆಂಗಳೂರು–ಹೈದರಾಬಾದ್ ನಡುವಿನ ಹೈಸ್ಪೀಡ್ ರೈಲು ಕಾರಿಡಾರ್ ಅನುಷ್ಠಾನಕ್ಕೆ ತಾತ್ವಿಕ ಅನುಮೋದನೆ ನೀಡಲಾಗಿದೆ. ಅಲ್ಲದೇ, ಬೆಂಗಳೂರು–ಬೀದರ್–ಕಲಬುರಗಿ ಮಾರ್ಗದಲ್ಲಿ ವಿಮಾನ ಸೇವೆಗಳ ನಿರ್ವಹಣೆಗೆ ಪ್ರತಿ ವರ್ಷ 28.47 ಕೋಟಿ ರೂ. ಪ್ರೋತ್ಸಾಹ ಧನವನ್ನು ಸರ್ಕಾರಿ ನೆರವಿನಡಿ (ವಿಜಿಎಫ್) ನೀಡಲಿದೆ.

ಪರಿಷ್ಕೃತ ರೋಸ್ಟರ್

ಅನುಮೋದನೆ ನೀಡಿದೆ. ಜತೆಗೆ, ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ ಹೆಚ್ಚುವರಿಯಾಗಿ 20 ಕೋಟಿ ರೂ ಅನುದಾನ ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿದೆ ಎಂದು ಹೇಳಿದರು.

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಕಿಟ್ : ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ ಮಹತ್ವದ ತೀರ್ಮಾನ ಕೈಗೊಂಡಿದೆ. ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿ ವಿವಿಧ ಲೇಖನ ಸಾಮಗ್ರಿ ಹಾಗೂ ಶಾಲಾ ಪುಸ್ತಕಗಳನ್ನು ಒಳಗೊಂಡಿರುವ ಸುಮಾರು 8,600 ರೂ. ಮೌಲ್ಯದ ಕಿಟ್‌ಗಳನ್ನು ವಿತರಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಈ ಉದ್ದೇಶಿತ ಯೋಜನೆಗಾಗಿ 115.84 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕಿಟ್‌ಗಳನ್ನು ವಿತರಿಸಲು ಸರ್ಕಾರ ಅನುಮೋದನೆ ನೀಡಿದೆ.

ಬಿಳಿಜೋಳ ಖರೀದಿ : ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಬಿಳಿಜೋಳವನ್ನು ಖರೀದಿಸಲು ಸರ್ಕಾರ ನಿರ್ಧರಿಸಿದ್ದು, ಈ ಖರೀದಿ ಪ್ರಕ್ರಿಯೆಗೆ ಅತ್ಯಗತ್ಯವಾಗಿರುವ ಗೋಣಿ ಚೀಲಗಳನ್ನು ಖರೀದಿಸಲು ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಉದ್ದೇಶಕ್ಕಾಗಿ 21.35 ಕೋಟಿ ರೂ.ಗಳ ಮೊತ್ತವನ್ನು ವ್ಯಯಿಸಿ ಗೋಣಿ ಚೀಲ ಗಳನ್ನು ಖರೀದಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಸಚಿವರು ತಿಳಿಸಿದರು.

ಸೌಜನ್ಯ ಪ್ರಕರಣ: ಸೌಜನ್ಯ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ವಿವರಣೆ ಕೇಳಿದರೆ ಕೊಡುತ್ತೇವೆ. ಮರುತನಿಖೆ ವಿಚಾರವಾಗಿ ಸುಪ್ರೀಂಕೋರ್ಟ್‌ಗೆ ಸೌಜನ್ಯ ಅವರ ತಾಯಿ ಕುಸುಮಾವತಿ ಅರ್ಜಿ ಸಲ್ಲಿಸಿದ್ದಾರೆ. ಹೀಗಾಗಿ ಪ್ರಕರಣದ ಕುರಿತಾದ ಸಂಪೂರ್ಣ ವಿವರಗಳನ್ನು ಸಲ್ಲಿಸುವಂತೆ ಸಿಬಿಐ ಹಾಗೂ ರಾಜ್ಯ ಸರ್ಕಾರಕ್ಕೆ ಸುಪ್ರೀಂ ನಿರ್ದೇಶನ ನೀಡಿದೆ ಎಂದರು.

ಆಂಧ್ರಪ್ರದೇಶದ ತಿರುಮಲದಲ್ಲಿರುವ ರಾಜ್ಯ ಸರ್ಕಾರಿ ಛತ್ರದ ನಿರ್ವಹಣೆಯ ಕುರಿತು ಮಹತ್ವದ ಬದಲಾವಣೆ ತರಲಾಗಿದ್ದು, ಇದುವರೆಗೂ ಕಂದಾಯ ಇಲಾಖೆಯ ಸುಪರ್ದಿಯಲ್ಲಿದ್ದ ಛತ್ರದ ನಿರ್ವಹಣೆಯನ್ನು ಇನ್ನು ಮುಂದೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವಹಿಸಲು ನಿರ್ಧರಿಸಲಾಗಿದೆ.

ಹೊರ ರಾಜ್ಯದ ವಾಹನಗಳಿಗೆ ತೆರಿಗೆ

ಇದರಿಂದಾಗಿ ಬೇರೆ ರಾಜ್ಯಗಳಲ್ಲಿ ನೋಂದಣಿಯಾಗಿ ಕರ್ನಾಟಕದಲ್ಲಿ ಖಾಯಂ ಆಗಿ ಬಳಸಲ್ಪಡುವ ವಾಹನ ಮಾಲೀಕರು ಇನ್ನು ಮುಂದೆ ರಾಜ್ಯ ಸರ್ಕಾರಕ್ಕೆ ತೆರಿಗೆ ಪಾವತಿಸುವುದು ಕಡ್ಡಾಯವಾ ಗಲಿದೆ. ಕರ್ನಾಟಕದಲ್ಲಿ ಸತತವಾಗಿ ಸಂಚರಿಸುವ ಇಂತಹ ಕಾರು, ಜೀಪು, ಮಿನಿ ಬಸ್ ಹಾಗೂ ದ್ವಿಚಕ್ರ ವಾಹನ ಗಳಿಗೆ ಈ ನಿಯಮ ಅನ್ವಯಿಸುತ್ತದೆ. 10 ಲಕ್ಷ ರೂ.ದಿಂದ 15 ಲಕ್ಷ ರೂ. ದವರೆಗಿನ ವಾಹನಗಳಿಗೆ ಶೇ.15ರಷ್ಟು ತೆರಿಗೆ ವಿಧಿಸಲು ನಿರ್ಧರಿಸಲಾಗಿದೆ. ಹಾಗೆಯೇ 15 ಲಕ್ಷ ರೂ.ಕ್ಕಿಂತ ಅಧಿಕ ಮೌಲ್ಯದ ವಾಹನಗಳಿಗೆ ಶೇ.18ರಷ್ಟು ತೆರಿಗೆ ಪಾವತಿಸಬೇಕಾಗುತ್ತದೆ. ಇನ್ನು ಹಳೆಯ ವಾಹನಗಳಿಗೆ ವಾಹನದ ವಯಸ್ಸು ಮತ್ತು ಸವೆತದ ಆಧಾರದ ಮೇಲೆ ತೆರಿಗೆ ದರದಲ್ಲಿ ವ್ಯತ್ಯಾಸವಿರುತ್ತದೆ. ಇದರ ಜತೆಗೆ ಇವಿ(ಇಗಿ) ವಾಹನಗಳಿಗೂ ತೆರಿಗೆ ಇದೆ ಎಂದು ಹೇಳಲಾಗಿದೆ. ಈ ಮೊದಲು ಎಲೆಕ್ಟ್ರಿಕ್ ವಾಹನಗಳಿಗೆ ನೀಡಲಾಗಿದ್ದ ತೆರಿಗೆ ವಿನಾಯಿತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದ್ದು, 25 ಲಕ್ಷ ರೂ.ಕ್ಕಿಂತ ಅಧಿಕ ಮೌಲ್ಯದ ಎಲೆಕ್ಟ್ರಿಕ್ ವಾಹನಗಳಿಗೆ ಶೇ. 10 ರಷ್ಟು ತೆರಿಗೆ ವಿಧಿಸಲು ಸರ್ಕಾರ ಉದ್ದೇಶಿಸಿದೆ.

ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ದರಗಳು

ವಾಹನದ ಪ್ರಕಾರ / ಮೌಲ್ಯ	ಉದ್ದೇಶಿತ ತೆರಿಗೆ ದರ
10 ಲಕ್ಷದಿಂದ 15 ಲಕ್ಷದವರೆಗಿನ ವಾಹನಗಳು	– ಶೇ. 15
15 ಲಕ್ಷಕ್ಕಿಂತ ಅಧಿಕ ಮೌಲ್ಯದ ವಾಹನಗಳು	– ಶೇ. 18
25 ಲಕ್ಷಕ್ಕಿಂತ ಅಧಿಕ ಮೌಲ್ಯದ ಎಲೆಕ್ಟ್ರಿಕ್ (ಇವಿ) ವಾಹನಗಳು	– ಶೇ. 10

ಈ ಕ್ರಮಕ್ಕೆ ಕಾರಣವೇನು: ರಾಜ್ಯದಲ್ಲಿ ಸಾವಿರಾರು ಹೊರ ರಾಜ್ಯ ನೋಂದಣಿಯ ವಾಹನಗಳು ಸಂಚರಿಸುತ್ತಿದ್ದರೂ ಅವುಗಳಿಂದ ರಾಜ್ಯದ ಬೊಕ್ಕಸಕ್ಕೆ ಯಾವುದೇ ಆದಾಯ ಬರುತ್ತಿರಲಿಲ್ಲ. ಅಲ್ಲದೆ, ತೆರಿಗೆಯನ್ನು ತಪ್ಪಿಸಲು ಅನೇಕರು ನೆರೆಯ ರಾಜ್ಯಗಳಲ್ಲಿ ವಾಹನ ನೋಂದಣಿ ಮಾಡಿಸುತ್ತಿದ್ದರು. ಇದನ್ನು ತಡೆಯಲು ಮತ್ತು ರಾಜ್ಯದ ತೆರಿಗೆ ಆದಾಯವನ್ನು ಹೆಚ್ಚಿಸಲು ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ.

ಅನಾಥಾಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ಏ.30– ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕಿನ ಬಾಚಹಳ್ಳಿಯಲ್ಲಿರುವ ಜೆಎಸ್‌ಎಸ್ ಮಹಾವಿದ್ಯಾಪೀಠ ಅಂಗ ಸಂಸ್ಥೆ ಶ್ರೀ ಬಸವೇಶ್ವರ ಅನಾಥಾಲಯದ ವತಿಯಿಂದ 5 ರಿಂದ 10 ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿಯನ್ನು ನೇರವಾಗಿ ಕಚೇರಿಯಿಂದ ಅಥವಾ ವಾಟ್ಸಪ್ ಮೂಲಕ ಪಡೆಯಬಹುದು.


ಹೆಚ್ಚಿನ ಮಾಹಿತಿಗೆ ಜೆಎಸ್‌ಎಸ್ ಮಹಾವಿದ್ಯಾಪೀಠದ ಹಾಸ್ಟೆಲ್ ವಿಭಾಗ ದೂ: 0821–2548212 ಅಥವಾ ನಿಲಯಪಾಲಕರಾದ ಬಸವಣ್ಣ ಮೊ: 9008085762 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೇಕೆದಾಟು ಯೋಜನೆ ಅಗತ್ಯವಿರುವ ಅರಣ್ಯ ಭೂಮಿಗೆ ಪರ್ಯಾಯವಾಗಿ 5300 ಹೆಕ್ಟೇರ್ ಸರ್ಕಾರಿ ಭೂಮಿ ವರ್ಗಾವಣೆ

ಉಪ ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧಾರ



ಡಿ.ಕೆ. ಶಿವಕುಮಾರ್



ಬೆಂಗಳೂರು, ಏ.30(ಕೆಎಂಶಿ)– ಮಹತ್ವಾಕಾಂಕ್ಷೆಯ ಮೇಕೆದಾಟು ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿಗೆ ಪರ್ಯಾಯವಾಗಿ 5,300 ಹೆಕ್ಟೇರ್ ಸರ್ಕಾರಿ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ಮಹತ್ವದ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದೆ.

ಯೋಜನೆ ಅನುಷ್ಠಾನಕ್ಕೆ ಅರಣ್ಯ ಭೂಮಿ ಮುಳುಗಡೆ ಆಗುವುದರಿಂದ ಅಷ್ಟೇ ಪ್ರಮಾಣದ ಭೂಮಿಯನ್ನು ರಾಜ್ಯದ ವಿವಿಧ ಭಾಗಗಳಲ್ಲಿ ನೀಡುವಂತೆ ಅರಣ್ಯ ಮತ್ತು ಪರಿಸರ ಇಲಾಖೆ ಕೇಳಿತ್ತು.


ಮೇಕೆದಾಟು ಅಲ್ಲದೆ, ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೂ ಅಗತ್ಯವಿರುವ ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವ ತೀರ್ಮಾನ ಕೈಗೊಳ್ಳಲಾಗಿದೆ. ಈ ಎರಡೂ ಯೋಜನೆಗಳ ಕಾಮಗಾರಿ ಕೈಗೆತ್ತಿಕೊಳ್ಳುವ ಉದ್ದೇಶದಿಂದ ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಕಂದಾಯ ಸಚಿವ ಕೃಷ್ಣಬೈರೇಗೌಡ ಹಾಗೂ ಸಂಬಂಧಪಟ್ಟ ಇಲಾಖಾ ಹಿರಿಯ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಜೊತೆ ಶಿವಕುಮಾರ್ ಉನ್ನತ ಮಟ್ಟದ ಸಭೆ ನಡೆಸಿದರು.

ಸಭೆ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಮೇಕೆದಾಟು ನಮ್ಮ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಮಳೆಗಾಲದಲ್ಲಿ ಸಮುದ್ರಕ್ಕೆ ಹರಿದು ಪೋಲಾಗುವ ಕಾವೇರಿ ನದಿ ನೀರನ್ನು ಮೇಕೆದಾಟು ಬಳಿ ಅಣೆಕಟ್ಟೆ ನಿರ್ಮಿಸಿ ಸಂಗ್ರಹಿಸಿ, ಕುಡಿಯುವ ಹಾಗೂ ಸಂಕಷ್ಟ ಸಮಯದ ಬಳಕೆಗೆ ತೀರ್ಮಾನಿಸಿದ್ದೇವೆ.

ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ವಿಸ್ತೃತ ವರದಿ ಸಿದ್ಧಗೊಂಡಿದೆ, ಕಾಮಗಾರಿ ಕೈಗೊಳ್ಳಲು ಅರಣ್ಯ ಮತ್ತು ಪರಿಸರ ಇಲಾಖೆಗಳಿಂದ ಎದುರಾಗಿರುವ ಅಡೆತಡೆ ನಿವಾರಣೆಗೆ ಇಂದಿನ ಸಭೆ ನಡೆಯಿತು ಎಂದರು. ಮುಳುಗಡೆ ಆಗುವ ಅರಣ್ಯ ಭೂಮಿಗೆ ಪರ್ಯಾಯವಾಗಿ ಸರ್ಕಾರ ಬೇರೆಡೆ ಭೂಮಿ ಹಸ್ತಾಂತರಿಸಲಿದೆ.

ಕಂದಾಯ ಭೂಮಿಗಳನ್ನು ಗುರುತಿಸಿ, ಅರಣ್ಯ ಇಲಾಖೆಗೆ ವರ್ಗಾಯಿಸುವು ದಾಗಿ ತಿಳಿಸಿದ್ದೇವೆ. ಈಗಾಗಲೇ ಎತ್ತಿನಹೊಳೆ ಯೋಜನೆಗೆ ಅಗತ್ಯ ಇರುವ ಭೂಮಿಯನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಜೊತೆಗೆ 257 ಕೋಟಿ ರೂ. ದಂಡ ಸೇರಿದಂತೆ ವಿವಿಧ ವೆಚ್ಚಗಳನ್ನು ಇಂದೇ ಭರಿಸಲು ಇಲಾಖೆಗೆ ಆದೇಶ ಮಾಡಿದ್ದೇನೆ ಎಂದರು.


ಹಿಜಾಬ್, ಜನಿವಾರದಿಂದ ಸಮಸ್ಯೆಗೀಡಾದ ಪರೀಕ್ಷಾರ್ಥಿಗಳಿಗೆ ಮತ್ತೆ ಸಿಇಟಿ



ಬೆಂಗಳೂರು, ಏ.30–ಸಿಇಟಿ ಪರೀಕ್ಷೆ ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣ ತೀವ್ರ ಸ್ವರೂಪ ಪಡೆದುಕೊಂಡಿದೆ. ಪ್ರಕರಣ ಸಂಬಂಧ ಈಗಾಗಲೇ ತಪಿಸ್ಥತರನ್ನು ಅಮಾನತು ಮಾಡಲಾಗಿದೆ. ಇನ್ನು ಜನಿವಾರವನ್ನು ಒತ್ತಾಯ ಪೂರ್ವಕವಾಗಿ ಕತ್ತರಿಸಿದ್ದರಿಂದ ಸರಿಯಾಗಿ ಪರೀಕ್ಷೆ ಬರೆದಿಲ್ಲ ಎಂದು ವಿದ್ಯಾರ್ಥಿಗಳು ನೋವು ತೋಡಿಕೊಂಡಿದ್ದು, ಈ ಸಂಬಂಧ ಮಕ್ಕಳ ಭವಿಷ್ಯದ ಬಗ್ಗೆ ಪೋಷಕರು ಸಹ ಆತಂಕ ವ್ಯಕ್ತಪಡಿಸಿದ್ದಾರೆ. ಇದರ ಬೆನ್ನಲ್ಲೇ ಜನಿವಾರ ತೆಗೆದ ವಿದ್ಯಾರ್ಥಿ ಗಳಿಗೆ ಮರು ಪರೀಕ್ಷೆ ಬರೆಯಲು ಅವಕಾಶ ನೀಡಲು ಸರ್ಕಾರ ಚಿಂತನೆ ನಡೆಸಿದೆ. ಈ ಬಗ್ಗೆ ಖುದ್ದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸುಳಿವು ಕೊಟ್ಟಿದ್ದಾರೆ.

ಡಾ. ಎಂ.ಸಿ.ಸುಧಾಕರ್ ಮಾತನಾಡಿ, ಜನಿವಾರ ತೆಗೆದು ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳಿಗೆ ಮತ್ತೊಂದು ಅವಕಾಶ ಸರ್ಕಾರ ಚಿಂತನೆ ನಡೆಸಿದ್ದು, ಇದಕ್ಕೆ ವಿದ್ಯಾರ್ಥಿಗಳು, ಪೋಷಕರು ಒಪ್ಪಿದರೆ ಮರು ಪರೀಕ್ಷೆಗೆ ಅವಕಾಶ ನೀಡಲಾಗುವುದು. ಬೆಂಗಳೂರಿನ ಮಡಿವಾಳ ದಲ್ಲಿರುವ ಕೃಪಾನಿಧಿ ಕಾಲೇಜಿ ನಲ್ಲಿ ಮೂವರು ವಿದ್ಯಾರ್ಥಿ ಗಳ ಜನಿವಾರ ತೆಗೆಸಲಾಗಿತ್ತು. ಚಿಕ್ಕಬಳ್ಳಾಪುರದಲ್ಲಿ ಓರ್ವ ವಿದ್ಯಾರ್ಥಿಯ ಜನಿವಾರ ತೆಗೆಸಲಾಗಿತ್ತು. ಹಾಗೇ ಚಿಕ್ಕಬಳ್ಳಾಪುರದ ಒಂದು ಕಾಲೇಜಿನಲ್ಲಿ ಹಿಜಾಬ್‌ಗೆ ಅವಕಾಶ ನೀಡಿರಲಿಲ್ಲ. ಇದರಿಂದ ಓರ್ವ ವಿದ್ಯಾರ್ಥಿನಿ ಸಿಇಟಿ ಭೌತಶಾಸ್ತ್ರ ವಿಷಯದ ಪರೀಕ್ಷೆ ಬರೆದಿರಲಿಲ್ಲ. ಹೀಗಾಗಿ ಈ ಎಲ್ಲಾ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸಲು ಚಿಂತನೆ ನಡೆದಿದೆ ಎಂದು ಮಾಹಿತಿ ನೀಡಿದ್ದಾರೆ. ಉದ್ದೇಶ ಪೂರ್ವಕವಾಗಿ ಜನಿವಾರ ತೆಗೆಸಲಾಗಿದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಮತ್ತೊಂದು ಮರು ಪರೀಕ್ಷೆ ನೀಡಲು ಚಿಂತನೆ ನಡೆದಿದೆ. ಈ ಬಗ್ಗೆ ಪೋಷಕರ ಅಭಿಪ್ರಾಯ ಪಡೆದು ಮರು ಪರೀಕ್ಷೆಗೆ ಅವಕಾಶ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಪ.ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಗೆಲುವು ಖಚಿತ



ಬೆಂಗಳೂರು, ಏ.30(ಕೆಎಂಶಿ)– ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಖಚಿತ ಎಂದು ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಇಂದಿಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಶ್ಚಿಮ ಬಂಗಾಳದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮೇಲೆ ಜನತೆ ವಿಶ್ವಾಸ ಇಟ್ಟಿದ್ದಾರೆ. ಅಸ್ಸಾಂ ಜನತೆ ಮೂರನೇ ಬಾರಿಗೆ ಬಿಜೆಪಿಗೆ ಸೇವೆ ಮಾಡುವ ಅವಕಾಶ ನೀಡಲಿದ್ದಾರೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಈ ಬಾರಿ ರಾಷ್ಟ್ರವಾದಿಗಳ ಸರ್ಕಾರ ರಚನೆ ಆಗಲಿದೆ. ಪಾಂಡಿಚೇರಿಯಲ್ಲಿ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ. ತಮಿಳುನಾಡಿನಲ್ಲೂ ಶುಭ ಲಕ್ಷಣಗಳಿವೆ. ಕೇರಳದಲ್ಲಿ ಬಿಜೆಪಿ ಪ್ರಮುಖ ಶಕ್ತಿಯಾಗಿ ಹೊರಹೊಮ್ಮಲಿದೆ ಎಂದರು.

ಬೆಂಗಳೂರಿನಲ್ಲಿ ನಿನ್ನೆ ಸಂಜೆ ಸುರಿದ ಭಾರೀ ಮಳೆಯಿಂದ ಆಸ್ಪತ್ರೆಯೊಂದರ ಕಾಂಪೌಂಡ್ ಕುಸಿದು ಹಲವರು ದುರ್ಮರಣಕ್ಕೀಡಾದ ಸುದ್ದಿ ಕೇಳಿ ತೀವ್ರ ಆಘಾತ ವಾಗಿದೆ.



ಬಡಾವಣೆಗಳ ಒಳಚರಂಡಿ ನೀರಿನಿಂದ ಮುಕ್ತಗೊಳಿಸಿ ವರುಣ ಕೆರೆ ಸಂರಕ್ಷಣೆಗೆ ಕಾವೇರಿ ನೀರಾವರಿ ನಿಗಮದಿಂದ 14.75 ಕೋಟಿಯ ಯೋಜನೆ



ಅಭಿವೃದ್ಧಿ ಕಾಮಗಾರಿ ಆರಂಭಿಸಲು ಕೆರೆಯಲ್ಲಿದ್ದ ನೀರನ್ನು ಕೃಷಿ ಭೂಮಿಗೆ ಹರಿಸಿದ್ದರಿಂದ ಭಣಗುಡುತ್ತಿರುವ ಮೈಸೂರು ತಾಲೂಕಿನ ವರುಣ ಕೆರೆಯ ನೋಟ.

ಮೈಸೂರು,ಏ.30(ಎಂಟಿವೈ)– ಸುತ್ತಮುತ್ತಲ ಬಡಾವಣೆಗಳಿಂದ ಒಳಚರಂಡಿ ನೀರು ನಿರಂತರವಾಗಿ ಸೇರಿ ಕಲುಷಿತಗೊಂಡಿದ್ದ ಐತಿಹಾಸಿಕ ವರುಣ ಕೆರೆಯನ್ನು ಕಾವೇರಿ ನೀರಾವರಿ ನಿಗಮವು 14.75 ಕೋಟಿ ರೂ. ವೆಚ್ಚದಲ್ಲಿ ನೈಸರ್ಗಿಕ ಜೈವಿಕ ವ್ಯವಸ್ಥೆ(ನ್ಯಾಚುರಲ್ ಬಯಾಲಜಿಕಲ್ ಸಿಸ್ಟಮ್)ಯಿಂದ ನೀರನ್ನು ಶುದ್ಧೀಕರಿಸಿ, ಕೆರೆ ಸಂರಕ್ಷಿಸಿ ಸೌಂದರ್ಯೀಕರಣ ಮಾಡಲು ಯೋಜನೆಯೊಂದನ್ನು ಕೈಗೆತ್ತಿಕೊಂಡಿದ್ದು, ಈಗಾಗಲೇ ಕೆರೆಯಲ್ಲಿದ್ದ ನೀರನ್ನು ಕೃಷಿ ಭೂಮಿಗೆ ಹರಿಸಿ ಖಾಲಿ ಮಾಡಲಾಗಿದೆ.

ನೂರಾರು ವರ್ಷಗಳ ಇತಿಹಾಸವಿರುವ ವರುಣ ಕೆರೆ ಮೈಸೂರು ಭಾಗದ ಬೃಹತ್ ಕೆರೆಗಳಲ್ಲಿ ಒಂದಾಗಿದೆ. ಮೈಸೂರು–ತಿ.ನರಸೀಪುರ ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುವ ವರುಣ ಕೆರೆ ಆ ಭಾಗದ ಅಂತರ್ಜಲ ವೃದ್ಧಿಗೆ ತನ್ನದೆ ಆದ ಕೊಡುಗೆ ನೀಡಿದೆಯಲ್ಲದೆ, 150 ಎಕರೆ ಕೃಷಿ ಭೂಮಿಗೆ ನೀರುಣಿಸುವುದರೊಂದಿಗೆ ಅಕ್ಕಪಕ್ಕದ ಗ್ರಾಮಗಳ ಜಾನುವಾರುಗಳಿಗೆ ಹಾಗೂ ಅಸಂಖ್ಯಾತ ಪಕ್ಷಿ ಸಂಕುಲಕ್ಕೆ ನೀರುಣಿಸುವ ಪ್ರಮುಖ ಜಲಮೂಲವೂ ಆಗಿದೆ.

ಈ ಹಿಂದೆ ಸ್ವಚ್ಛ ನೀರಿನಿಂದ ಕೂಡಿದ್ದ ವರುಣ ಕೆರೆ ಕಳೆದ 2 ದಶಕಗಳಿಂದ ಕೆರೆ ಸುತ್ತಮುತ್ತ ಹೊಸದಾಗಿ ತಲೆ ಎತ್ತಿರುವ ಬಡಾವಣೆಗಳು, ವಾಜಮಂಗಲ, ಭುಗತಗಳ್ಳಿ, ಚಿಕ್ಕಳ್ಳಿ ಭಾಗದಿಂದ ಒಳಚರಂಡಿ ನೀರು ಸೇರಿ, ಕೆರೆ ಪರಿಸರಕ್ಕೆ ಹಾನಿಯಾಗಿತ್ತು. ಅಲ್ಲದೆ ಕೆರೆ ನೀರು ದುರ್ವಾಸನೆ ಬೀರಲಾರಂಭಿಸಿತ್ತು. ಈ ಹಿನ್ನೆಲೆಯಲ್ಲಿ ಕಾವೇರಿ ನೀರಾವರಿ ನಿಗಮವು ಕೆರೆಯ ನೈಜ ಪರಿಸರಕ್ಕೆ ಹಾನಿಯಾಗದೇ ಕೆರೆ ಸಂರಕ್ಷಣೆ ಮಾಡುವುದರೊಂದಿಗೆ ಕೆರೆಯ ಸುತ್ತ ಸೌಂದರ್ಯ ಹೆಚ್ಚಿಸುವ ಕಾಮಗಾರಿ ನಡೆಸಲು ನಿರ್ಧರಿಸಿದ್ದು, 14.75 ಕೋಟಿ ರೂ. ವೆಚ್ಚದ ಕಾಮಗಾರಿಗೆ ಟೆಂಡರ್ ಕರೆದಿದೆ.

ಪ್ರಮುಖ ಉದ್ದೇಶ ಕೆರೆ ಸಂರಕ್ಷಣೆ: ಕೆರೆ ಸಂರಕ್ಷಣೆಯ ಪ್ರಮುಖ ಉದ್ದೇಶದೊಂದಿಗೆ ವರುಣ ಕೆರೆಯಲ್ಲಿ ವಿವಿಧ ಕಾಮಗಾರಿ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಕೆರೆಗೆ ಸೇರುತ್ತಿರುವ ಚರಂಡಿ ನೀರು ತಡೆಗಟ್ಟಲು ಕೆರೆ ಸುತ್ತ ನೈಸರ್ಗಿಕವಾಗಿರುವಂತೆ ಕಾಲುವೆ ನಿರ್ಮಿಸಿ, ಅದರಲ್ಲಿ ಚರಂಡಿ ನೀರು ಹರಿಯುವ ವ್ಯವಸ್ಥೆ ಮಾಡಲಾಗುತ್ತದೆ. ಈ ಕಾಲುವೆಯಲ್ಲಿ ಕಲುಷಿತ ನೀರಿನಲ್ಲಿರುವ ರಾಸಾಯನಿಕ ಅಂಶ ಹೀರಿಕೊಳ್ಳುವ ಕೆಲವು ಪ್ರಬೇಧದ ಗಿಡ ನೆಡಲಾಗುತ್ತದೆ. ಕೊನೆಗೆ ಚರಂಡಿ ನೀರು ಹರಿದು ಹೋಗಿ ಕೋಡಿ ಹಳ್ಳ ಸೇರಲಿದೆ. ಇದರಿಂದ ಕೆರೆಯನ್ನು ಒಳಚರಂಡಿ ನೀರಿನಿಂದ ಸಂರಕ್ಷಣೆ ಮಾಡಿದಂತಾಗುತ್ತದೆ.

ಬಂಡ್ ನಿರ್ಮಾಣ: ಕೆರೆ ಸುತ್ತಲೂ ಬಂಡ್ ನಿರ್ಮಿಸಲಾಗುತ್ತದೆ. ಕೆರೆ ಸುತ್ತಳತೆಯಲ್ಲಿ ಹೂಳು ತೆಗೆದು ಬಂಡ್‌ಗೆ ಬಳಸಲಾಗುತ್ತದೆ. ಅಲ್ಲದೆ, ಆ ಬಂಡ್ ಮೇಲೆ ಗಿಡ ಬೆಳೆಸಲು ಯೋಜನೆ ರೂಪಿಸಲಾಗಿದೆ.

ಕೆರೆ ಪರಿಸರದಲ್ಲಿ ಸೌಂದರ್ಯೀಕರಣ: ವರುಣ ಕೆರೆಗೆ ಚರಂಡಿ ನೀರು ಸೇರುವುದನ್ನು ಕಟ್ಟುನಿಟ್ಟಾಗಿ ತಡೆದ ಬಳಿಕ ಕೆರೆ ವಾತಾವರಣವನ್ನು ಸ್ವಚ್ಛ ಮಾಡಲಾಗುತ್ತದೆ. ಕೆರೆ ಸುತ್ತ ವಾಕಿಂಗ್ ಪಾಥ್, ಮಕ್ಕಳ ಪಾರ್ಕ್, ಲಾನ್ ನಿರ್ಮಿಸಲಾಗುತ್ತದೆ. ಅಲ್ಲದೆ, ಬಿದಿರು ವನ ಹಾಗೂ ಅಲಂಕಾರಿಕ ಗಿಡ ಬೆಳೆಸಲಾಗುತ್ತದೆ. ಕೆರೆ ಪಕ್ಕದಲ್ಲೆ ಕೆಫೆಟೇರಿಯಾ ನಿರ್ಮಿಸಲಾಗುತ್ತದೆ. ಈಗಾಗಲೇ ಬೋಟಿಂಗ್ ವ್ಯವಸ್ಥೆಯಿದ್ದು, ಕೆರೆ ಸೌಂದರ್ಯೀಕರಣವಾದ ಮೇಲೆ ಚಟುವಟಿಕೆಗಳು ಆರಂಭವಾಗಲಿವೆ.

ಬರಿದಾಯ್ತು ಕೆರೆ ಒಡಲು: ಕಳೆದ ಹಲವು ವರ್ಷಗಳಿಂದ ತುಂಬಿ ತುಳುಕುತ್ತಿದ್ದ ವರುಣ ಕೆರೆ ಇದೀಗ ಬರಿದಾಗಿದ್ದು, ಬಿರುಕು ಬಿಟ್ಟ ಸ್ಥಿತಿಯಲ್ಲಿ ಕೆರೆಯಲ್ಲಿದ್ದ ಹೂಳು ಗೋಚರಿಸುತ್ತಿದೆ.

ಪ್ರತಿದಿನ ನೀರು ಕುಡಿಯುತ್ತಿದ್ದ ಜಾನುವಾರುಗಳು ಬರಿದಾದ ಕೆರೆಯೊಳಗೆ ಅಡ್ಡಾಡುತ್ತಿವೆ. ಬರಡು ಭೂಮಿಯಂತೆ ವರುಣ ಕೆರೆ ಭಾಸವಾಗುತ್ತಿದೆ.

ಎರಡು ತಿಂಗಳ ನಂತರ ಬರಿದು: ಫೆಬ್ರವರಿ ತಿಂಗಳವರೆಗೂ ವರುಣ ಕೆರೆಯಲ್ಲಿ ನೀರು ತುಂಬಿತ್ತು. ಕೆರೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯ ನಡೆಸಲು ಟೆಂಡರ್ ಪ್ರಕ್ರಿಯೆ ನಡೆಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದ ಹಿನ್ನೆಲೆಯಲ್ಲಿ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಕೆರೆಯಲ್ಲಿ ಸಂಗ್ರಹವಾಗಿದ್ದ ನೀರನ್ನು ಕೃಷಿ ಚಟುವಟಿಕೆಗಾಗಿ ಗದ್ದೆಗೆ ಹರಿಸಲಾಗಿದೆ. ಮಾರ್ಚ್‌ನಿಂದ ಕೆರೆಯಿಂದ ನೀರು ಗದ್ದೆಗೆ ಹರಿಸಲು ಆರಂಭಿಸಲಾಗಿದ್ದು, ಏಪ್ರಿಲ್ ಅಂತ್ಯದ ವೇಳೆಗೆ ಕೆರೆಯಲ್ಲಿದ್ದ ನೀರೆಲ್ಲಾ ಖಾಲಿಯಾಗಿದೆ.

ಕೆರೆ ಒತ್ತುವರಿ ತೆರವಿಗೆ ಹೋರಾಡುತ್ತಲೇ ಬಂದಿದ್ದೇನೆ

“ ಮೈಸೂರಿನ ದೊಡ್ಡ ಕೆರೆಗಳಲ್ಲಿ ಒಂದಾಗಿರುವ ವರುಣ ಕೆರೆ ಐತಿಹಾಸಿಕ ಕೆರೆಯಾಗಿದೆ. ಒಟ್ಟು 175.16 ಎಕರೆ ವಿಸ್ತೀರ್ಣದ ಈ ಕೆರೆ ಸುತ್ತಮುತ್ತಲಿನ ಗ್ರಾಮಗಳಿಗೆ ಜೀವನಾಡಿ. ಈ ಕೆರೆ ವರುಣ ಸರ್ವೆ ನಂ.159ರಲ್ಲಿ 165 ಎಕರೆ, ಚಿಕ್ಕಳ್ಳಿ ಸರ್ವೆ ನಂ.17ರಲ್ಲಿ 6.23 ಎಕರೆ, ವಾಜಮಂಗಲ ಸರ್ವೆ ನಂ.317ರಲ್ಲಿ 3.28 ಎಕರೆ ವಿಸ್ತೀರ್ಣದಲ್ಲಿ ಚಾಚಿಕೊಂಡಿದೆ. ಈ ಹಿಂದೆ ವರುಣ ಕೆರೆ ಒತ್ತುವರಿಯಾಗುತ್ತಿತ್ತು ಎಂದು ದೊಡ್ಡಮಟ್ಟದಲ್ಲಿ ಹೋರಾಟ ಮಾಡಿದ್ದೆ. ಚಾಮುಂಡಿಬೆಟ್ಟದಿಂದ ಹರಿದು ಬರುತ್ತಿದ್ದ ಮಳೆ ನೀರು ತಿಪ್ಪಯ್ಯನಕೆರೆಗೆ ಸೇರುತ್ತಿತ್ತು. ಅಲ್ಲಿಂದ ವರುಣ ಕೆರೆಗೆ ಹರಿದು ಬರುತ್ತಿತ್ತು. ಆದರೆ, ಕೆಲ ಬಡಾವಣೆ ನಿರ್ಮಾಣವಾದಾಗ ನೀರು ಹರಿದು ಬರುತ್ತಿದ್ದ ಜಾಗ ಮುಚ್ಚಿ, ಒತ್ತುವರಿ ಮಾಡಿಕೊಳ್ಳಲಾಗಿದೆ. ಇದರಿಂದ ಹೋರಾಟ ಮಾಡಿ, ವರುಣ ನಾಲೆಯಿಂದ ವರುಣ ಕೆರೆಗೆ ನೀರು ತುಂಬಿಸುವ ಯೋಜನೆಯನ್ನು ಮಾಡಿಸಲಾಯಿತು. **–ಅಹಿಂದ ಜವರಪ್ಪ, ಸಾಮಾಜಿಕ ಹೋರಾಟಗಾರ**

ಬಫರ್ ಜೋನ್ ಕಾಯ್ದುಕೊಳ್ಳುವುದು ಅವಶ್ಯ

ಮೈಸೂರು,ಏ.30(ಎಂಟಿವೈ)–ವರುಣ ಕೆರೆಯ ನೈಜ ಸ್ಥಿತಿ ಕಾಪಾಡಿಕೊಂಡು, ಅಲ್ಲಿನ ಪಕ್ಷಿ ಸಂಕುಲಕ್ಕೆ ಹಾನಿಯಾಗದಂತೆ ಒಳಚರಂಡಿ ನೀರು ಕೆರೆಗೆ ಸೇರುವುದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕು ಎಂದು ಪಕ್ಷಿತಜ್ಞರು ಆಗ್ರಹಿಸಿದ್ದಾರೆ.

ನಗರೀಕರಣದಿಂದಾಗಿ ಕೆರೆಗಳಿಗೆ ಒಳಚರಂಡಿ ನೀರು ವ್ಯಾಪಕವಾಗಿ ಸೇರುತ್ತಿದ್ದು, ಕೆರೆ ನೈರ್ಮಲ್ಯಗೊಳ್ಳುತ್ತಿದೆ. ಅದರಲ್ಲೂ ನಗರದ ಹೊರವಲಯದಲ್ಲಿ ಹೊಸ ಬಡಾವಣೆಗಳಿಂದ ಒಳಚರಂಡಿ ನೀರು ನೇರವಾಗಿ ಕೆರೆಗಳಿಗೆ ಸೇರುತ್ತಿದೆ. ಇದನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಬೇಕು. ಆದರೆ, ಅಭಿವೃದ್ಧಿ ಹೆಸರಲ್ಲಿ ಕೆರೆ ನೈಜ ಸ್ಥಿತಿ ಕಾಪಾಡಿಕೊಂಡು, ಕೆರೆಯ ಕೋರ್ ಏರಿಯಾಗೆ ಧಕ್ಕೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಸಲಹೆ ನೀಡಿದ್ದಾರೆ.

ಜೀವ ವೈವಿಧ್ಯಕ್ಕೆ ಹಾನಿ: ಪಕ್ಷಿತಜ್ಞ ಸಪ್ತಗಿರೀಶ್ ಮಾತನಾಡಿ, ಯಾವುದೇ ಕೆರೆ ಅಭಿವೃದ್ಧಿಗೆ ಒಳಚರಂಡಿ ನೀರು ಸೇರದಂತೆ ಕ್ರಮ ಕೈಗೊಳ್ಳುವುದು ಸ್ವಾಗತಾರ್ಹ. ಆದರೆ, ಅಭಿವೃದ್ಧಿ ಹೆಸರಲ್ಲಿ ಕೆರೆಯ ಲ್ಯಾಂಡ್‌ಸ್ಕೇಪ್ ಬದಲಿಸಿದರೆ, ಅಲ್ಲಿರುವ ಜೀವವೈವಿಧ್ಯತೆ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ.

ಒಳಚರಂಡಿ ನೀರು ಕೆರೆಗೆ ಸೇರುವುದನ್ನು ತಡೆಗಟ್ಟಲು ಬಂಡ್ ಅಥವಾ ಕಾಲುವೆ ನಿರ್ಮಿಸಿ, ಅದರೊಳಗೆ ಕಲುಷಿತ ನೀರಿನಲ್ಲಿರುವ ರಾಸಾಯನಿಕ ಅಂಶ ಹೀರಿಕೊಳ್ಳುವ ವಿವಿಧ ಪ್ರಭೇದದ ಸಸ್ಯ ಬೆಳೆಸಿ, ನೈಸರ್ಗಿಕ ಜೈವಿಕ ವ್ಯವಸ್ಥೆ(ನ್ಯಾಚುರಲ್ ಬಯಾಲಜಿಕಲ್ ಸಿಸ್ಟಮ್)ನಿಂದ ಕಲುಷಿತ ನೀರನ್ನು ಶುದ್ಧೀಕರಿಸುವ ಪ್ರಕ್ರಿಯೆ ನಡೆಸುವುದು ಅನಿವಾರ್ಯ. ಕೆರೆಯ ಶೇ.50ರಷ್ಟು ಪ್ರದೇಶವನ್ನು ಕೋರ್ ಏರಿಯಾ ಎಂದು ಗುರುತಿಸಿ, ಆ ಜಾಗವನ್ನು ಕೆರೆಯ ಬಫರ್ ಜೋನ್ ಆಗಿ ರಕ್ಷಣೆ ಮಾಡಿದರೆ ಕೆರೆ ಸಂರಕ್ಷಣೆ ಮಾಡಿದಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ವೆ ಮಾಡಿ, ಬಫರ್ ಜೋನ್‌ಗೆ ಬೇಲಿ ಹಾಕಿ ರಕ್ಷಣೆ ಮಾಡಿಕೊಂಡಾಗ ಕೆರೆ ಒತ್ತುವರಿ ಸಾಧ್ಯವಿಲ್ಲ ಎಂದರು.

ವರುಣ ಕೆರೆಗೆ ಕೆಲ ವರ್ಷಗಳಿಂದ ವಲಸೆ ಪಕ್ಷಿಗಳು ಬರುತ್ತಿಲ್ಲ. ಕೆರೆಯಲ್ಲಿ ದೋಣಿ ವಿಹಾರದ ವ್ಯವಸ್ಥೆಯಿದ್ದು, ಅದರಿಂದ ವಲಸೆ ಪಕ್ಷಿಗಳಿಗೆ ಧಕ್ಕೆಯಾಗಿದೆ. ಈಗ ಕೆರೆ ಅಭಿವೃದ್ಧಿ ಮಾಡಿದರೆ, ಮುಂದಿನ ಎರಡು ವರ್ಷ ಕೆರೆಯನ್ನು ಅವಲಂಭಿಸಿದ್ದ ಪಕ್ಷಿ ಸಂಕುಲಕ್ಕೆ ಕಷ್ಟವಾಗಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೇ 3 ಮೈಸೂರಲ್ಲಿ ‘ರಾಜ್ ಸಂಗಮ, ಗಿರಿಕನ್ಯೆ ಸಂಭ್ರಮ; ಕರೋಕೆ ಗಾಯನ

ಮೈಸೂರು,ಏ.30(ಜಿಎ)–ಮೈಸೂರಿನ ಅರುಣ ರಾಗ ಕ್ರಿಯೇಷನ್ಸ್ ವತಿಯಿಂದ ಡಾ.ರಾಜ್‌ಕುಮಾರ್ ಹಾಗೂ ಡಾ.ಪುನೀತ್ ರಾಜ್‌ಕಮಾರ್ ಹುಟ್ಟುಹಬ್ಬ ಪ್ರಯುಕ್ತ ಮೇ 3ರಂದು ಸಂಜೆ 4.30ಕ್ಕೆ ‘ರಾಜ್ ಸಂಗಮ, ಗಿರಿಕನ್ಯೆ ಸಂಭ್ರಮ’ ಕರೋಕೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥಾಪಕಿ ಡಾ.ರೇಖಾ ಅರುಣ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ರಾಜ್‌ಕುಮಾರ್, ಡಾ.ಪುನೀತ್ ರಾಜ್‌ಕುಮಾರ್ ಹಾಗೂ ಡಾ.ಜಯಮಾಲಾ ಅವರ ಚಿತ್ರಗಳಗೀತೆ ಹಾಡಲಾಗುವುದು. ಕಾರ್ಯಕ್ರಮ ಮೈಸೂರು ಬಿಲ್ಡರ್ಸ್ ಅಸೋಸಿಯೇಷನ್‌ನಲ್ಲಿ ನಡೆಯಲಿದೆ. ಡಾ.ಜಯಮಾಲಾ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇನ್ನಿತರರು ಅತಿಥಿಗಳಾಗಿ ಆಗಮಿಸಲಿದ್ದಾರೆ. ಗುರುರಾಜ್, ಜಗದೀಶ್, ಸೋಮಶೇಖರ್, ಮನ್‌ಮೋಹನ್ ರಾಜ್, ಡಾ.ಗಣೇಶ್, ಡಾ. ಸುಧೀಂದ್ರ, ಪ್ರೇಮ್, ವಿನಯ್, ವಾದಿರಾಜ್, ನಾರಾಯಣಸ್ವಾಮಿ ಪ್ರಿಯಾ, ಅಪೂರ್ವ, ಶಾಂತಕುಮಾರಿ ಹಾಡಲಿದ್ದಾರೆ. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎಸ್.ಪ್ರಿಯಾ, ಲಯನ್ ಪ್ರಮೀಳಾ, ಗೋಲ್ಡ್ ಸುರೇಶ್, ಮಿಮಿಕ್ರಿ ಶ್ಯಾಂ, ಅಜಯ್ ಶಾಸ್ತ್ರಿ ಉಪಸ್ಥಿತರಿದ್ದರು.



ಜನಗಣತಿ ಸಿಬ್ಬಂದಿಗೆ ಅಭಿನಂದನೆ

ಮೈಸೂರಿನ ಬೋಗಾದಿ ಪಟ್ಟಣ ಪಂಚಾಯಿತಿ ವತಿಯಿಂದ 2026–27ನೇ ಸಾಲಿನ ಮೊದಲ ಜನಗಣತಿ ಕಾರ್ಯ ಪೂರ್ಣಗೊಳಿಸಿದ ಗಣತಿದಾರರನ್ನು ಅಭಿನಂದಿಸಲಾಯಿತು. ಈ ವೇಳೆ ಬೋಗಾದಿ ಪಪಂ ಮುಖ್ಯಾಧಿಕಾರಿ ಸುಜಯ್‌ಕುಮಾರ್, ಜನಗಣತಿ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಹಲೀಮ್‌ನಗರದಲ್ಲಿ ಗಂಧದ ಉರುಸ್, ಕವ್ವಾಲಿ

ಮೈಸೂರು,ಏ.30–ಮೈಸೂರಿನ ಬನ್ನಿಮಂಟಪ ಬಡಾವಣೆಯಲ್ಲಿರುವ ಹಲೀಮ್ ನಗರದ ಹಜರತ್ ಹಲೀಮ್ ಬಾಷಾ ಖಾದ್ರಿ ಅವರ ವಾರ್ಷಿಕ ಗಂಧದ ಉರುಸ್ ಅಂಗವಾಗಿ ಏ.30ರಿಂದ ಮೇ 2ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಏ.30ರಂದು ಸಂಜೆ 7 ಗಂಟೆಗೆ ಹಲೀಮ್ ನಗರದ ಮಸ್ಜಿದ್ ಅಕ್ಬರಿ ಮೈದಾನದಲ್ಲಿ ಅರೇಬಿಕ್ ಮದರಸಾ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಂದ ‘ಇಲ್ಮೆ ಮುಜಾಹರಾ–ಶೈಕ್ಷಣಿಕ ಪ್ರದರ್ಶನ ಕಾರ್ಯಕ್ರಮ ನಡೆಯಿತು.

ಮೇ 1ರಂದು ಸಂಜೆ 4 ಗಂಟೆಗೆ ವಾರ್ಷಿಕ ಗಂಧದ ಉರುಸ್ ಮೆರವಣಿಗೆಯು ಹಲೀಮ್ ನಗರದಿಂದ ಆರಂಭವಾಗಿ ಕೆಎಸ್‌ಆರ್‌ಟಿಸಿ ಲೇಔಟ್, ಹನುಮಂತನಗರ, ಬನ್ನಿಮಂಟಪದ ಮೂಲಕ ಮಸೀದಿ ತಲುಪಲಿದೆ. ಸಂಜೆ 7 ಗಂಟೆಗೆ ಫಾತೆಹಾಖಾನಿ, ಗಂಧದ ಲೇಪನ, ಚಾದರ್ ಷರೀಫ್ ಅರ್ಪಣೆ, ದುವಾ ಕಾರ್ಯಕ್ರಮಗಳು ನಡೆಯಲಿವೆ. ರಾತ್ರಿ 10 ಗಂಟೆಗೆ ಮುಜಾಮಿಲ್ ತಂಡದವರಿಂದ ಕವ್ವಾಲಿ ಕಾರ್ಯಕ್ರಮ ನಡೆಯಲಿದೆ. ಮೇ 2ರ ರಾತ್ರಿ ಅಂತರ ರಾಜ್ಯ ಖ್ಯಾತ ಕವ್ವಾಲಿ ಕಲಾವಿದರಾದ ಸುಲ್ತಾನ್ ನಾಜನ್ ತಂಡದಿಂದ ಕವ್ವಾಲಿ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಶಾಸಕ ತನ್ವೀರ್ ಸೇಠ್, ವಕ್ಫ್ ವ್ಯವಸ್ಥಾಪನಾ ಸಮಿತಿಯ ಮೊಹಮ್ಮದ್ ಉಸ್ಮಾನ್ ಷರೀಫ್, ಅಫ್ಸರ್ ಸಯೀದ್ ಸಿದ್ದಿಕಿ, ಸಮಿತಿಯ ಪದಾಧಿಕಾರಿಗಳು, ಸದಸ್ಯರು ಭಾಗಿಯಾಗಲಿದ್ದಾರೆ ಎಂದು ಉರುಸ್ ವ್ಯವಸ್ಥಾಪನಾ ಸಮಿತಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ನಮೀತಾಗೆ 604 ಅಂಕ



ಮೈಸೂರು: ಐಡಿಯಲ್ ಜಾವಾ ರೋಟರಿ ಪ್ರೌಢಶಾಲೆ ವಿದ್ಯಾರ್ಥಿನಿ ಬಿ.ನಮೀತಾ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 604 ಅಂಕ ಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ನಮೀತಾ ಕನ್ನಡ–123, ಇಂಗ್ಲಿಷ್–94, ಹಿಂದಿ–100, ಗಣಿತ– 95, ವಿಜ್ಞಾನ–96, ಸಮಾಜ ವಿಜ್ಞಾನ–99 ಅಂಕ ಗಳಿಸಿದ್ದಾಳೆ. ಈಕೆ ಶಿಕ್ಷಕರಾದ ಬಂಗಾರನಾಯಕ್–ಆಶಾ ದಂಪತಿ ಪುತ್ರಿ ಹಾಗೂ ಬಿಎಸ್‌ಎನ್‌ಎಲ್ ನಿವೃತ್ತ ನೌಕರ ನಾರಾಯಣರ ಮೊಮ್ಮಗಳು.

ನಾಳೆ ಟಿಡಿಆರ್, ಬಫರ್ ಝೋನ್ ವಿಚಾರ ಸಂಕಿರಣ

ಮೈಸೂರು, ಏ.30(ಜಿಎ)–ಮೈಸೂರಿನ ನರೆಡ್ಕೋ ವತಿಯಿಂದ ಮೇ 2ರಂದು ಸಂಜೆ 6.30ಕ್ಕೆ ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಟಿಡಿಆರ್ ಮತ್ತು ಬಫರ್ ಝೋನ್ ಕುರಿತ ವಿಚಾರ ಸಂಕಿರಣ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಡಾ.ಎಂ.ಡಿ. ರಾಘವೇಂದ್ರ ಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ಹೆಚ್ಚುವರಿ ನಿರ್ದೇಶಕ ಎಂ.ಸಿ. ಶಶಿಕುಮಾರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಈ ಕುರಿತು ಅರಿವು ಮೂಡಿಸಲಿದ್ದಾರೆ. ಪದಾಧಿಕಾರಿಗಳಾದ ವಿ.ಸಿ.ರವಿಕುಮಾರ್, ಎ.ಪಿ.ನಾಗೇಶ್, ಪಿ.ಎಸ್. ಗಗನ್‌ದೀಪ್, ಡಾ.ಎಸ್.ಹೆಚ್.ಜಗದೀಶ್, ಪಿ ನಂಜುಂಡಸ್ವಾಮಿ ಭಾಗವಹಿಸಲಿದ್ದಾರೆ. ಆಸಕ್ತರು ಪಾಲ್ಗೊಂಡು ಟಿಡಿಆರ್ ಮತ್ತು ಬಫರ್ ಝೋನ್ ಕುರಿತು ಇರುವ ಗೊಂದಲ ಪರಿಹರಿಸಿಕೊಳ್ಳಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎ.ಪಿ. ನಾಗೇಶ್, ವಿ.ಸಿ.ರವಿಕುಮಾರ್, ಎಸ್.ಹೆಚ್. ಜಗದೀಶ್, ಮ.ವಿ.ರಾಮ್‌ಪ್ರಸಾದ್, ಹೆಚ್.ಎಸ್. ವಿನೋದ್ ರಾಶಿಂಕರ್ ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳದ ಅಧ್ಯಕ್ಷರು, ಎಂಡಿಸಿಸಿ ಬ್ಯಾಂಕ್ ನಿರ್ದೇಶಕರು, ಕಾಂಗ್ರೆಸ್ ನಾಯಕರೂ ಆದ ಎಸ್.ಚಂದ್ರಶೇಖರ್‌ಗೆ ಹುಟ್ಟುಹಬ್ಬದ ಶುಭಾಶಯ







ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾ ಮಂಡಳದ ಅಧ್ಯಕ್ಷರಾದ ಎಸ್.ಚಂದ್ರಶೇಖರ್ ಅವರನ್ನು ಸಾಹುಕಾರ್ ಚೆನ್ನಯ್ಯ ಬ್ಲಾಕ್ ಅಧ್ಯಕ್ಷ ಜಿ.ಎನ್.ಮಂಜುನಾಥ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಶಿವಣ್ಣ ಹಾಗೂ ಜನತಾ ಬಜಾರ್ ಅಧ್ಯಕ್ಷ ಯು.ಎಸ್.ರಮೇಶ್ ನಿರ್ದೇಶಕರಾದ ಎನ್.ಮಂಜುನಾಥ್, ಗುಲಾಮ್ ರಬ್ಬಾನಿ, ಎಂ.ಆನಂದ್, ಕಾಂಗ್ರೆಸ್ ಮುಖಂಡರು, ಹಿತೈಷಿಗಳು, ಅಭಿಮಾನಿಗಳು ಶಾಲು, ಪೇಟ ತೊಡಿಸಿ, ಕೇಕ್ ತಿನ್ನಿಸಿ, ಭಾರೀ ಗಾತ್ರದ ಹಾರ ಹಾಕಿ, ಅಭಿನಂದಿಸಿ, ಶುಭಾಶಯ ಕೋರಿದರು.

ದೇಶ - ವಿದೇಶ

ಅತ್ಯಾಚಾರ ಸಂತ್ರಸ್ತರ ಗರ್ಭಪಾತ ಅವಧಿ ಮಿತಿ ಕಾನೂನು ತಿದ್ದುಪಡಿಗೆ ಸುಪ್ರೀಂ ಒತ್ತಾಯ



ನವದೆಹಲಿ: ಅತ್ಯಾಚಾರದಿಂದ ಉಂಟಾಗುವ ಗರ್ಭಧಾರಣೆಯ ಪ್ರಕರಣಗಳಲ್ಲಿ 20 ವಾರಗಳ ಕಾನೂನು ಮಿತಿಯನ್ನು ಮೀರಿಯೂ ಗರ್ಭಪಾತಕ್ಕೆ ಅವಕಾಶ ನೀಡುವ ನಿಟ್ಟಿನಲ್ಲಿ ಕಾನೂನು ತಿದ್ದುಪಡಿ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಒತ್ತಾಯಿಸಿದೆ.

ಅತ್ಯಾಚಾರಕ್ಕೊಳಗಾಗಿ 31 ವಾರಗಳ ಗರ್ಭಿಣಿಯಾಗಿದ್ದ 15 ವರ್ಷದ ಬಾಲಕಿ ಗರ್ಭಪಾತಕ್ಕೆ ಅನುಮತಿ ನೀಡಿದ್ದ ಸುಪ್ರೀಂ ಕೋರ್ಟ್ ತೀರ್ಪನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ‘ಕ್ಯುರೇಟಿವ್’ ಅರ್ಜಿಯನ್ನು ಸುಪ್ರೀಂ ಕೋರ್ಟ್ ತೀವ್ರವಾಗಿ ಖಂಡಿಸಿ, ಈ ವಿಷಯದಲ್ಲಿ ಕಾನೂನು ಕಾಲಾನುಸಾರ ಜೀವಂತವಾಗಿರಬೇಕು ಎಂದು ಅಭಿಪ್ರಾಯಪಟ್ಟಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜ್ಯೋತಿರ್ಮಯ ಬಾಗ್ಚಿ ಅವರಿದ್ದ ಪೀಠವು, ಬಾಲಕಿಯ ಮೇಲಿನ ಅತ್ಯಾಚಾರ ಪ್ರಕರಣ ಗಂಭೀರವಾಗಿದ್ದು, ಆಕೆಯನ್ನು ಬಲವಂತವಾಗಿ ತಾಯ್ತನಕ್ಕೆ ಒತ್ತಾಯಿಸುವುದು ಆಕೆಯ ಮೂಲಭೂತ ಹಕ್ಕುಗಳಿಗೆ ಧಕ್ಕೆಯಾಗುತ್ತದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಪ್ರಕರಣದ ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ಜುಲೈ 14ಕ್ಕೆ ನಿಗದಿಪಡಿಸಿದೆ.

ಪಾಕಿಸ್ತಾನದಲ್ಲಿ ಅಪರಿಚಿತರ ಗುಂಡಿಗೆ ಮತ್ತೋರ್ವ ಉಗ್ರ ಬಲಿ



ಇಸ್ಲಾಮಾಬಾದ್: ಜಾಗತಿಕ ಭಯೋತ್ಪಾದನಾ ಸಂಘಟನೆ ಎಂದು ಗುರುತಿಸಿ ಕೊಂಡಿರುವ ಪಾಕಿಸ್ತಾನದ ಜೈಶ್–ಎ–ಮೊಹಮ್ಮದ್ ಸಂಘಟನೆಯ ಪ್ರಮುಖ ಕಮಾಂಡರ್ ಮೌಲಾನಾ ಸಲ್ಮಾನ್ ಅಜರ್‌ನನ್ನು ಬುಧವಾರ ಪಾಕಿಸ್ತಾನದ ಭಾವಲ್‌ಪುರ್‌ದಲ್ಲಿ ಅಪರಿಚಿತ ಬಂದೂಕುದಾರಿಗಳು ಹತ್ಯೆ ಮಾಡಿದ್ದಾರೆ ಎಂದು ವರದಿಯಾಗಿದೆ. ಮೃತ ಉಗ್ರ ಮೌಲಾನಾ ಸಲ್ಮಾನ್ ಅಜರ್, ಮೌಲಾನಾ ಮಸೂರ್ ಅಜರ್‌ನ ಸಹೋದರ ಸಂಬಂಧಿಯಾಗಿದ್ದು ಈತ ಪಂಜಾಬ್ ಭಾಗದಲ್ಲಿ ಭಯೋತ್ಪಾದನೆಯನ್ನು ಹೆಚ್ಚಿಸುವ ಜವಾಬ್ದಾರಿ ಹೊಂದಿದ್ದ ಎಂಬ ಮಾಹಿತಿಯಿದೆ. ಮೌಲಾನಾ ಸಲ್ಮಾನ್ ಅಜರ್‌ನನ್ನು ಹತ್ಯೆ ಮಾಡಿರುವ ವೀಡಿಯೊ ಸಾಮಾಜಿಕ ಜಾಲತಾಣ ವೇದಿಕೆ ಎಕ್ಸ್‌ನಲ್ಲಿ ವೈರಲ್ ಆಗುತ್ತಿದ್ದು, ಬೈಕ್‌ನಲ್ಲಿ ಬಂದ ಇಬ್ಬರು ಎಕೆ 47 ಗನ್ ಮೂಲಕ ಹತ್ಯೆ ಮಾಡಿ ಪರಾರಿಯಾಗಿದ್ದಾರೆ. ಕಳೆದ ಕೆಲ ವರ್ಷಗಳಿಂದ ಪಾಕಿಸ್ತಾನದಲ್ಲಿ ಕುಳಿತುಕೊಂಡು ಭಾರತದ ವಿರುದ್ಧ ಸಂಚನ್ನು ರೂಪಿಸುತ್ತಿದ್ದ ಭಯೋತ್ಪಾದಕರ ಬೇಟೆ ತೀವ್ರಗತಿಯಲ್ಲಿ ನಡೆಯುತ್ತಿದ್ದು, ಇದರ ಹಿಂದೆ ಭಾರತದ ಕೈವಾಡವಿದೆ ಎಂದು ಪಾಕಿಸ್ತಾನದ ಮಾಧ್ಯಮಗಳು ಅನುಮಾನ ವ್ಯಕ್ತಪಡಿಸುತ್ತಿವೆ. ಆದರೆ ಭಾರತ ಈ ಕುರಿತು ಯಾವುದೇ ಅಧಿಕೃತ ಹೇಳಿಕೆಗಳನ್ನು ಈವರೆಗೆ ನೀಡಿಲ್ಲ.

ಪಶ್ಚಿಮ ಏಷ್ಯಾ ಸಂಘರ್ಷ: ಭಾರತದಲ್ಲಿ ಹಣದುಬ್ಬರ ಅಪಾಯ ಸಾಧ್ಯತೆ



ನವದೆಹಲಿ: ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮ ತೈಲ ಪೂರೈಕೆ ಅಡಚಣೆ ಹೀಗೆ ಮುಂದುವರೆದಲ್ಲಿ ಹಣದುಬ್ಬರ ಅಪಾಯ ಎದುರಿಸುವ ಸಾಧ್ಯತೆ ಇದೆ ಎಂದು ಕೇಂದ್ರ ಆರ್ಥಿಕ ಸಚಿವಾಲಯ ಎಚ್ಚರಿಕೆ ನೀಡಿದೆ. ಏಪ್ರಿಲ್‌ನ ಆರ್ಥಿಕ ವಿಶ್ಲೇಷಣೆಯಲ್ಲಿ ಈ ಕುರಿತು ತಿಳಿಸಿರುವ ಸಚಿವಾಲಯ, ಗಲ್ಫ್ ಪ್ರದೇಶಗಳಲ್ಲಿ ತೈಲ ಮತ್ತು ಅನಿಲ ಉತ್ಪಾದನೆ ಮೇಲಿನ ಹಾನಿಯನ್ನು ಸರಿ ಮಾಡಲು ಹಲವು ತಿಂಗಳುಗಳು ಬೇಕಾಗುತ್ತವೆ. ಹವಾಮಾನ ಪರಿಸ್ಥಿತಿಯಿಂದ ಮಾನ್ಸೂನ್‌ನ ಖಾರಿಫ್ ಋತುವಿನಲ್ಲಿ ವಿಳಂಬ ಸಂಭವಿಸಿದಲ್ಲಿ, ಹಣದುಬ್ಬರದ ಒತ್ತಡಗಳು ತೀವ್ರಗೊಳ್ಳಬಹುದು ಎಂದು ಹೇಳಿದೆ.

ಹಿಂದಿನ ಹಣಕಾಸು ವರ್ಷದಲ್ಲಿ ಆರ್ಥಿಕತೆಯು ಶೇಕಡಾ 7.6ರಷ್ಟು ಜಿಡಿಪಿ ಬೆಳವಣಿಗೆ ದಾಖಲಿಸಿದ್ದು, ಮುಂಬರುವ 2026–27 ವರ್ಷಕ್ಕೆ ಶೇಕಡಾ 7ರಿಂದ 7.4ರಷ್ಟು ನಿರೀಕ್ಷಿಸಬಹುದು. ಆದಾಗ್ಯೂ ಪಶ್ಚಿಮ ಏಷ್ಯಾ ಪರಿಣಾಮದಿಂದ ಭವಿಷ್ಯ ಅನಿಶ್ಚಿತತೆಯಿಂದ ಕೂಡಿದೆ. ವ್ಯವಹಾರಗಳು ಲಾಭವನ್ನು ರಕ್ಷಿಸಿಕೊಳ್ಳಲು ಗ್ರಾಹಕರಿಗೆ ಹೆಚ್ಚಿನ ವೆಚ್ಚವನ್ನು ವರ್ಗಾಯಿಸುತ್ತವೆ.

ಈ ವೆಚ್ಚ ತಳ್ಳುವಿಕೆ ಹಣದುಬ್ಬರವಾಗಿ ಬದಲಾಗಬಹುದು. ಸಣ್ಣ ಕೈಗಾರಿಕೆಗಳು ಪೆಟ್ರೋಲಿಯಂ ಉತ್ಪನ್ನಗಳನ್ನು ಅವಲಂಬಿಸಿರುವುದರಿಂದ, ಹೆಚ್ಚಿನ ಇಂಧನ ಬೆಲೆಗಳ ಪರಿಣಾಮವು ವ್ಯಾಪಕವಾಗಿರಲಿದೆ.

ಜಮ್ಮು–ಕಾಶ್ಮೀರ ಪಾಕಿಸ್ತಾನದ ಭಾಗವೆಂದಿದ್ದ ನೇಪಾಳ ಏರ್‌ಲೈನ್ಸ್ ಕ್ಷಮೆಯಾಚನೆ

ಕಠ್ಮಂಡು: ನೆಟ್‌ವರ್ಕ್ ನಕ್ಷೆಯಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನದ ಭಾಗ ಎಂದು ತೋರಿಸಿ ವಿವಾದ ಸೃಷ್ಟಿಸಿದ್ದ ನೇಪಾಳ ಏರ್‌ಲೈನ್ಸ್, ಯೂಟರ್ನ್ ಹೊಡೆದು ಗುರುವಾರ ಕ್ಷಮೆಯಾಚಿಸಿದೆ. ಇತ್ತೀಚೆಗೆ ನಮ್ಮ ಸಾಮಾಜಿಕ ಮಾಧ್ಯಮ ಚಾನೆಲ್‌ಗಳಲ್ಲಿ ಹಂಚಿಕೊಂಡ ನೆಟ್‌ವರ್ಕ್ ನಕ್ಷೆಯಲ್ಲಿನ ದೋಷಕ್ಕಾಗಿ ನಾವು ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇವೆ. ನಕ್ಷೆಯು ನೇಪಾಳ ಅಥವಾ ನೇಪಾಳ ಏರ್‌ಲೈನ್ಸ್‌ನ ಅಧಿಕೃತ ನಿಲುವನ್ನು ಪ್ರತಿಬಿಂಬಿಸದ ಅಂತರರಾಷ್ಟ್ರೀಯ ಗಡಿಗಳಿಗೆ ಸಂಬಂಧಿಸಿದಂತೆ ಗಮನಾರ್ಹ ತಪ್ಪುಗಳನ್ನು ಒಳಗೊಂಡಿದೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ನಾವು ತಕ್ಷಣ ಪೋಸ್ಟ್ ಅನ್ನು ತೆಗೆದುಹಾಕಿದ್ದೇವೆ ಮತ್ತು ನಮ್ಮ ಸಾಮಗ್ರಿಗಳು ನಿಖರತೆಯ ಅತ್ಯುನ್ನತ ಮಾನದಂಡಗಳನ್ನು ಪೂರೈಸುತ್ತವೆ ಎಂದು ಖಚಿತಪಡಿಸಿಕೊಳ್ಳಲು ಆಂತರಿಕ ಪರಿಶೀಲನೆ ನಡೆಸುತ್ತಿದ್ದೇವೆ. ಈ ಪ್ರದೇಶದಲ್ಲಿನ ನಮ್ಮ ನೆರೆಹೊರೆಯವರು ಮತ್ತು ಸ್ನೇಹಿತರೊಂದಿಗಿನ ನಮ್ಮ ಸಂಬಂಧಗಳನ್ನು ನಾವು ಆಳವಾಗಿ ಗೌರವಿಸುತ್ತೇವೆ ಮತ್ತು ಆ ಪೋಸ್ಟ್‌ನಿಂದ ಉಂಟಾದ ಯಾವುದೇ ಅಪರಾಧಕ್ಕೆ ತೀವ್ರ ವಿಷಾದ ವ್ಯಕ್ತಪಡಿಸುವುದಾಗಿ ವಿಮಾನಯಾನ ಸಂಸ್ಥೆ ತಿಳಿಸಿದೆ.

ಎಐ, ಡೀಪ್‌ಫೇಕ್ ಬಳಸಿ ಭಾರೀ ವಂಚನೆ: ಜಾಲ ಭೇದಿಸಿದ ಅಹಮದಾಬಾದ್ ಪೊಲೀಸರು



ಅಹಮದಾಬಾದ್: ಅತ್ಯಾಧುನಿಕ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಬೇರೆಯವರ ಹೆಸರಿನಲ್ಲಿ ಡಿಜಿಟಲ್ ವೇದಿಕೆಗಳ ಮೂಲಕ ಸಾಲ ತೆಗೆದುಕೊಂಡು ವಂಚಿಸುತ್ತಿದ್ದ ಜಾಲವನ್ನು ಅಹಮದಾಬಾದ್ ಸೈಬರ್ ಕ್ರೈಂ ಪೊಲೀಸರು ಭೇದಿಸಿದ್ದಾರೆ. ಈ ಸಂಬಂಧ ಕನು ಪರ್ಮಾರ್(32), ಆಶಿಶ್ ವಾಲಂಡ್(27), ಮೊಹಮ್ಮದ್ ಕೈಫ್ ಪಟೇಲ್(26) ಹಾಗೂ ದೀಪ್ ಗುಪ್ತಾ(29)ನನ್ನು ಬಂಧಿಸಲಾಗಿದೆ. ಇವರು ಸಂತ್ರಸ್ತರಿಗೆ ಒಟಿಪಿ ತಲುಪದಂತೆ ತಡೆದು ಅವರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಸಾಲ ಪಡೆದು ವಂಚಿಸಿದ್ದಾರೆ.

ಬ್ಯಾಂಕ್ ವಹಿವಾಟುಗಳಿಗೆ ಸಂಬಂಧಿಸಿದ ಒಟಿಪಿ ಬಾರದ ಹಿನ್ನೆಲೆಯಲ್ಲಿ ಉದ್ಯಮಿಯೊಬ್ಬರು ಆಧಾರ್ ಅಪ್ಡೇಟ್‌ಗೆ ಮುಂದಾದಾಗ ವಂಚನೆ ಬೆಳಕಿಗೆ ಬಂದಿದೆ. ಆಧಾರ್‌ನೊಂದಿಗೆ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆ ಮತ್ತು ಇಮೇಲ್ ಐಡಿ ತಮಗೆ ತಿಳಿಯದಂತೆ ಬದಲಾಗಿರುವುದನ್ನು ನೋಡಿ ಶಾಕ್ ಆಗಿ ಸೈಬರ್ ಕ್ರೈಮ್ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣವನ್ನು ಗಂಭೀರವಾಗಿ ಸ್ವೀಕರಿಸಿದ ಅಹಮದಾಬಾದ್ ಪೊಲೀಸರು ಈಗ ಆರೋಪಿಗಳನ್ನು ಬಂಧಿಸಿದ್ದಾರೆ. ಅಕ್ರಮ ಮೂಲಗಳಿಂದ ಆಧಾರ್ ವಿವರಗಳು ಮತ್ತು ಕೇವಲ ಒಂದು ಸ್ಥಿರ ಫೋಟೋ ಸಂಗ್ರಹಿಸಿ, ಗೂಗಲ್‌ನ ಜೆಮಿನಿ ಎಐ ಟೂಲ್ ಬಳಸಿ ಫೋಟೋವನ್ನು ಜೀವಂತ ಮನುಷ್ಯನಂತೆ ಕಣ್ಣು ಮಿಟುಕಿಸುವ ಮತ್ತು ಮುಖದ ಚಲನೆಯಿರುವ ಹಾಗೆ ಡೀಪ್‌ಫೇಕ್ ವೀಡಿಯೊ ಆಗಿ ಪರಿವರ್ತಿಸುತ್ತಿದ್ದರು.

ಮಹಿಷಾಸುರ ಮರ್ದಿನಿ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮ ಕಲಶೋತ್ಸವ



ಮಡಿಕೇರಿ, ಏ.30– ನವೀಕರಣಗೊಂಡ ಭಾಗಮಂಡಲ ತಾವೂರು ಗ್ರಾಮದ ಶ್ರೀ ಮಹಿಷಾಸುರ ಮರ್ದಿನಿ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮ ಕಲಶೋತ್ಸವ ನಡೆಯಿತು. ನೀಲೇಶ್ವರ ಶ್ರೀ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಅಷ್ಟಬಂಧ ಬ್ರಹ್ಮ ಕಲಶೋತ್ಸವ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನೆರವೇರಿತು. ಏ.25ರಿಂದ ಪ್ರಾರಂಭವಾದ ದೇವಸ್ಥಾನದ ಜೀರ್ಣೋದ್ಧಾರದ ಕಲಶೋತ್ಸವದಲ್ಲಿ ಬೆಟ್ಟದಿಂದ ದೇವರು ತರುವುದು, ಗ್ರಾಮ ಸಂಸ್ಕೃತಿ ಕುರಿತು ಮಕ್ಕಳಿಂದ ಹೀಲಿಯಾಟ, ಸಾಮೂಹಿಕ ಪ್ರಾರ್ಥನೆ, ಪುಣ್ಯಾಹ ಪ್ರಸಾದ, ಶುದ್ಧಿ ವಾಸ್ತು ರಣೋಜ್ಞ ಹೋಮ, ವಾಸ್ತು ಬಲಿ, ಗಣಪತಿ ಹೋಮ, ಬಿಂಬಶುದ್ಧಿ, ನೃತ್ಯಬಲಿ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು 5 ದಿನಗಳ ಕಾಲ ನಡೆದು ಭಕ್ತರಿಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು.

ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಕೋಳಿಬೈಲು ಸಿ.ವೆಂಕಟೇಶ್, ಉಪಾಧ್ಯಕ್ಷ ಅಯ್ಯಣೀರ ಎ.ದಿನೇಶ್, ಕಾರ್ಯದರ್ಶಿ ಬಾರಿಕೆ ಎ.ತೀರ್ಥಕುಮಾರ್, ತಕ್ಕ ಮುಖ್ಯಸ್ಥ ಕುರುಂಜಿ ಸಿ.ದೇವಯ್ಯ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕುದುಕುಳಿ ಸಿ.ಅಶ್ವತ್, ಖಜಾಂಚಿ ಹೊಸಗದ್ದೆ ಸಿ.ವೆಂಕಟರಮಣ, ತಾವೂರು ದೇವಸ್ಥಾನ ಸಮಿತಿ ಮಾಜಿ ಅಧ್ಯಕ್ಷ ಅಮೆ ಬಾಲಕೃಷ್ಣ, ದೇವಸ್ಥಾನದ ಆಡಳಿತ ಮಂಡಳಿ ಸದಸ್ಯರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಮಾದಕ ವಸ್ತು ಮುಕ್ತ ಜಿಲ್ಲೆ ಕುರಿತು ಜಾಗೃತಿ ಉಪನ್ಯಾಸ

ಮಡಿಕೇರಿ: ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಎನ್‌ಎಸ್‌ಎಸ್ ಘಟಕಗಳು ಜಂಟಿಯಾಗಿ ಮಾದಕ ವಸ್ತು ದುರುಪಯೋಗ ಮತ್ತು ಮಾದಕ ವಸ್ತು ಮುಕ್ತ ಜಿಲ್ಲೆ ಕುರಿತು ಜಾಗೃತಿ ಉಪನ್ಯಾಸವನ್ನು ಆಯೋಜಿಸಿತ್ತು.

ವೃತ್ತ ನಿರೀಕ್ಷಕ ಪಿ.ಕೆ.ರಾಜು, ಕಾಲೇಜು ಪ್ರಾಂಶುಪಾಲ ಮೇಜರ್ ಪ್ರೊ. ರಾಘವ ಮಾತನಾಡಿದರು. ಡ್ರಗ್ ಬಳಕೆದಾರರು ಹಾಗೂ ಸರಬರಾಜು ಮಾಡುವವರ ಕುರಿತು ತಿಳಿದು ಬಂದಲ್ಲಿ ಪೊಲೀಸ್ ಇಲಾಖೆ, ಪೋಷಕರು ಅಥವಾ ಬೋಧಕರಿಗೆ ಮಾಹಿತಿ ನೀಡುವ ಮೂಲಕ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಪ್ರಶಸ್ತಿಗಳಿಗಿಂತ ಜನಾಂಗದವರು, ತಾಯಿ ಕಾವೇರಮ್ಮೆಯ ಆಶೀರ್ವಾದ ಅಮೂಲ್ಯ

ಮಹಿಳಾ ಹಾಕಿ ಪಂದ್ಯಾವಳಿಗೆ ಚಾಲನೆ ನೀಡಿದ ನಟಿ ಹರ್ಷಿಕಾ ಪೂಣಚ್ಚ

ನಾಪೋಕ್ಲು: ಚಿತ್ರರಂಗದಲ್ಲಿ ತನಗೆ ಸಿಕ್ಕ ಎಲ್ಲಾ ಪ್ರಶಸ್ತಿಗಳಿಗಿಂತ ಜನಾಂಗದವರ ಮತ್ತು ತಾಯಿ ಕಾವೇರಮ್ಮೆಯ ಆಶೀರ್ವಾದ ಅಮೂಲ್ಯವಾದದು ಎಂದು ನಟಿ ಹರ್ಷಿಕಾ ಪೂಣಚ್ಚ ತಿಳಿಸಿದ್ದಾರೆ.

ಇಲ್ಲಿನ ಕೆಪಿಎಸ್ ಶಾಲೆಯ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಜೇನಂಡ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ ಮಹಿಳೆಯರ ಹಾಕಿ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ತಾಯಿ ಕಾವೇರಮ್ಮನಿಗೆ ನನ್ನನ್ನು ಹೋಲಿಸಿದ್ದು, ನಿಮ್ಮೆಲ್ಲರ ಆಶೀರ್ವಾದಕ್ಕೆ ನಾನು ಋಣಿ. ಕೊಡಗಿನಲ್ಲಿ ಕೈಲು ಮುಹೂರ್ತ, ಕಾವೇರಿ ಸಂಕ್ರಮಣ ಹಾಗೂ ಹುತ್ತರಿ ಹಬ್ಬಗಳನ್ನು ಪ್ರಮುಖ ಹಬ್ಬಗಳನ್ನಾಗಿ ಆಚರಿಸಲಾಗುತ್ತದೆ. ಇದೀಗ ಕೊಡವ ಹಾಕಿ ಉತ್ಸವ ಕೂಡ ಹಬ್ಬಗಳ ಸಾಲಿಗೆ ಸೇರ್ಪಡೆಗೊಂಡಿದ್ದು ನಾಲ್ಕು ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ ಎಂದರು.

ಕೊಡಗಿನಲ್ಲಿ ನಡೆಯುವ ಈ ಹಾಕಿ ಉತ್ಸವ ಯಾವ ರಾಷ್ಟ್ರದಲ್ಲಿಯೂ ಇಲ್ಲ. ಯಾವುದೇ ಜನಾಂಗದಲ್ಲಿಯೂ ಇಲ್ಲ. ಅಂತಹ ವೈಶಿಷ್ಟ್ಯ ಪೂರ್ಣವಾದ ಹಾಕಿ ಉತ್ಸವವನ್ನು ಕೊಡವ ಜನಾಂಗದವರು ಆಯೋಜಿಸುತ್ತಿರುವುದು ಪ್ರಶಂಶನೀಯ ಎಂದರು. ಇಂಡಿಯನ್ ಹಾಕಿ ಕ್ಯಾಂಪರ್ ಕನ್ನಂಡ ರಾಣಿ ಕರುಂಬಯ್ಯ ಅವರು ಮಾತನಾಡಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಇಂಟರ್ನ್ಯಾಷನಲ್ ಕೀಯರ್ ತೆಕ್ಕಡ ಭವಾನಿ, ಹಾಕಿ ಕರ್ನಾಟಕ ಕಾರ್ಯದರ್ಶಿ, ಮಾಜಿ ಒಲಂಪಿಯನ್ ಅಂಜಪರವಂಡ ಬಿ ಸುಬ್ಬಯ್ಯ, ಅಂತರ ರಾಷ್ಟ್ರೀಯ ಹಾಕಿ ಕ್ರೀಡಾಪಟು ಕೂತಂಡ ಪೂನಚ್ಚ , ಕೊಡವ ಅಕಾಡೆಮಿ ಮಾಜಿ ಅಧ್ಯಕ್ಷ ಉಳ್ಳಿಯಡ ಪುವಯ್ಯ, ದಾಟಿ ಪುವಯ್ಯ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ, ನಿರ್ದೇಶಕರು, ಜೇನಂಡ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯಲ್ಲಿ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.




ಜೇನಂಡ ಕೊಡವ ಕೌಟುಂಬಿಕ ಮಹಿಳೆಯರ ಹಾಕಿ ಟೂರ್ನ್‌ಮೆಂಟಿನ ಅಂತಿಮ ಪಂದ್ಯವನ್ನು ಚಲನಚಿತ್ರ ನಟಿ ಹರ್ಷಿಕಾ ಪೂಣಚ್ಚ ಉದ್ಘಾಟಿಸಿದರು.

ಗಾಂಜಾ ಮಾರಾಟಕ್ಕೆ ಯತ್ನ: ಮೂವರ ಬಂಧನ



ಜಾಬೀರ್



ಸುಲ್ತಾನ್ ಪ್ರಧಾನ್



ಸ್ವರ್ಣಲತಾ ನಾಯಕ್

ಮಡಿಕೇರಿ,ಏ.30– ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಗ್ರಾಮಾಂತರ ಪೊಲೀಸರು ಗಾಂಜಾವನ್ನುವಶ ಪಡಿಸಿಕೊಂಡಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಜಾಬೀರ್(21), ಒರಿಸ್ಸಾ ರಾಜ್ಯದ ಕಂದನಮಾಲ್ ಜಿಲ್ಲೆಯ ಕಳಿಂಗ ಗ್ರಾಮದ ಸುಲ್ತಾನ್ ಪ್ರಧಾನ್(55) ಹಾಗೂ ಇದೇ ರಾಜ್ಯದ ಮದಿನಂಜು ಗ್ರಾಮದ ಸ್ವರ್ಣಲತಾ ನಾಯಕ್(35) ಬಂಧಿತ ಆರೋಪಿಗಳು.

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಇಬ್ನಿವಳವಾಡಿ ಗ್ರಾಮದ ಸಿಂಕೋನದಿಂದ ಮಕ್ಕಂದೂರು ಕಡೆಗೆ ಹೋಗುವ ರಸ್ತೆಯಲ್ಲಿ ದಾಳಿ ನಡೆಸಿದ ಪೊಲೀಸರು ಆರೋಪಿಗಳ ಬಳಿಯಿದ್ದ 15 ಕೆ.ಜಿ. 903 ಗ್ರಾಂ ಗಾಂಜಾ ಮತ್ತು 3 ಮೊಬೈಲ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಕಾರ್ಯಾಚರಣೆಯಲ್ಲಿ ಜಿಲ್ಲಾ ಗುಪ್ತದಳ ವೃತ್ತ ನಿರೀಕ್ಷಕ ಮೇದಪ್ಪ ಐ.ಪಿ, ಗ್ರಾಮಾಂತರ ಠಾಣಾ ವೃತ್ತ ನಿರೀಕ್ಷಕ ಚಂದ್ರಶೇಖರ್ ಹೆಚ್.ವಿ, ಎಎಸ್‌ಐ ಚರ್ಮಣ್ಣ ಸಿ.ಯು, ಸಿಬ್ಬಂದಿಗಳಾದ ಮಹೇಶ್ ಎಂ.ಕೆ, ಉದಯ್ ಕುಮಾರ್ ಜಿ.ಆರ್, ನಿರಂಜನ ಎಂ.ಎನ್, ಪ್ರವೀಣ್ ಬಿ.ಕೆ, ರಾಜೇಶ್ ಸಿ.ಕೆ, ಶರತ್ ರೈ ಬಿ.ಜೆ, ಜಿ.ರುದ್ರಪ್ಪ ಹಾಗೂ ಎಂ.ಗಾಯತ್ರಿ ಪಾಲ್ಗೊಂಡಿದ್ದರು.

ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ ಫೈನಲ್ ಪಂದ್ಯ ಇಂದು

ಮಡಿಕೇರಿ,ಏ.30– ಕೊಡವ ಕುಟುಂಬಗಳ ನಡುವೆ ಮೂರ್ನಾಡಿನಲ್ಲಿ ನಡೆಯುತ್ತಿರುವ 24ನೇ ವರ್ಷದ 'ಬೇತ್ರಿ ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ'ಯ ಫೈನಲ್ಸ್ ಮತ್ತು ಸಮಾರೋಪ ಸಮಾರಂಭ ಶುಕ್ರವಾರ (ಮೇ 1) ನಡೆಯಲಿದೆ.

ಬೇತ್ರಿ ಮುಕ್ಕಾಟಿರ ಪಟ್ಟೆದಾರ ಕಾಳಪ್ಪ ಹಾಗೂ ಕ್ರಿಕೆಟ್ ನಮ್ಮೆಯ ಅಧ್ಯಕ್ಷ ಸುರೇಶ್ ಪೆಮ್ಮಯ್ಯ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಡೆಯುವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಮಾಜಿ ಉಸ್ತುವಾರಿ ಸಚಿವ ಎನ್.ಎಸ್.ಬೋಸ್‌ರಾಜು ಪಾಲ್ಗೊಳ್ಳಲಿದ್ದಾರೆ. ಅತಿಥಿಗಳಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು, ವಿರಾಜಪೇಟೆ ಕ್ಷೇತ್ರ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ಶಾಸಕ ಡಾ.ಮಂತರ್ ಗೌಡ, ಉದ್ಯಮಿಗಳಾದ ಮಾಚೆಟ್ಟಿರ ಜೆನಿತ್ ಅಯ್ಯಪ್ಪ, ಮಣವಟ್ಟಿರ ಮಧು ಬೋಪಣ್ಣ, ಎಸ್.ಬಾಲಚಂದ್ರ, ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಕಾರ್ಸನ್ ಹಾಗೂ ಉಪಾಧ್ಯಕ್ಷ ಚೇರಂಡ ಕಿಶನ್ ಆಗಮಿಸಲಿದ್ದಾರೆ.

ಕಾವೇರಿ ಜಲಾನಯನ ಪ್ರದೇಶಕ್ಕೆ ಕಾವೇರಿ ನದಿ ರಕ್ಷಣಾ ಸಮಿತಿ ಭೇಟಿ



ಕೊಡಗಿನ ತಲಾಕಾವೇರಿ ಮತ್ತು ಭಾಗಮಂಡಲಕ್ಕೆ ಕಾವೇರಿ ನದಿ ರಕ್ಷಣಾ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ವಿವಿಧ ಮಠದ ಸ್ವಾಮೀಜಿಗಳು ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥೇಶ್ವರ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದ ಸ್ವಾಮೀಜಿ, ಸಮಿತಿ ಅಧ್ಯಕ್ಷ ಹೆಚ್.ಕೆ. ರಾಮು, ಬೆಟ್ಟದಪುರದ ಶ್ರೀ ಚನ್ನಬಸವ ಸ್ವಾಮೀಜಿ, ಸಾಹಿತಿ ಪ್ರಧಾನ ಗುರುದತ್, ಚಂದ್ರ ಮೋಹನ್ ಸೇರಿದಂತೆ ಇತರರು ಈ ವೇಳೆ ಉಪಸ್ಥಿತರಿದ್ದರು.

ದ್ವಿತೀಯ ಪಿಯು ಟಾಪರ್‌ಗೆ ಸನ್ಮಾನ

ಕುಶಾಲನಗರ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಇಲ್ಲಿನ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ರಿಲಾಸಾರಮ್ಮ ವಾಣಿಜ್ಯ ವಿಭಾಗದಲ್ಲಿ ಜಿಲ್ಲೆಗೆ ದ್ವಿತೀಯ ಟಾಪರ್ ಆಗಿ ತೇರ್ಗಡೆ ಹೊಂದಿದ ಹಿನ್ನೆಲೆಯಲ್ಲಿ ಹಿರಿಯ ನಾಗರಿಕ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಇಲ್ಲಿನ ನಿಂಗೇಗೌಡ ಬಡಾವಣೆಯ ನಿವಾಸಿ ರಜಾಕ್ ಮತ್ತು ರಮ್ಲಾತ್ ಅವರ ಪುತ್ರಿಯಾದ ಈಕೆ ವಾಣಿಜ್ಯ ವಿಭಾಗದಲ್ಲಿ 600ಕ್ಕೆ 590 ಅಂಕಗಳನ್ನು ಪಡೆದಿದ್ದಾರೆ. ಸಮಿತಿ ಸದಸ್ಯರು ರಿಲಾಸಾರಮ್ಮಗೆ ಸನ್ಮಾನದೊಂದಿಗೆ ಪ್ರೋತ್ಸಾಹ ಧನ ನೀಡಿ ಮುಂದಿನ ಶೈಕ್ಷಣಿಕ ಪ್ರಗತಿಗೆ ಶುಭ ಹಾರೈಸಿದರು. ಈ ಸಂದರ್ಭ ಶಿಕ್ಷಕ ಸುಲೇಮಾನ್, ಸಿ.ಎಂ ಅರಿಫೀಜ್, ಹಮೀದ್ ಬಜ್ಪೆ ಸೈಫ್, ಶಿವಪ್ರಸಾದ್, ರಫೀಕ್ ಹಾಗೂ ಎಂ.ಎಂ. ದಾವೂದ್ ಪಾಲ್ಗೊಂಡಿದ್ದರು.

ಮೇ 6ರಿಂದ ಕೊಡವ ಕೌಟುಂಬಿಕ ಕಬ್ಬಡಿ ಪಂದ್ಯಾವಳಿ

ವಿರಾಜಪೇಟೆಯಲ್ಲಿ ಪಂದ್ಯಾವಳಿಯ ಟ್ರೈಸ್ ಬಿಡುಗಡೆ

ವಿರಾಜಪೇಟೆ, 30– ಮೇ 6 ರಿಂದ 9 ರವರೆಗೆ ಕಂಡಂಗಾಲ ಜಿಎಂಪಿ ಶಾಲಾ ಮೈದಾನದಲ್ಲಿ ನಡೆಯಲಿರುವ ಮುಲ್ಲೇಂಗಡ ಕೊಡವ ಕೌಟುಂಬಿಕ ಕಬ್ಬಡಿ ಪಂದ್ಯಾವಳಿಯ ಟ್ರೈಸ್‌ನ್ನು ಕುಟುಂಬದ ಅಧ್ಯಕ್ಷರಾದ ಮುಲ್ಲೇಂಗಡ ಶಂಕರಿ ಪೊನ್ನಪ್ಪ ವಿರಾಜಪೇಟೆ ಪ್ರೆಸ್ ಕ್ಲಬ್‌ನಲ್ಲಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು ಭಾರತದ ಪ್ರಮುಖ ಆಟಗಳಲ್ಲಿ ಖೊ–ಖೋ ಮತ್ತು ಕಬ್ಬಡಿ ಸಹ ಒಂದು. ಆದರೆ ಈ ಆಟಗಳಿಗೆ ನಾವು ಹೆಚ್ಚಿನ ಮಾನ್ಯತೆ ನೀಡುತ್ತಿಲ್ಲ. ಈ ಆಟಗಳು ವಿರಳವಾಗಿವೆ. ಆದ್ದರಿಂದ ಇಂದು ಅಂತರರಾಷ್ಟ್ರೀಯ ಆಟವಾಗಿರುವ ಕಬ್ಬಡಿಯನ್ನು ಪ್ರೋತ್ಸಾಹಿಸಲು ಚಿಂತನೆ ನಡೆಸಿ ಕೊಡವ ಕುಟುಂಬಗಳ ನಡುವಿನ ಹಾಕಿ, ವಿವಿಧ ಕ್ರೀಡಾಕೂಟ ನಡೆಯುತ್ತಿದೆ.

ಅದರಂತೆ ನಮ್ಮ ಕುಟುಂಬ ಈ ಸಾಲಿನಲ್ಲಿ ಪ್ರಥಮವಾಗಿ ಅಂತರಾಷ್ಟ್ರೀಯ ಮಟ್ಟದ ಭಾರತ ಹಿರಿಮೆಯ ಕಬ್ಬಡಿ ಆಟವನ್ನು ಕೊಡವ–ಕೊಡವ ಕುಟುಂಬಗಳ ನಡುವೆ ನಡೆಸಲು ತಿರ್ಮಾನಿಸಿದ್ದು ಪಂದ್ಯಾವಳಿಯ ಮೇ 6 ರಿಂದ 9 ರವರೆಗೆ ನಡೆಯಲಿದೆ. ಇದಕ್ಕಾಗಿ ಈಗಾಗಲೆ 54 ಕೊಡವ ಕುಟುಂಬಗಳು ಹೆಸರನ್ನು ನೊಂದಾಯಿಸಿಕೊಂಡಿವೆ.

ಪಂದ್ಯಾವಳಿಯ ಕೊಡಗು ಕಬ್ಬಡಿ ಅಶೋಷಿಯೇಷನ್ ಆಶ್ರಯದಲ್ಲಿ ನಡೆಯಲಿದೆ. ಈ ಪಂದ್ಯಾವಳಿಯ ನಾಕ್‌ಔಟ್ ಮಾದರಿಯಲ್ಲಿ ನಡೆಯಲಿದ್ದು ಇಲ್ಲಿ ಕರ್ನಾಟಕ ಕಬ್ಬಡಿ ಫೆಡರೇಶನ್ ಪ್ರೊ ಕಬ್ಬಡಿ ನಿಯಮದಂತೆ ಪಂದ್ಯಾಟ ನಡೆಯಲಿದೆ. ಇದರಲ್ಲಿ 7 ಆಟಗಾರರು ಮತ್ತು ಹೆಚ್ಚುವರಿ ಆಟಗಾರರಾಗಿ 3 ಜನರಿಗೆ ಅವಕಾಶ ಇದೆ. ಕುಟುಂಬಗಳು ನಿಯಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಿ ಪಂದ್ಯಾವಳಿಯ ಯಶಸ್ವಿಗೆ ಸಹಕಾರ ನೀಡಬೇಕು ಎಂದು ಕುಟುಂಬದ ಅಧ್ಯಕ್ಷ ಮುಲ್ಲೇಂಗಡ ಶಂಕರಿ ಪೊನ್ನಪ್ಪ ಹೇಳಿದರು.

ಈ ಸಂದರ್ಭ ಕಾರ್ಯದರ್ಶಿ ಮುಲ್ಲೇಂಗಡ ಕುಟ್ಟಪ್ಪ, ಸಂಚಾಲಕ ಮುಲ್ಲೇಂಗಡ ಮಧೋಶ್ ಪೂವಯ್ಯ, ಖಜಾಂಚಿ ಮುಲ್ಲೇಂಗಡ ಸುರೇಶ್ ಭಿಮಯ್ಯ ಉಪಸ್ಥಿತರಿದ್ದರು.



ಮುಲ್ಲೇಂಗಡ ಕೊಡವ ಕೌಟುಂಬಿಕ ಕಬ್ಬಡಿ ಪಂದ್ಯಾಟದ ಟ್ರೈಸ್ ಬಿಡುಗಡೆ

ದಲಿತ ಮುಖ್ಯಮಂತ್ರಿ ಆಗಲೇಬೇಕು

ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್.ಮುನಿಯಪ್ಪ, ಸತೀಶ್ ಜಾರಕಿಹೊಳಿ, ಜಿ.ಪರಮೇಶ್ವರ್, ಹೆಚ್.ಸಿ.ಮಹದೇವಪ್ಪ ಅವರ ಪೈಕಿಯಲ್ಲಿ ಯಾರಾದರು ಮುಖ್ಯಮಂತ್ರಿ ಆಗಲಿ...



ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಮಾತನಾಡಿದರು.

ಚಾಮರಾಜನಗರ: ದಲಿತ ಮುಖ್ಯಮಂತ್ರಿ ಆದಾಗ ಮಾತ್ರ ಅಂಬೇಡ್ಕರ್ ಜಯಂತಿಗೆ ಒಂದು ಅರ್ಥ ಬರುತ್ತದೆ ಎಂದು ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟ ರಮಣಸ್ವಾಮಿ ಪಾಪು ಹೇಳಿದರು.

ತಾಲೂಕಿನ ಸಂತೇಮರಹಳ್ಳಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಮಿತಿಯ ವತಿಯಿಂದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜಯಂತ್ಯೋತ್ಸವ ಸಮಾರಂಭವನ್ನು ಉದ್ಘಾಟಿಸಿ, ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಕಳೆದ 80 ವರ್ಷದಿಂದಲ್ಲೂ ಕಾಂಗ್ರೆಸ್‌ಗೆ ನಮ್ಮ ಸಮುದಾಯ ವೋಟ್ ಹಾಕಿಕೊಂಡು ಬಂದಿದೆ. ಕಾಂಗ್ರೆಸ್ ಒಂದು ಬಾರಿ ದಲಿತ ಮುಖ್ಯಮಂತ್ರಿ ಮಾಡಬೇಕಿತ್ತು. ಕೇವಲ ಸಿದ್ದರಾಮಯ್ಯನವರು ತಮ್ಮ ಸಮುದಾಯ ಮತಗಳಿಂದ ಮುಖ್ಯಮಂತ್ರಿ ಆಗಿಲ್ಲ ದಲಿತರ ವೋಟಿನಿಂದಲ್ಲೇ ಎಲ್ಲರೂ ಮುಖ್ಯಮಂತ್ರಿ ಆಗಿದ್ದಾರೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮಗೆ ದಲಿತರು ಹೆಚ್ಚಿನ ರೀತಿಯಲ್ಲಿ ಬೆಂಬಲ ನೀಡಿದ್ದಾರೆ ಎಂದು 2ನೇ ಬಾರಿ ದಲಿತ ಮುಖ್ಯಮಂತ್ರಿ ಅವಕಾಶ ಮಾಡಿಕೊಡಬೇಕೆಂದು ದೊಡ್ಡ ಮನಸ್ಸು ಮಾಡಬೇಕಿತ್ತು. ಈಗ 8 ವರ್ಷಗಳ ಕಾಲ ಮುಖ್ಯಮಂತ್ರಿ ಆಗಿದ್ದಾರೆ. ಈಗಲೂ ದಲಿತ ಮುಖ್ಯಮಂತ್ರಿ ಬಗ್ಗೆ ಚರ್ಚೆ ಆಗುತ್ತಿಲ್ಲ.ಈಗಲಾದರೂ 2 ವರ್ಷ ದಲಿತ ಮುಖ್ಯಮಂತ್ರಿ ಮಾಡಿ 135ನೇ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಒಂದು ಅರ್ಥ ಬರುತ್ತದೆ ಎಂದರು.

ದಲಿತ ಸಿಎಂ ಆಗಲೇಬೇಕು: ದಲಿತ ಮುಖ್ಯಮಂತ್ರಿ ಆಗಲೇಬೇಕಿದೆ. ಅದಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಹೋರಾಟ ರೂಪಿಸೋಣ. ದಲಿತ ಸಮುದಾಯದಲ್ಲಿ ಯಾರಾದರು ಮುಖ್ಯಮಂತ್ರಿ ಆಗಲಿ. ಮಲ್ಲಿಕಾರ್ಜುನ ಖರ್ಗೆ, ಕೆಎಚ್.ಮುನಿಯಪ್ಪ ಸತೀಶ್ ಜಾರಕಿಹೊಳಿ, ಜಿ.ಪರಮೇಶ್ವರ್, ಹೆಚ್.ಸಿ.ಮಹದೇವಪ್ಪ ಅವರ ಪೈಕಿಯಲ್ಲಿ ಯಾರಾದರು ಮುಖ್ಯಮಂತ್ರಿ ಆಗಲಿ ಎಂದರು.

ಅಂಬೇಡ್ಕರ್ ವಿಚಾರವಾದಿ ಡಾ.ಪಿ.ದೇವರಾಜು ಮಾತನಾಡಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಮಿತಿ ಜಿಲ್ಲಾ ಸಂಚಾಲಕ ಹಿಂಡಯ್ಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಂಘಟನಾ ಸಂಚಾಲಕ ಕೆ.ಸಿದ್ದರಾಜು ದೊಡ್ಡಿಂದುವಾಡಿ ಪ್ರಾಸ್ತಾವಿಕ ಭಾಷಣ ಮಾಡಿದರು.

ರಾಜ್ಯ ಸಂಚಾಲಕಿ ರುದ್ರಮ್ಮ, ಸೇವಾಲಾಲ್ ಸಂಘದ ಶಾಂತರಾಜು, ಪ್ರಥಮ ದರ್ಜೆ ಗುತ್ತಿಗೆದಾರ ಎಂ.ಎಸ್.ಮಾದಯ್ಯ, ಪುಟ್ಟಸ್ವಾಮಿ, ರಾಮಲಿಂಗಂ, ಭಾಗ್ಯಮ್ಮ ಇದ್ದರು.

ಚಾ.ನಗರ ನಗರಸಭೆ ವಿರುದ್ಧ ಪ್ರತಿಭಟನೆ

ನೀರು ಕೊಡುವಲ್ಲಿ ವಿಫಲ, ಸಾಮೂಹಿಕವಾಗಿ ಎಲ್ಲಾ ಅಧಿಕಾರಿಗಳ ವರ್ಗಾವಣೆಗೆ ಆಗ್ರಹ

- ತಿಂಗಳೊಳಗೆ ಕ್ರಮ ಕೈಗೊಳ್ಳದಿದ್ದರೆ ಚಾ.ನಗರ ಬಂದ್
- ಸ್ಥಳಕ್ಕೆ ಭೇಟಿ ನೀಡಿದ ಪೌರಾಯುಕ್ತರನ್ನು ತರಾಟೆಗೆ ತೆಗೆದುಕೊಂಡ ಪ್ರತಿಭಟನಾಕಾರರು

ಚಾಮರಾಜನಗರ: ಇಲ್ಲಿನ ನಗರಸಭೆಯಲ್ಲಿ ಕುಡಿಯುವ ನೀರು, ಸ್ವಚ್ಛತೆ ಹಾಗೂ ನಗರಸಭೆಯ ಕೆಲಸ ಕಾರ್ಯಗಳು ಸಂಪೂರ್ಣ ಹದಗೆಟ್ಟಿದ್ದು, ಇದನ್ನು ಸರಿಪಡಿಸುವಂತೆ ಒತ್ತಾಯಿಸಿ ವಿವಿಧ ಕನ್ನಡ ಪರ ಸಂಘಟನೆಗಳು ನಗರಸಭೆ ಮುಂಭಾಗ ಪ್ರತಿಭಟನೆ ನಡೆಸಿದವು.

ಚಾಮರಾಜನಗರ ನಗರಸಭೆಯಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳು ಬೇಗನೆ ಆಗದೆ, ಸಾರ್ವಜನಿಕರು ತತ್ತರಿಸಿ ಹೋಗಿದ್ದಾರೆ ಮತ್ತು ಪಟ್ಟಣದ 31 ವಾರ್ಡ್‌ಗಳಲ್ಲೂ ಚರಂಡಿಗಳಲ್ಲಿ ಮತ್ತು ರಸ್ತೆಗಳಲ್ಲಿ ಸ್ವಚ್ಛತೆ ಇಲ್ಲದೆ ಚಾಮರಾಜನಗರ ಪಟ್ಟಣ ಸಂಪೂರ್ಣ ಹದಗೆಟ್ಟಿದೆ ಮತ್ತು ಕುಡಿಯುವ ನೀರಿನ ಸಮಸ್ಯೆಯು ಪ್ರತಿಯೊಂದು ವಾರ್ಡ್‌ಗಳಲ್ಲೂ ತೀವ್ರ ಸ್ವರೂಪ ಪಡೆದಿದ್ದು ಜನರು ತೀರಾ ತೊಂದರೆಗೆ ಸಿಲುಕಿದ್ದಾರೆ ಮತ್ತು ನಗರಸಭೆ ಕಛೇರಿಯಲ್ಲಿ ಸಾರ್ವಜನಿಕರ ಕೆಲಸಗಳು ಅರ್ಜಿ ಕೊಟ್ಟು ವರ್ಷಗಳು ಆದರೂ ಸಹ ಕೆಲಸಗಳು ಆಗುತ್ತಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಸಾರ್ವಜನಿಕರಿಗೆ ಅವರ ಆಸ್ತಿಗಳಿಗೆ ಕಂದಾಯ ಪಾವತಿಸಿದರೂ ಸಹ ಅದನ್ನು ಕಛೇರಿಯ ಕಡತದಲ್ಲಿ ದಾಖಲು ಮಾಡಿಕೊಳ್ಳುತ್ತಿಲ್ಲ ಮತ್ತು ತಾಂತ್ರಿಕ ವಿಭಾಗದಲ್ಲೂ ಸಹ ಸಾರ್ವಜನಿಕರು ಎಷ್ಟೇ ದೂರನ್ನು ಕೊಟ್ಟರೂ ಸಹ ಯಾವುದೇ ಕೆಲಸ ಕಾರ್ಯಗಳು ಆಗುತ್ತಿಲ್ಲ ಮತ್ತು ಸಾರ್ವಜನಿಕರು ತಮ್ಮ ಆಸ್ತಿಗಳನ್ನು ಖಾತೆ ಬದಲಾವಣೆ ಮಾಡಿಕೊಂಡು ಇ–ಸ್ವತ್ತು ಪಡೆಯಲು ನಗರಸಭೆಯ ಕಛೇರಿಗೆ ಸುತ್ತಿ ಸುತ್ತಿ ನರಕ ಯಾತನೆಯನ್ನು ಅನುಭವಿಸುತ್ತಿದ್ದಾರೆ ಮತ್ತು ಕಛೇರಿಯಲ್ಲಿನ ಯಾವುದೇ ಅಧಿಕಾರಿಗಳು ಸಾರ್ವಜನಿಕರಿಗೆ ಕನಿಷ್ಠ ಗೌರವವನ್ನು ಕೊಡದೆ ದುರಹಂಕಾರದಿಂದ ವರ್ತಿಸುತ್ತಿದ್ದಾರೆ. ಈ ನಗರಸಭೆಯ ಕಛೇರಿಯಲ್ಲಿಯೇ ಬಹಳಷ್ಟು ವರ್ಷಗಳಿಂದ ಇರುವ ಅಧಿಕಾರಿಗಳು ಮತ್ತು ನೌಕರರನ್ನು ಬೇರೆ ಸ್ಥಳಗಳಿಗೆ ವರ್ಗಾವಣೆ ಮಾಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಸರ್ಕಾರ ಬಡವರಿಗೆ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳಲು ಅನುದಾನವನ್ನು ನೀಡಿದರೂ ಸಹ ಇಲ್ಲಿನ ಅಧಿಕಾರಿಗಳು ಅದನ್ನು ಗಾಳಿಗೆ ತೂರಿ ತಮ್ಮ ಮನ ಬಂದಂತೆ ಕೆಲಸ ಮಾಡುತ್ತಿದ್ದಾರೆ. ನಗರ ಸಭೆಯಲ್ಲಿ ಹೇಳುವವರು ಕೇಳುವವರು ಯಾರು ಇಲ್ಲದಂತಾಗಿದೆ. ಬಹುಶಃ ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿರುವ ನಗರಸಭೆ ಎಂದರೆ ಚಾಮರಾಜನಗರ ನಗರಸಭೆಯು ಆಗಿರುತ್ತದೆ. ಸಾರ್ವಜನಿಕರು ಇಲ್ಲಿ ಕೆಲಸವನ್ನು ಮಾಡಿಸಲಾಗದೆಯೇ ಶಾಪ ಹಾಕುತ್ತಿದ್ದಾರೆ. ಇನ್ನು ಇದರ ಬಗ್ಗೆ ಹೇಳುತ್ತಿದ್ದರೆ ಸಾವಿರಾರು ವಿಷಯಗಳನ್ನು ಹೇಳಬಹುದು. ಈ ಸಮಸ್ಯೆಗಳನ್ನು ಒಂದು ತಿಂಗಳೊಳಗೆ ಪರಿಹರಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಮಟ್ಟದ ಹೋರಾಟವನ್ನು ರೂಪಿಸಬೇಕಾಗ ಬಹುದೆಂದು ಮತ್ತು ಅಂತಿಮವಾಗಿ ಚಾಮರಾಜನಗರದ ಎಲ್ಲಾ ಸಾರ್ವಜನಿಕರ ಹಾಗೂ ಸಂಘ ಸಂಸ್ಥೆಗಳ ಸಹಕಾರವನ್ನು ಪಡೆದು ಚಾಮರಾಜನಗರ ಬಂದ್‌ಗೆ ಕರೆ ಕೊಡಬೇಕಾಗುತ್ತದೆ ಎಂದು ಚಾ.ರಂ. ಶ್ರೀನಿವಾಸಗೌಡ, ಶಾ.ಮುರಳಿ, ಸುರೇಶ್ ವಾಜಪೇಯಿ, ಮಾರ್ಕೆಟ್ ಗಿರೀಶ್ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್ ನಾಯಕ ಸುರೇಶ್ ವಾಜಪೇಯಿ, ನಿಜಧ್ವನಿ ಗೋವಿಂದರಾಜು, ಕಂಡಕ್ಟರ್ ಸೋಮನಾಯಕ, ಮಾರ್ಕೆಟ್ ಗಿರೀಶ್, ರಾಜುನಾಯಕ, ಪಣ್ಯದಹುಂಡಿ ರಾಜು, ಮಹೇಶ್ ಗೌಡ, ಸುರೇಶ್ ಗೌಡ, ಆಟೋ ಲಿಂಗರಾಜು, ಡ್ಯಾನ್ಸ್ ಬಸವರಾಜು, ರಾಚಪ್ಪ, ಅಮಚವಾಡಿ ರಾಜು, ಶಿವಣ್ಣ, ಮುತ್ತಿಗೆ ಗೋವಿಂದರಾಜು, ನಾಗೇಶ್ ಇತರರು ಭಾಗವಹಿಸಿದ್ದರು.



ನಗರ ಸಭೆ ಎದುರು ವಿವಿಧ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕಟ್ಟಡ ಕಾರ್ಮಿಕರ ಮಕ್ಕಳ ವಸತಿಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ

ಚಾಮರಾಜನಗರ, ಏ.30– ಗುರುವಾರ ತಾಲೂಕಿನ ಯಲಕ್ಕೂರು, ಕರಡಿಮೋಳೆ ಗ್ರಾಮಗಳಿಗೆ ಸಂಪರ್ಕಿಸುವ ಮದ್ಯೆ ಕಾರ್ಮಿಕ ಇಲಾಖೆ ಅನುದಾನ 25 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳ ವಸತಿಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಅವರು ಮಾತನಾಡಿ, ರಾಜ್ಯ ಸರ್ಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕಟ್ಟಡ ಕಾರ್ಮಿಕರ ಮಕ್ಕಳಿಗಾಗಿಯೇ ವಸತಿ ಶಾಲಾ ಕಟ್ಟಡ ನಿರ್ಮಾಣ ಮಾಡುತ್ತಿದೆ. ಇದಕ್ಕೆ ಪೂರಕವಾಗಿ ಜಿಲ್ಲೆಯಲ್ಲಿ ಕಟ್ಟಡ ಕಾರ್ಮಿಕರ ಮಕ್ಕಳಿಗೆ ಉಚಿತ ಹಾಗೂ ಗುಣಮಟ್ಟದ ಶಿಕ್ಷಣಕೊಡಿಸಲು ಯಲಕ್ಕೂರು, ಕರಡಿಮೋಳೆ ಮದ್ಯೆ 7 ಎಕರೆ ವಿಸ್ತೀರ್ಣದಲ್ಲಿ 6ರಿಂದ ದ್ವಿತೀಯ ಪಿಯುಸಿವರಗೆ 300 ಮಕ್ಕಳು ಓದುವ ವಸತಿಶಾಲೆ ನಿರ್ಮಿಸಲಾಗುತ್ತಿದೆ. ಈಗಾಗಲೇ ಚಾಮರಾಜನಗರ ಜಿಲ್ಲೆಯಲ್ಲಿ ಈಗಾಗಲೇ ಚಾಮರಾಜನಗರ ವಿವಿನಿಲಯ, ಕಾನೂನು ಕಾಲೇಜು, ಮೆಡಿಕಲ್ ಕಾಲೇಜು, ಕೇಂದ್ರಿಯ ವಿದ್ಯಾಲಯ, ಕೃಷಿ ವಿಜ್ಞಾನಕಾಲೇಜುಗಳಿದ್ದು, ಶಿಕ್ಷಣಕ್ಕೆ ಯಾವುದೇ ಕೊರತೆಯಿಲ್ಲ. ಹಾಗಾಗಿ ಜಿಲ್ಲೆಯ ವಿದ್ಯಾರ್ಥಿಗಳು ಉನ್ನತ ಶಿಕ್ಷಣಪಡೆಯಲು ಮುಂದಾಗಬೇಕು ಎಂದರು.

ಸಂಬಂಧಪಟ್ಟ ಗುತ್ತಿಗೆದಾರರು ಕಾಲಮಿತಿಯೊಳಗೆ ಸುಸಜ್ಜಿತ ಕಟ್ಟಡ ಕಾರ್ಮಿಕರ ಮಕ್ಕಳ ವಸತಿಶಾಲೆ ನಿರ್ಮಿಸಿಕೊಡಬೇಕು ಎಂದು ಸೂಚನೆ ನೀಡಿದರು.

ಗ್ರಾಪಂ ಮಾಜಿ ಅಧ್ಯಕ್ಷ ಶಿವಣ್ಣ, ಎಂ.ನಂಜುಂಡ, ಮರಿಸ್ವಾಮಿ, ಪ್ರಕಾಶ್, ಯಲಕ್ಕೂರುಮಧು, ಕೃಷ್ಣ, ಮಹದೇವಸ್ವಾಮಿ, ನವೀನ ಜಿಲ್ಲಾ ಕಾರ್ಮಿಕಾಧಿಕಾರಿ ರಾಮಚಂದ್ರ, ಗ್ರಾಮದ ಗ್ರಾಮಸ್ಥರು ಹಾಗೂ ಬಾಲಾಜಿ ಕೃಪಾ ಪ್ರಾಜೆಕ್ಟ್ ಕಂಪನಿ ಸಿಬ್ಬಂದಿ ಇದ್ದರು.



ವಸತಿ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಎಂಎಸ್‌ಐಎಲ್ ಅಧ್ಯಕ್ಷ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ಶೇ.97ರಷ್ಟು ಅಂಕ

ಗುಂಡ್ಲುಪೇಟೆ: ಇಲ್ಲಿನ ಜವಾಹರ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯು ಈಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.97 ರಷ್ಟು ಫಲಿತಾಂಶ ಪಡೆದುಕೊಂಡಿದೆ. ಪರೀಕ್ಷೆ ಬರೆದಿದ್ದ 61 ವಿದ್ಯಾರ್ಥಿಗಳಲ್ಲಿ 59 ವಿದ್ಯಾರ್ಥಿಗಳು ಪಾಸಾಗಿದ್ದು, 8 ಮಂದಿ ಅತ್ಯುನ್ನತ, 39 ಮಂದಿ ಪ್ರಥಮ, 8 ಮಂದಿ ದ್ವಿತೀಯ 4 ಮಂದಿ ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಗ್ರಾಮೀಣ ಮಕ್ಕಳ ಸಾಧನೆಗೆ ಪರಿಮಳ ನಾಗಪ್ಪ ಪ್ರಶಂಸೆ

ಕೊಳ್ಳೇಗಾಲ, ಏ.30–ಗ್ರಾಮೀಣ ಭಾಗದ ಮಕ್ಕಳು ಹೆಚ್ಚಿನ ಅಂಕ ಗಳಿಸಿ ಸಾಧನೆ ಮಾಡಿರುವುದು ಕಾಮಗೆರೆ ಶಾಲೆಗೆ ಮಾತ್ರವಲ್ಲ ಇಡೀ ಜಿಲ್ಲೆಗೆ ಹೆಗ್ಗಳಿಕೆಯ ವಿಚಾರ ಎಂದು ಮಾಜಿ ಶಾಸಕಿ ಪರಿಮಳ ನಾಗಪ್ಪ ಬಣ್ಣಿಸಿದರು

ತಾಲೂಕಿನ ಕಾಮಗೆರೆ ಜೆಎಸ್‌ಎಸ್ ಶಾಲೆಯಲ್ಲಿ 10ನೇ ತರಗತಿಯಲ್ಲಿ ಹೆಚ್ಚು ಅಂಕಗಳಿಸಿದ ಸಾಧಕ ಮಕ್ಕಳನ್ನು ಅಭಿನಂದಿಸಿ ಮಾತನಾಡಿ ಜೆಎಸ್‌ಎಸ್ ಶಾಲೆ 10ನೇ ತರಗತಿ ಪರೀಕ್ಷೆಯಲ್ಲಿ ನೂರರಷ್ಟು ಸಾಧನೆ ಮಾಡಿರುವುದು ನನಗೆ ವೈಯಕ್ತಿಕವಾಗಿ ಸಂತೋಷ ತಂದಿದೆ. ಪರೀಕ್ಷೆಯಲ್ಲಿ ಹೆಚ್ಚು ಸಾಧನೆ ಮಾಡಲು ಶಿಕ್ಷಕರ ಸಹಕಾರ ಪ್ರಮುಖವಾದದು. ಶಿಕ್ಷಕರು ಹೆಚ್ಚಿನ ಫಲಿತಾಂಶಕ್ಕಾಗಿ ಶ್ರಮಿಸಿದ್ದಾರೆ ಅವರು ವಿಶೇಷ ತರಗತಿ ಸೇರಿದಂತೆ ವಿಷಯವಾರು ನುರಿತ ಶಿಕ್ಷಕರಿಂದ ಪಾಠ ಪ್ರವಚನದಿಂದಾಗಿ ಹೆಚ್ಚು ಸಾಧನೆ ಮಾಡುವಂತಾಗಿದೆ. ಶಿಕ್ಷಕರು ವಿಶೇಷ ತರಗತಿ ತೆಗೆದುಕೊಂಡು ಮಕ್ಕಳ ಬೆಳವಣಿಗೆಗೆ ಸ್ಪಂದಿಸುತ್ತಿದ್ದ ರೀತಿ ನಾನು ಗಮನಿಸಿದ್ದೇನೆ ಮುಂದೆಯೂ ಶಿಕ್ಷಕರ ಈ ಪರಿಶ್ರಮ ನಿರಂತರವಾಗಿ ಸಾಗಲಿ ಎಂದರು

ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಸಂಯೋಜಕ ಡಾ. ಉಮಾಶಂಕರ್ ಮಾತನಾಡಿ ಗ್ರಾಮಾಂತರ ಭಾಗದ ವಿದ್ಯಾರ್ಥಿಗಳ ಸಾಧನೆ ಹೆಮ್ಮೆಯ ವಿಷಯ ಮುಂದೆ ಕಠಿಣ ಪರಿಶ್ರಮದ ಮೂಲಕ ಪೈಪೋಟಿ ಯುಗದಲ್ಲಿ ಹೆಚ್ಚು ಸಾಧನೆಗೆ ಸನ್ನದ್ದರಾಗಿ ಎಂದರು.

ಈ ಸಂದರ್ಭದಲ್ಲಿ ಗ್ರಾಪಂನ ಸದಸ್ಯ ಕುಮಾರ್ ಯುವ ಮುಖಂಡ ಆನಂದ್, ಉಮೇಶ್, ಮಮತಾ ರಾಜಶೇಖರ್ ಇನ್ನಿತರರಿದ್ದರು.



ಕಾಮಗೆರೆ ಜೆಎಸ್ ಎಸ್ ಶಾಲೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕ ಮಕ್ಕಳನ್ನು ಅಭಿನಂದಿಸಲಾಯಿತು. ಈ ವೇಳೆ ಮಾಜಿ ಶಾಸಕಿ ಪರಿಮಳಾ ನಾಗಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

'ರುಕ್ಮಿಣಿ ವಸಂತ್'ಗೆ ಒಲಿದ ಮಹಾನ್ ಗಾಯಕಿ ಎಂ.ಎಸ್.ಸುಬ್ಬಲಕ್ಷ್ಮಿ ಪಾತ್ರ



ಸಪ್ತ ಸಾಗರದಾಚೆ ಎಲ್ಲೋ', 'ಕಾಂತಾರ' ಖ್ಯಾತಿಯ ರುಕ್ಮಿಣಿ ವಸಂತ್ ಸದ್ಯ ಕನ್ನಡದ ಬಹುಬೇಡಿಕೆಯ ನಟಿ. ಈಗವರಿಗೆ ಕನ್ನಡ ಮಾತ್ರವಲ್ಲದೆ ಹಿಂದಿ, ತಮಿಳು, ತೆಲುಗಿನಿಂದಲೂ ಬೇಡಿಕೆ ಬರುತ್ತಿದೆ. 'ಬೀರಬಲ್' ಚಿತ್ರದ ಮೂಲಕ ಎಂಟ್ರಿಕೊಟ್ಟ ರುಕ್ಮಿಣಿ ವಸಂತ್‌ಗೆ ಒಂದರ ಮೇಲೊಂದರಂತೆ ಸಿನಿಮಾ ಆಫರ್ ಬರತೊಡಗಿದವು, ಅವರ ಸಿನಿಮಾಗಳೆಲ್ಲ ಸಕ್ಸಸ್ ಕಾಣುತ್ತಾ ಹೋದವು. ಹಾಗೇ ಅವರ ಬೇಡಿಕೆಯೂ ಹೆಚ್ಚುತ್ತಾ ಹೋಯಿತು. ಈ ನಡುವೆ ಇದೀಗ ರುಕ್ಮಿಣಿ ವಸಂತ್ ಪಾಲಿಗೆ ಮತ್ತೊಂದು ಬಿಗ್ ಸಿನಿಮಾ ಆಫರ್ ಬಂದಿದೆ. ಅದೂ ಕೂಡಾ ನಟಿ ಸಾಯಿ ಪಲ್ಲವಿ ಅವರು ಮಾಡಬೇಕಿದ್ದ ಪಾತ್ರ, ಅದೀಗ ನಟಿ ರುಕ್ಮಿಣಿ ವಸಂತ್ ಪಾಲಾಗಿದೆ.

ಭಾರತ ಕಂಡ ಮಹಾನ್ ಗಾಯಕಿ, ಭಾರತರತ್ನ ಎಂ.ಎಸ್. ಸುಬ್ಬಲಕ್ಷ್ಮಿ ಅವರ ಪಾತ್ರ ಇಂಥ ಪಾತ್ರ ಮಾಡುವುದೆಂದರೆ ಅದು ಸಾಮಾನ್ಯವೇನಲ್ಲ. ಅವರ ಧ್ವನಿಯಲ್ಲಿರುವ ದೈವತ್ವ ಮತ್ತು ಸಂಗೀತ ಲೋಕಕ್ಕೆ ಅವರು ನೀಡಿದ ಕೊಡುಗೆಗಳನ್ನು ಬೆಳ್ಳಿಪರದೆಯ ಮೇಲೆ ತೋರಿಸುವುದು ನಿಜಕ್ಕೂ ದೊಡ್ಡ ಸವಾಲೇ. ಈ ಮೊದಲು ನಟಿ ಸಾಯಿಪಲ್ಲವಿ ಅವರು ಈ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ ಎಂದು ಸುದ್ದಿ ಯಾಗಿತ್ತು. ಆದರೆ ಇದೀಗ ಕೇಳಿಬರುತ್ತಿರುವ ಮಾಹಿತಿಯ ಪ್ರಕಾರ ಸಾಯಿಪಲ್ಲವಿ ಅವರು ಈ ಪ್ರಾಜೆಕ್ಟ್‌ನಿಂದ ಹೊರನಡೆದಿದ್ದು, ಅವರ ಜಾಗಕ್ಕೆ ನಮ್ಮ ಕನ್ನಡತಿ ರುಕ್ಮಿಣಿ ವಸಂತ್ ಅವರು ಬಂದಿದ್ದಾರೆ ಎಂದು ವರದಿ ಯಾಗಿದೆ. ಎಂ.ಎಸ್.ಸುಬ್ಬಲಕ್ಷ್ಮಿ ಅಂತಹ ಸಾಧಕಿಯ ಪಾತ್ರಕ್ಕೆ ರುಕ್ಮಿಣಿ ವಸಂತ್ ಅವರೇ ಸೂಕ್ತ ಎಂದು ನಿರ್ದೇಶಕರು ಆಯ್ಕೆ ಮಾಡಿರುವರೆಂದು ಹೇಳಲಾಗುತ್ತಿದೆ. ಸಾಯಿಪಲ್ಲವಿ ಅವರಂತಹ ಸ್ಟಾರ್ ನಾಯಕಿಯನ್ನು ಬದಲಾಯಿಸುವುದು ಸಾಮಾನ್ಯ ವಿಷಯವಲ್ಲ.

ರುಕ್ಮಿಣಿ ವಸಂತ್ ಇದೀಗ ಬಹುಬೇಡಿಕೆಯ ನಟಿ. ಒಂದೆಡೆ ರಾಕಿಂಗ್‌ಸ್ಟಾರ್ ಯಶ್ ಅಭಿನಯದ 'ಟಾಕ್ಸಿಕ್' ಚಿತ್ರದಲ್ಲಿ ನಟಿಸುತ್ತಿದ್ದರೆ. ಮತ್ತೊಂದೆಡೆ ಯಂಗ್ ಟೈಗರ್ ಎನ್‌ಟಿಆರ್ ಮತ್ತು ಪ್ರಶಾಂತ್ ನೀಲ್ ಕಾಂಬಿನೇಷನ್‌ನ 'ಡ್ರ್ಯಾಗನ್' ಚಿತ್ರದಲ್ಲಿ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಇಷ್ಟು ದೊಡ್ಡ ಕಮರ್ಷಿಯಲ್ ಸಿನಿಮಾಗಳನ್ನು ಮಾಡುತ್ತಲೇ, ಮತ್ತೊಂದೆಡೆ, ಎಂ.ಎಸ್.ಸುಬ್ಬಲಕ್ಷ್ಮಿಯಂತಹ ಕ್ಲಾಸಿಕ್ ಬಯೋಪಿಕ್‌ನಲ್ಲಿ ನಟಿಸುವ ಅವಕಾಶ ಸಿಕ್ಕಿರುವುದು ತುಂಬಾ ವಿಶೇಷ. ಇದು ರುಕ್ಮಿಣಿ ವಸಂತ್ ಅವರ ವೃತ್ತಿಜೀವನದಲ್ಲಿ ಒಂದು ಮೈಲಿಗಲ್ಲಾಗಿ ಉಳಿಯಲಿದೆ.

ಯುವಜನರ ಕನಸಿನ ಸುತ್ತ ಎಜುಕೇಟೆಡ್ ಬುಲ್ಸ್



'ಎಜುಕೇಟೆಡ್ ಬುಲ್ಸ್' ಚಿತ್ರದ ನಾಯಕಿ ಪೂರ್ವಿಕಾ



ಕಳೆದ 4 ದಶಕಗಳಿಂದ ಹಲವಾರು ಸ್ಟಾರ್ ನಟರ ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿರುವ ಜಿ.ಕೆ.ಮುದ್ದುರಾಜ್ ಹತ್ತು ವರ್ಷಗಳ ನಂತರ ನಿರ್ದೇಶಿಸಿರುವ ಚಿತ್ರ 'ಎಜುಕೇಟೆಡ್ ಬುಲ್ಸ್'. ಇದರ ಟ್ರೈಲರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಕನಸು ಕಟ್ಟಿಕೊಂಡು ನಗರಕ್ಕೆ ಬರುವ ವಿದ್ಯಾವಂತ ಯುವಕರು ಹೇಗೆ ಯಾಮಾರುತ್ತಾರೆ ಎಂದು 'ಎಜುಕೇಟೆಡ್ ಬುಲ್ಸ್' ಚಿತ್ರದಲ್ಲಿ ಹೇಳಲಾಗಿದೆ. ನೀರಜ್, ಪೂರ್ವಿಕಾ(ಸ್ವಪ್ನ) ಚಿತ್ರದ ನಾಯಕ, ನಾಯಕಿಯಾಗಿದ್ದಾರೆ. ಉಳಿದಂತೆ ಅಜಯ್, ತೇಜಸ್, ರಾಕೇಶ್ ಅಲ್ಲದೆ ಪಾಪ ಪಾಂಡು ಚಿದಾನಂದ್, ಹಿರಿಯ ನಟಿ ಭವ್ಯ ಉಳಿದ ಪಾತ್ರಗಳಲ್ಲಿದ್ದಾರೆ.

ಚಿತ್ರದ ನಿರ್ಮಾಪಕರೂ ಆದ ಮುದ್ದುರಾಜ್ ಮಾತನಾಡಿ 4 ವರ್ಷಗಳ ಹಿಂದೆ ಇದೇ ಹೆಸರಿನಲ್ಲಿ ಸಿನಿಮಾ ಆರಂಭಿಸಿದ್ದೆ. ಆ ನಿರ್ಮಾಪಕರು ಹಿಂದೆ ಸರಿದು ಚಿತ್ರ ನಿಂತು ಹೋಯಿತು. ಆಮೇಲೆ ಬೇರೊಂದು ಕಥೆ ತೆಗೆದುಕೊಂಡು ನಿರ್ದೇಶಿಸಿ, ನಾನೇ ನಿರ್ಮಾಣ ಸಹ ಮಾಡಿದ್ದೇನೆ. 4 ಜನ ವೆಲ್ ಎಜುಕೇಟೆಡ್ ಯುವಕರು, ಅವರಿಗೆ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕು, ಹೀಗೇ ಇರಬೇಕು ಎಂಬ ಕನಸಿರುತ್ತದೆ. ಇವರ ಆಸೆಯನ್ನು ಕೆಲವರು ದುರುಪಯೋಗಪಡಿಸಿಕೊಳ್ಳುತ್ತಾರೆ. ಅವರು ಸಂಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ತಾನೇ ಹೋಗ್ತಾರೆ. ವಿದ್ಯೆಯ ಜತೆ ಬುದ್ಧಿಯೂ ಇರಬೇಕು ಎನ್ನುವುದು ಈ ಚಿತ್ರದ ಕಾನ್ಸೆಪ್ಟ್, ನಿರ್ಮಾಪಕನಿಗೆ 50% ಆದರೂ ರಿಟರ್ನ್ ಆಗಬೇಕು. ಜನ ಕೊಡೋ 100 ರೂಪಾಯಿಗೆ ನ್ಯಾಯ ಒದಗಿಸಬೇಕು ಎನ್ನುವುದು ನನ್ನ ಪಾಲಿಸಿ ಎಂದು ಹೇಳಿದರು.

ನಟ ಚಿದಾನಂದ್ ಮಾತನಾಡಿ ಭಾಗ್ಯಲಕ್ಷ್ಮಿಗಾಗಿ ನಾವೆಲ್ಲ ಆಗ ಬರುತ್ತೆ, ಈಗ ಬರುತ್ತೆ ಅಂತ ಕಾಯ್ತಾ ಇರ್ತೇವೆ. ಈ ಚಿತ್ರ 25 ಕೋಟಿಯ ಆಸೆಯನ್ನು ಉಳಿಸುತ್ತೆ ಎಂದರು. ನಾಯಕಿ ಪೂರ್ವಿಕಾ ಮಾತನಾಡಿ ಹಳ್ಳಿಯ ಸಾಮಾನ್ಯ ಹುಡುಗಿಯಾಗಿ ನಟಿಸಿದ್ದೇನೆ ಎಂದರು. ರತಿಂದ್‌ಗೌಡ ಅವರ ಛಾಯಾಗ್ರಹಣ, ಎಂ.ಪಿ.ಅರುಣಕುಮಾರ್ ಅವರ ಕಥೆ, ಹರೀಶ್ ಅವರ ಸಂಭಾಷಣೆ, ರಾಮ್ ನಾರಾಯಣ್ ಅವರ ಸಾಹಿತ್ಯ, ಥ್ರಿಲ್ಲರ್ ಮಂಜು ಅವರ ಸಾಹಸ ಈ ಚಿತ್ರಕ್ಕಿದೆ.

ಸಮಾಜದ ವಿರುದ್ಧ ಸಿಡಿದೆದ್ದ ಮಹಿಳೆಯ ಕಥೆ 'ಧ್ರುತಿ'




ಮಹಿಳೆಯರ ಮೇಲೆ ಪ್ರತಿನಿತ್ಯ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರಗಳನ್ನ ಹೇಗೆಲ್ಲ ತಡೆಯಬಹುದು, ಇದರಲ್ಲಿ ಮಹಿಳೆಯರ ಪಾತ್ರವೇನು ಎಂಬ ವಿಷಯ ಮುಂದಿಟ್ಟುಕೊಂಡು ಟೆಕ್ಕಿ ಎಂ.ಜಗದೀಶ್ ಅವರು 'ಧ್ರುತಿ' ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ, ಜಗದೀಶ್ ಅವರ ನಿರ್ಮಾಣ ಹಾಗೂ ನಿರ್ದೇಶನದ 'ಧ್ರುತಿ' ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಪ್ರಶಾಂತ್, ಆಂಚಲ್ ಚಿತ್ರದ ನಾಯಕ, ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಅನ್ಯಾಯ ನಡೆದಾಗ ಅದಕ್ಕೆ ನಾವು ಹೇಗೆ ಸ್ಪಂದಿಸಬೇಕು ಎಂದು ಕೆಲ ನೈಜಘಟನೆಗಳನ್ನು ಆಧಾರವಾಗಿಟ್ಟುಕೊಂಡು ಈ ಸಿನಿಮಾ ಮಾಡಿದ್ದೇನೆ. ಟ್ರೈಲರ್, ಸಾಂಗ್ ನೋಡಿದಾಗ ಒಂದಷ್ಟು ಕಥೆ ನಿಮಗೆ ಅರ್ಥವಾಗುತ್ತದೆ. ನಾನೊಂದು ಚಿಕ್ಕ ಕಂಪನಿ ಮಾಡಿದ್ದೇನೆ. ಹೆಚ್ಚು ಬಂಡವಾಳ ಇರದ ಕಾರಣ ಮೊಬೈಲ್‌ನಲ್ಲೇ ಚಿತ್ರೀಕರಿಸುವ ಯೋಜನೆ ಇತ್ತು. ಆನಂತರ ಸ್ನೇಹಿತರು ಸಹಕಾರ ನೀಡಿದರು. ಶೂಟಿಂಗ್ ಆರಂಭಿಸಿದ ಮೇಲೆ ಕ್ಯಾಮೆರಾಮ್ಯಾನ್ ಮೃತಪಟ್ಟರು. ಆ ಕೆಲಸವೂ ನನ್ನ ಹೆಗಲಿಗೆ ಬಿತ್ತು. ಚಿತ್ರದ 80% ಶೂಟಿಂಗ್ ನಾನೇ ಮಾಡಿದ್ದೇನೆ, ನನ್ನ ಕಥೆ ಜನರಿಗೆ ಇಷ್ಟವಾಗಬೇಕು ಎಂದು ಟ್ರೈಲರ್‌ನಲ್ಲೇ ಎಲ್ಲವನ್ನೂ ಹೇಳಿದ್ದೇನೆ, ಕೆಲಸಕ್ಕೆ ಹೋದ ಮಗಳು ಸಂಜೆ 7ಕ್ಕೆ ಬರಬೇಕಿದ್ದವಳು, 8-9 ಆದರೂ ಬಾರದಿದ್ದಾಗ ಮನೆಯವರಿಗೆಲ್ಲ ಹೇಗೆ ಆತಂಕ ಹೆಚ್ಚುತ್ತಾ ಹೋಗುತ್ತದೆ ಎಂಬುದನ್ನು ತೋರಿಸಿದ್ದೇನೆ. ನಮ್ಮ ಸುತ್ತಮುತ್ತ ಹೆಣ್ಣಿನ ಮೇಲಿನ ನಡೆಯುತ್ತಿರುವ ಶೋಷಣೆಯೇ ಈ ಚಿತ್ರದಲ್ಲಿದೆ. ಹಾಗಂತ ಬರೀ ಶೋಷಣೆಯನ್ನೇ ತೋರಿಸಿಲ್ಲ. ಅದಕ್ಕೆ ಪರಿಹಾರವನ್ನೂ ಹೇಳಿದ್ದೇವೆ. ಪ್ರಸನ್ನಕುಮಾರ್ ಅವರ ಸಂಗೀತ ಚಿತ್ರದ ಹೈಲೈಟ್. ವಿಜಯ್ ಸಿನಿಮಾಸ್ ಮೂಲಕ ಮೇ.8ರಂದು ನಮ್ಮ ಚಿತ್ರ ರಿಲೀಸಾಗುತ್ತಿದೆ ಎಂದರು.

ನಾಯಕಿ ಆಂಚಲ್ ಮಾತನಾಡುತ್ತ 'ಧ್ರುತಿ' ಬರೀ ಸಿನಿಮಾ ಮಾತ್ರವಲ್ಲ, ವುಮನ್ ಎಂಪವರ್‌ಮೆಂಟ್. ನನ್ನ ಪಾತ್ರದ ಹೆಸರು ಧ್ರುತಿ. ಆಕೆ ಟೆನ್ನಿಸ್ ಪ್ಲೇಯರ್, ಒಂದು ರಾತ್ರಿ ಮನೆಗೆ ಹೋಗುವಾಗ ನಡೆದ ಘಟನೆ ಆಕೆಯನ್ನು ಕುಗ್ಗಿಸಿಬಿಡುತ್ತದೆ. ಸಾಕಷ್ಟು ಸಮಸ್ಯೆ ಎದುರಾದರೂ ಧ್ರುತಿಗೆಡದೆ ಹೇಗೆ ಎಲ್ಲವನ್ನೂ ಎದುರಿಸುತ್ತಾಳೆ, ಆಕೆ ಹೇಗೆ ಮತ್ತೆ ಎದ್ದುನಿಲ್ಲುತ್ತಾಳೆ ಎನ್ನುವುದೇ ಈ ಚಿತ್ರ. ಟ್ರೈಲರ್‌ನಲ್ಲಿ ನೋಡಿರುವುದಷ್ಟೇ ಅಲ್ಲ. ಸಿನಿಮಾದಲ್ಲಿ ತುಂಬಾ ವಿಷಯಗಳಿವೆ ಎಂದರು.



ಸಿನಿಪದಬಂಧ-624



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1. ಅನಂತ್ ನಾಗ್ ಅಭಿನಯದ ಮುಂಜಾನೆಯ ಹಾಡು 5
6. ಕೈಯಲ್ಲಿ ಬಿಲ್ಲನ್ನು ಹಿಡಿದಿರುವ ರವಿಚಂದ್ರನ್ 5
7. ಶಿವ ಮತ್ತು ವಿಷ್ಣು ಒಳಗೊಂಡಿರುವ ಗಾಯಕ 5
9. ಕಿಚ್ಚ ಸುದೀಪ್ ಅಭಿನಯದ ವೆಂಕಟೇಶ್ವರನ ಸನ್ನಿಧಿ 4
10. ಮನಿಯೊಂದಿಗೆ ಆಂಗ್ಲದ ಜೇನು ಮತ್ತು ಗ್ರಹವಿದೆ 4
14. ಬಾಲಾಜಿ ಅಭಿನಯದಲ್ಲಿ ಬಂದ ಅರಸ 5
15. ಸುನಾದ್ ರಾಜ್ - ಸುಚಿತ್ರ ಅಭಿನಯದ ಸಿಹಿ - ಸ್ನೇಹ 5
16. ಹುಟ್ಟಿನ ಗೌಪ್ಯತೆಗೆ ರಾಜ್ ಕುಮಾರ್ ಅಭಿನಯವಿದೆ 5

ಮೇಲಿನಿಂದ ಕೆಳಕ್ಕೆ

1. ಕಲ್ಯಾಣ್ ಕುಮಾರ್ ಅಭಿನಯದಲ್ಲಿ ಶಾಶ್ವತವಾಗಿ ನೆಲೆಸಿದ ನಮ್ಮದೇಶದ ಹೆಣ್ಣು 6
2. ಅಂಬರೀಷ್ ವಿಷ್ಣುವಿನ ವಾಹನದಿ ಹಾರಿಸಿದ ಪತಾಕೆ 5
3. ಅಜಯ್ ರಾವ್ - ಪೂಜಾಗಾಂಧಿ ಅಭಿನಯಕ್ಕೆ ಆರ್. ಚಂದ್ರು ನಿರ್ದೇಶಕ 5
4. ಆಂಗ್ಲದ 'ಮಧುಚಂದ್ರ' 4
5. 'ಬೆಳದಿಂಗಳು ನಗುತಿದೆ ನಿನ್ನ ಕಂಗಳು ಕರೆದಿದೆ _ _ _ _ _ _ ಸೆಳೆದಿದೆ.....', 6
8. ಸಾಹಸ ಸಿಂಹ ವಿಷ್ಣುವರ್ಧನ್ ಅವರ ಮೂಲ ನಾಮ 6
11. ಶಂಕರ್ ನಾಗ್ ನಟನೆಯ ಚಿತ್ರ ತುಂಬಾ ಸಸ್ಪೆನ್ಸ್ ಆಗಿದೆ 6
12. ಬೆಟ್ಟದಲ್ಲಿ ಅರಳಿದ ಪುಷ್ಪ 5
13. ಶಶಿಕುಮಾರ್ - ರಂಜಿತಾ ಅಭಿನಯದ ಚಿತ್ರವಿದು 5
14. ಮರ್ಯಾದೆ ಮಹಲ್ ಚಿತ್ರದ ನಾಯಕ 4

ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಸಿನಿ ಪದಬಂಧ 623ರ ಉತ್ತರ

ಮು	ತ್ತಿ	ನ	ಹಾ	ರ		ವಿ				ಪ್ರೇ
ಗಿ				ತಿ		ಜ		ಇಂ		ಮ
ಲ		ವಿ	ಷ್ಣು	ವಿ	ಜ	ಯ		ದು		ಲೋ
ಮ				ಜ್ಞಾ		ಖ	ಳ	ನಾ	ಯ	ಕ
ಲ್ಲಿ		ಅ		ನ		ಡ್ಗ		ಗ		
ಗೆ	ಜ್ಜೆ	ನಾ	ದ				ಕಿ	ರಾ	ತ	ಕ
		ಥ		ರೂ		ಚಿ		ಚ್		ಪೂ
ಸಾ	ಗ	ರ	ದೀ	ಪ		ನ್ನ				ರ
ಹು		ಕ್ಷ		ಗಂ	ಧ	ದ	ಗು	ಡಿ		ದ
ಕಾ		ಕ		ಗೂ		ಗೊಂ				ಗೊಂ
ರ				ಲಿ		ಬೆ	ದ	ರು	ಗೊಂ	ಬೆ

ವಿಜೇತರು: ಅಹನಾ ಶೆಣೈ, ನಂ.206, ಮಿಸ್ಟಿ ವುಡ್ಸ್, ಕೆ.ಸಿ.ನಗರ, ಮೈಸೂರು-570011

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಶ್ರೀಮತಿ ಸಿಂಧೂರ' ಟೀಸರ್ ಬಿಡುಗಡೆ



ಡಿ.ಎನ್.ನಾಗಿರೆಡ್ಡಿ ಕಥೆ ಬರೆದು ನಿರ್ಮಿಸಿರುವ 'ಶ್ರೀಮತಿ ಸಿಂಧೂರ' ಚಿತ್ರದ ಆಡಿಯೋ ಬಿಡುಗಡೆ ಸಮಾ ರಂಭ ಧೋ ಎಂದು ಸುರಿಯುತ್ತಿರುವ ಜೋರುಮಳೆಯ ನಡುವೆ ನೆರವೇರಿತು. ಆರ್.ಅನಂತರಾಜು ಅವರ ನಿರ್ದೇಶನವಿರುವ ಈ ಚಿತ್ರದಲ್ಲಿ ವಿಜಯ ರಾಘವೇಂದ್ರ, ಪ್ರಿಯಾ ಹೆಗಡೆ, ರೇಷ್ಮಾ.ವಿ. ಗೌಡ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.


ವೇದಿಕೆಯಲ್ಲಿ ಮಾತನಾಡಿದ ನಿರ್ದೇಶಕರು ಹೊಡಿ-ಬಡಿ ರಕ್ತಪಾತದ ಮಧ್ಯೆ ಒಂದೊಳ್ಳೆ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರವಾಗಿ 'ಶ್ರೀಮತಿ ಸಿಂಧೂರ' ಬರುತ್ತಿದೆ. ಆಂಜನೇಯನ ಮಹಿಮೆಯೂ ಚಿತ್ರದಲ್ಲಿದೆ. ವಿಜಯ ರಾಘವೇಂದ್ರ ಅದ್ಭುತವಾಗಿ ಅಭಿನಯಿಸಿದ್ದಾರೆ. ರಾಜೇಶ್ ರಾಮ್‌ನಾಥ್ ಉತ್ತಮ ಸಂಗೀತ ನೀಡಿದ್ದಾರೆ. ಆಂಜನೇಯ ಪಾತ್ರವನ್ನು ಹೊಸಪೇಟೆಯ ಬಾಡಿ ಬಿಲ್ಡರ್ ನಿರ್ವಹಿಸಿದ್ದಾರೆ. ಅವರಾಗಲೇ ಹಿಂದಿಯಲ್ಲಿ ಆಂಜನೇಯನ ಪಾತ್ರ ಮಾಡಿದ್ದು, ಅವರನ್ನು ನೋಡಿದರೆ ಸಾಕ್ಷಾತ್ ಆಂಜನೇಯನನ್ನೇ ನೋಡಿದ ಹಾಗೆ ಅನ್ನಿಸುತ್ತೆ ಎಂದು ಹೇಳಿದರು.

ನಿರ್ಮಾಪಕ ಡಿ.ಎನ್.ನಾಗಿರೆಡ್ಡಿ ಮಾತನಾಡುತ್ತ ನಾನು 20 ವರ್ಷಗಳ ಹಿಂದೆ ಒಂದು ಚಿತ್ರ ಮಾಡಿದ್ದೆ. ಉತ್ತಮ ನಾಯಕ, ನಾಯಕಿ ಒಳ್ಳೆಯ ತಂಡ ಸಿಕ್ಕಿದ್ದರಿಂದ ಈ ಚಿತ್ರ ನಿರ್ಮಿಸಲು ಸಾಧ್ಯವಾಯಿತು. ಮುಖ್ಯವಾಗಿ ಕಾರ್ಮಿಕರಿಗೆ ಕೆಲಸ ಕೊಡುವ ಉದ್ದೇಶವಿತ್ತು, ತೊಂದರೆಗೊಳಗಾದ ಭಕ್ತರನ್ನು ಕಾಪಾಡಲು ಬರುವ ಆಂಜನೇಯ ಕಥೆಯನ್ನಿಟ್ಟುಕೊಂಡು ಮಾಡಿದ ಚಿತ್ರವಿದು. ಹನುಮಾನ್ ಚಾಲಿಸಾವನ್ನ ಕೈಲಾಶ್ ಖೇರ್ ಅವರಿಂದ ಹಾಡಿಸಬೇಕೆಂದಾಗ ಅವರು ಪ್ರೀತಿಯಿಂದ ಒಪ್ಪಿ ಹಾಡಿದ್ದಾರೆ. ಈ ಚಿತ್ರದಿಂದ ಬರುವ ಲಾಭವನ್ನು ಸಿನಿಮಾ ಕಾರ್ಮಿಕರಿಗೆ ನೀಡುವುದಾಗಿ ತಿಳಿಸಿದರು.

ನಾಯಕ ವಿಜಯ ರಾಘವೇಂದ್ರ ಮಾತನಾಡಿ, ಈ ಚಿತ್ರದಲ್ಲಿ ಒಂದು ಮನೆಯ ಜವಾಬ್ದಾರಿ ವ್ಯಕ್ತಿಯ ಪಾತ್ರ ಮಾಡಿದ್ದೇನೆ, ಮನೆಯ ಒಳಗೆ ಮತ್ತು ಹೊರಗೆ ಸಮಸ್ಯೆ ಉಂಟಾದಾಗ ಅದನ್ನು ಬಗೆಹರಿಸುವ ಜವಾಬ್ದಾರಿ ನನ್ನ ಪಾತ್ರದ ಮೇಲಿರುತ್ತದೆ ಎಂದರು.

ನಾಯಕಿ ಪ್ರಿಯಾ ಹೆಗಡೆ ಮಾತನಾಡಿ ತೆರೆಮೇಲೆ ರಕ್ಷಿತಾ, ರಮ್ಯಾ ಅವರ ಪಾತ್ರಗಳನ್ನು ನೋಡಿ ಬೆಳೆದವಳು ನಾನು. ಗೃಹಿಣಿಯಾಗಿ ಹೇಗೆ ಕಾಣಬಹುದೆಂಬ ನಿರೀಕ್ಷೆ ಇತ್ತು, ಪಾತ್ರ ತುಂಬಾ ಚೆನ್ನಾಗಿ ಮೂಡಿಬಂದಿದೆ. 'ಶ್ರೀಮತಿ ಸಿಂಧೂರ' ಚಿತ್ರಕ್ಕೆ ಎಲ್ಲರೂ ಸಪೋರ್ಟ್ ಮಾಡಬೇಕೆಂದು ಹೇಳಿದರು.

ಪಿ.ಕೆ.ಹೆಚ್.ದಾಸ್ ಅವರ ಕ್ಯಾಮೆರಾ ವರ್ಕ್, ಸಂಜೀವ್ ರೆಡ್ಡಿ ಅವರ ಸಂಕಲನ, ರಾಜೇಶ್ ರಾಮನಾಥ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ, ರೇಷ್ಮಾ.ವಿ. ಗೌಡ, ಪ್ರಸನ್ನ ಬಾಗೀನ, ಗಣೇಶ್ ರಾವ್, ಮಾನಸಿ ಸುಧೀರ್, ರಿತೀಶ್, ಸ್ನೇಹ ಜಾದವ್ ಚಿತ್ರದ ಉಳಿದ ಪಾತ್ರಗಳಲ್ಲಿದ್ದಾರೆ. ಈ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ಆರ್.ಗಂಗಾಧರ್ ಕೈಜೋಡಿಸಿದ್ದಾರೆ.



ಕುರುಬೂರು ಗ್ರಾಮದಲ್ಲಿ ಶ್ರೀಸದಾಶಿವ ಸ್ವಾಮೀಜಿಗಳ ಸಂಸ್ಮರಣೋತ್ಸವ

ಪ್ರತಿಯೊಬ್ಬರಿಗೂ ದೇವರಲ್ಲಿ ನಂಬಿಕೆ, ಭಕ್ತಿ, ಆತ್ಮವಿಶ್ವಾಸ ಅಗತ್ಯ

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯ

ತಿ.ನರಸೀಪುರ, ಏ.30– ಭಗವಂತನ ಬಗ್ಗೆ ಜನರಲ್ಲಿ ಅಚಲವಾದ ನಂಬಿಕೆ, ಭಕ್ತಿ ಮತ್ತು ಆತ್ಮವಿಶ್ವಾಸ ಮೂಡಿಸುವುದು ಧಾರ್ಮಿಕ ಸಂಸ್ಥೆಗಳು ಹಾಗೂ ಮಠಗಳ ಪ್ರಮುಖ ಕರ್ತವ್ಯ ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲೂಕಿನ ಕುರುಬೂರು ಗ್ರಾಮದಲ್ಲಿ ಪಟ್ಟದ ಮಠದಿಂದ ಆಯೋಜಿಸಿದ್ದ ಶ್ರೀಸದಾಶಿವ ಸ್ವಾಮೀಜಿಗಳ ಗದ್ದುಗೆ ಜೀರ್ಣೋದ್ಧಾರ ಹಾಗೂ 15ನೇ ವರ್ಷದ ಸಂಸ್ಮರಣೋತ್ಸವ, ಗುರು ಮಲ್ಲೇಶ್ವರ ಮೂರ್ತಿ ಪ್ರತಿಷ್ಠಾಪನೆ ಹಾಗೂ 5ನೇ ವರ್ಷದ ಪಟ್ಟಾಧಿಕಾರ ಮಹೋತ್ಸವದ ಧಾರ್ಮಿಕ ಸಭೆಯ ದಿವ್ಯ ಸಾನಿಧ್ಯ ವಹಿಸಿ, ಆಶೀರ್ವಚನ ನೀಡಿ ಅವರು ಮಾತನಾಡಿದರು.

ಭಗವಂತನಲ್ಲಿ ನಂಬಿಕೆ ಇಟ್ಟವರಿಗೆ ಯಾವುದೂ ಅಸಾಧ್ಯವಲ್ಲ. ಭಕ್ತಿ ಮನುಷ್ಯನ ಮನಸ್ಸಿಗೆ ಶಾಂತಿ, ಧೈರ್ಯ ಮತ್ತು ನೆಮ್ಮದಿ ನೀಡುತ್ತದೆ. ಆದ್ದರಿಂದ ಸಮಾಜದಲ್ಲಿ ದೇವರ ಬಗ್ಗೆ ಭಕ್ತಿ ಹಾಗೂ ವಿಶ್ವಾಸ ಬೆಳೆಸುವುದು ಅತ್ಯಗತ್ಯ ಎಂದರು.

ಇಂದಿನ ಆಧುನಿಕ ಯುಗದಲ್ಲಿ ಭೌತಿಕ ಸಾಧನೆಗಳ ಹಿಂದೆ ಓಡುತ್ತಿರುವ ಮನುಷ್ಯ ಆತ್ಮೀಯತೆಯನ್ನು ಮರೆತಿದ್ದಾನೆ. ಹೀಗಾಗಿ ಮಠಗಳು ಮತ್ತು ಧಾರ್ಮಿಕ ಕೇಂದ್ರಗಳು ಜನರಿಗೆ ಭಗವಂತನ ಮಹತ್ವ ತಿಳಿಸಿ, ಆಧ್ಯಾತ್ಮಿಕ ಜೀವನದತ್ತ ದಾರಿ ತೋರಿಸಬೇಕು. ಭಗವಂತನಲ್ಲಿ ನಂಬಿಕೆ ಎಂದರೆ ಕೇವಲ ಪೂಜೆ ಮಾಡುವುದಲ್ಲ. ಸತ್ಯ, ಧರ್ಮ, ದಯೆ ಮತ್ತು ಪ್ರೀತಿಯ ಮಾರ್ಗದಲ್ಲಿ ನಡೆಯುವುದಾಗಿದೆ. ಇಂತಹ ನಂಬಿಕೆ ವ್ಯಕ್ತಿಯ ಜೀವನವನ್ನು ಉಜ್ವಲಗೊಳಿಸುತ್ತದೆ ಎಂದರು.



ಪಟ್ಟಾಧಿಕಾರ ಮಹೋತ್ಸವ ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮಠಗಳು ಶಿಕ್ಷಣ, ದಾಸೋಹ, ಧಾರ್ಮಿಕ ಪ್ರವಚನಗಳು ಮತ್ತು ಸೇವಾ ಕಾರ್ಯಗಳ ಮೂಲಕ ಜನರ ಮನಸ್ಸಿನಲ್ಲಿ ಆಧ್ಯಾತ್ಮಿಕ ಚೇತನವನ್ನು ಮೂಡಿಸುತ್ತಿವೆ. ಈ ಕಾರ್ಯ ಮತ್ತಷ್ಟು ವಿಸ್ತಾರವಾಗಬೇಕು. ಭಗವಂತನ ಆಶ್ರಯದಲ್ಲಿ ಬದುಕಿದಾಗ ಮಾನವನ ಜೀವನ ಸಾರ್ಥಕವಾಗುತ್ತದೆ. ಪ್ರತಿಯೊಬ್ಬರೂ ದೇವರ ಮೇಲೆ ನಂಬಿಕೆ ಇಟ್ಟು ಧರ್ಮ ಮಾರ್ಗದಲ್ಲಿ ಸಾಗಬೇಕು ಎಂದು ಶ್ರೀಗಳು ಆಶೀರ್ವದಿಸಿದರು.

ಸದಾಶಿವ ಸ್ವಾಮೀಜಿಗಳ ಸಂಸ್ಮರಣೋತ್ಸವ ನಮ್ಮೆಲ್ಲರಿಗೂ ಅತ್ಯಂತ ಭಾವನಾತ್ಮಕ ಹಾಗೂ ಪ್ರೇರಣಾದಾಯಕ ಕ್ಷಣವಾಗಿದೆ. ಒಬ್ಬ ಮಹಾನ್ ಸಂತ, ಆಧ್ಯಾತ್ಮಿಕ ಚೇತನ, ಸಮಾಜ ಸುಧಾರಕ ಮತ್ತು ಮಾನವತಾವಾದಿಯನ್ನು ಸ್ಮರಿಸುವ ಈ ಪುಣ್ಯ ಸಂದರ್ಭ ಅವರ ಪವಿತ್ರ ಜೀವನ, ಅಪಾರ ಸೇವೆ ಮತ್ತು ಅಮೂಲ್ಯ ಸಂದೇಶಗಳನ್ನು ನೆನೆಯುವುದು ನಮ್ಮೆಲ್ಲರ ಭಾಗ್ಯವಾಗಿದೆ. ಸದಾಶಿವ ಸ್ವಾಮೀಜಿಗಳು ತಮ್ಮ ಇಡೀ ಬದುಕನ್ನು ಸಮಾಜ ಸೇವೆ, ಧರ್ಮದ ಉಳಿವಿಗೆ ಮತ್ತು ಮಾನವೀಯ ಮೌಲ್ಯಗಳ ಪ್ರತಿಷ್ಠಾಪನೆಗೆ ಸಮರ್ಪಿಸಿದರು. ಅವರ ಜೀವನದಲ್ಲಿ ಸರಳತೆ ಇತ್ತು. ನಡೆ ನುಡಿಯಲ್ಲಿ ಶುದ್ಧತೆ ಇತ್ತು. ಮಾತಿನಲ್ಲಿ ಮಧುರತೆ ಇತ್ತು ಕಾರ್ಯದಲ್ಲಿ ಕರುಣೆ ಇತ್ತು. ಅವರು ಜಾತಿ, ಮತ, ಪಂಥಗಳ ಅಂತರವಿಲ್ಲದೆ ಎಲ್ಲರನ್ನೂ ಸಮಾನವಾಗಿ ಪ್ರೀತಿಸಿ,

> ಸದಾಶಿವ ಸ್ವಾಮೀಜಿಗಳ ಸಂಸ್ಮರಣೋತ್ಸವವು ಅವರ ಆದರ್ಶ, ಆಧ್ಯಾತ್ಮಿಕತೆ ಮತ್ತು ಸಮಾಜಸೇವೆಯನ್ನು ಸ್ಮರಿಸುವ ಪವಿತ್ರ ಕಾರ್ಯಕ್ರಮವಾಗಿದೆ. ಅವರ ಜೀವನವು ನಿಸ್ವಾರ್ಥ ಸೇವೆ, ಧರ್ಮಪ್ರಚಾರ ಮತ್ತು ಮಾನವೀಯ ಮೌಲ್ಯಗಳ ಪ್ರತೀಕವಾಗಿತ್ತು. ಅವರು ತೋರಿದ ದಾರಿಯಲ್ಲಿ ನಡೆಯುವುದು, ಅವರ ಬೋಧನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಸ್ವಾಮೀಜಿಗಳು ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಮಾನತೆಯ ಸಂದೇಶ ಸಾರಿದರು. ಅವರ ಆಶೀರ್ವಾದ ಮತ್ತು ಮಾರ್ಗದರ್ಶನದಿಂದ ಅನೇಕರ ಬದುಕು ಬೆಳಗಿತು. ಅವರ ಸಂಸ್ಮರಣೋತ್ಸವವು ಕೇವಲ ನೆನಪಿನ ದಿನವಲ್ಲ, ಅವರ ಆದರ್ಶಗಳನ್ನು ಪುನರುಚ್ಚರಿಸುವ ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸುವ ಸುವರ್ಣಾವಕಾಶವಾಗಿದೆ. – ಹೆಚ್.ಎಂ.ಗಣೇಶ್ ಪ್ರಸಾದ್, ಶಾಸಕ.

ಸಮಾಜದಲ್ಲಿ ಸೌಹಾರ್ದತೆಯ ಬೀಜ ಬಿತ್ತಿದ ಮಹಾನ್ ದಾರ್ಶನಿಕರಾಗಿದ್ದರು. ಸ್ವಾಮೀಜಿಗಳು ನೀಡಿದ ಸಂದೇಶಗಳು ಇಂದಿಗೂ ಸಮಕಾಲೀನವಾಗಿವೆ. ಮಾನವ ಸೇವೆಯೇ ಮಾಧವನ ಸೇವೆ ಎಂಬ ಅವರ ಆದರ್ಶವು ಪ್ರತಿಯೊಬ್ಬರ ಜೀವನದ ಮಾರ್ಗದರ್ಶಕವಾಗಬೇಕು. ಪ್ರೀತಿ, ಕರುಣೆ, ಸಹನೆ, ಸತ್ಯ ಮತ್ತು ಧರ್ಮದ ಮಾರ್ಗದಲ್ಲಿ ಸಾಗುವಂತೆ ಅವರು ಬೋಧಿಸಿದರು ಎಂದರು.

ಕುರುಬೂರು ಪಟ್ಟದ ಮಠದ ಶ್ರೀಮಲ್ಲಿನಾಥ ಶಿವಾಚಾರ್ಯ ಸ್ವಾಮೀಜಿ, ವಾಟಾಳು ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕನಕಪುರ ದೇಗುಲ ಮಠದ ಡಾ.ಮುಮ್ಮಡಿ ನಿರ್ವಾಣ ಸ್ವಾಮೀಜಿ, ಬೆಂಗಳೂರು ಆದಿಚುಂಚನಗಿರಿ ಶಾಖಾ ಮಠದ ಶ್ರೀಸೌಮ್ಯನಾಥ ಸ್ವಾಮೀಜಿ, ದೇವನೂರು ಮಠದ ಮಹಾಂತ ಸ್ವಾಮೀಜಿ, ಮುಡುಕನಪುರ ಹಲವಾರ ಮಠದ ಷಡಕ್ಷರ ಸ್ವಾಮೀಜಿ, ಮಾದ್ರಹಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಹುಲಿಯೂರು ದುರ್ಗಾ ಸಿದ್ಧಲಿಂಗ ಮಠದ ಸಿದ್ಧಲಿಂಗ ಶಿವಾನಂದ ಸ್ವಾಮೀಜಿ, ದಂಡಿಕೆರೆ ಮಠದ ಬಸವಲಿಂಗಸ್ವಾಮೀಜಿ ಆಶೀರ್ವಚನ ನೀಡಿದರು.

ಈ ವೇಳೆ ಗುರುಮಲ್ಲೇಶ್ವರ ಪುತ್ಥಳಿ ಶಿಲ್ಪಿಗಳಾದ ರಾಜೇಶ್, ಗೋಪಾಲ್, ಸಮಾಜ ಸೇವಕ ಗಜೇಂದ್ರ ಹಾಗೂ ರಾಷ್ಟ್ರ ಮಟ್ಟದ ಖೋಖೋ ಆಟಗಾರ್ತಿ ಕುಮಾರಿ ಚೈತ್ರ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಚನ್ನಬಸವ ಸ್ವಾಮೀಜಿ, ನಿಲಸೋಗೆ ದಾಸೋಹ ಮಠದ ಮಲ್ಲಪ್ಪಸ್ವಾಮೀಜಿ, ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ.ರುದ್ರೇಶ್, ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಕಪ್ಪಸೋಗೆ ಸಿದ್ದಮಲ್ಲಪ್ಪ, ತೊಟ್ಟವಾಡಿ ರವಿ, ತೋಟದಪ್ಪ ಬಸವರಾಜು ಸೇರಿದಂತೆ ಕುರುಬೂರು ಗ್ರಾಮಸ್ಥರು, ಮುಖಂಡರು, ಯಜಮಾನರು ಹಾಜರಿದ್ದರು.

ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಅಂಗವಾಗಿ

ಮೇ 3ರಂದು 41 ಜೊತೆ ನಾಡಕುಸ್ತಿ ಪಂದ್ಯಾವಳಿ

ನಂಜನಗೂಡು, ಏ.30– ದಿ.ಆರ್.ಧ್ರುವನಾರಾಯಣ್ ಅವರ 65ನೇ ಹುಟ್ಟುಹಬ್ಬದ ಅಂಗವಾಗಿ ಮೇ 3ರಂದು ಸಂಜೆ 4 ಗಂಟೆಗೆ 41 ಜೊತೆ ನಾಡಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ನಗರಸಭೆ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು ಒಬ್ಬ ಕ್ರೀಡಾಪಟುವಾಗಿ ಕ್ರೀಡೆಗೆ ಸಾಕಷ್ಟು ಉತ್ತೇಜನ ನೀಡುತ್ತಿದ್ದರು. ಅಲ್ಲದೇ 10 ವರ್ಷಗಳ ಕಾಲ ಸಂಸದರಾಗಿ, ಶಾಸಕರಾಗಿ ಜನಪರ ಕಾರ್ಯಗಳಿಂದ ಈ ಭಾಗದ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದ್ದಾರೆ. ಅವರು ಕಾಲವಾಗಿ 3 ವರ್ಷ ಕಳೆದರೂ ಸಹ ಈ ಭಾಗದ ಜನತೆ ಅವರನ್ನು ಮರೆತಿಲ್ಲ. ಅವರ ಸವಿನೆನಪಿಗಾಗಿ ಹಾಗೂ ಸ್ಥಳೀಯ ಕುಸ್ತಿಪಟುಗಳಿಗೆ ವೇದಿಕೆ ಕಲ್ಪಿಸಿ ಕುಸ್ತಿ ಕಲೆಯನ್ನು ಉತ್ತೇಜಿಸುವ ಸಲುವಾಗಿ ನಂಜನಗೂಡಿನಲ್ಲಿ 41 ಜೊತೆ ನಾಡ ಕುಸ್ತಿ ಪಂದ್ಯಾವಳಿ ನಡೆಸಲಾಗುವುದು. ಕುಸ್ತಿ ಪಂದ್ಯಾವಳಿಯನ್ನು ಸಂಸದ ಸುನೀಲ್ ಬೋಸ್ ಮತ್ತು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಲಿದ್ದಾರೆ. ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ ಸೇರಿದಂತೆ ಅನೇಕ ಜನಪ್ರತಿನಿಧಿಗಳು ಭಾಗವಹಿಸಲಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕುಸ್ತಿ ಪಂದ್ಯಾವಳಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.



ಸುದ್ದಿಗೋಷ್ಠಿಯಲ್ಲಿ ಮುಖಂಡರು ಕುಸ್ತಿ ಪಂದ್ಯಾವಳಿ ಪೋಸ್ಟರ್ ಬಿಡುಗಡೆಗೊಳಿಸಿದರು.

ಪೈಸಿದ್ದರಾಜು ಮಾತನಾಡಿ, ಬೆಳಗಾಂ ಪೈಲ್ವಾನ್ ಸಂಜು ಮತ್ತು ಮಹದೇವರಪುರ ಪೈಲ್ವಾನ್ ವಿಕಾಸ್ ನಡುವೆ ಒಂದು ಗಂಟೆಗಳ ಕಾಲ ಮಾರ್ಫಿಟ್ ಕುಸ್ತಿ ನಡೆಯಲಿದೆ. ಇಬ್ಬರಲ್ಲಿ ಜಯಶೀಲರಾದವರಿಗೆ ಭೀಮ ಕೇಸರಿ ಪ್ರಶಸ್ತಿ ನೀಡಿ ಬೆಳ್ಳಿ ಗದೆ ವಿತರಿಸಲಾಗುವುದು. ಉಳಿದ ಮಾರ್ಫಿಟ್ ಕುಸ್ತಿ ಪಂದ್ಯಾವಳಿ ವಿಜೇತರಿಗೆ ದರ್ಶನ್ ಧ್ರುವನಾರಾಯಣ ಕೇಸರಿ ಪ್ರಶಸ್ತಿ, ಪೈಲ್ವಾನ್ ರಂಗಯ್ಯ ಪ್ರಶಸ್ತಿ ಮತ್ತು ಬೆಳ್ಳಿ ಗದೆಗಳನ್ನು ನೀಡಿ ಗೌರವಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಪೈಲ್ವಾನ್ ಸಿದ್ದರಾಜು, ನಟೇಶ್, ರಘು, ಚೇತನ್, ಶಿವು ಉಪಸ್ಥಿತರಿದ್ದರು.

ಇಡೀ ಜಗತ್ತಿನಲ್ಲೇ ಅಂಬೇಡ್ಕರ್ ಸಂವಿಧಾನ ಶ್ರೇಷ್ಠ

ಸಮಾಜ ಸೇವಕ ಎನ್.ನಿಂಗರಾಜು

ಹೆಚ್.ಡಿ.ಕೋಟೆ, ಏ.30– ಅಂಬೇಡ್ಕರ್ ಅವರು ರಚಿಸಿದ ಸಂವಿಧಾನ ಇಡೀ ಜಗತ್ತಿನಲ್ಲೇ ಶ್ರೇಷ್ಠ ಸಂವಿಧಾನವಾಗಿದೆ ಎಂದು ಉದ್ಯಮಿ, ಸಮಾಜ ಸೇವಕ ಎನ್.ಬೆಳತ್ತೂರು ಎನ್.ನಿಂಗರಾಜು ತಿಳಿಸಿದರು.

ತಾಲೂಕಿನ ಎನ್.ಬೆಳತ್ತೂರು ಗ್ರಾಮದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಜ್ಞಾನಿ ಅಂಬೇಡ್ಕರ್, ಜಗಜ್ಯೋತಿ ಬಸವಣ್ಣ, ಶಾಂತಿದೂತ ಬುದ್ಧ ಅವರಂತಹ ಮಹನೀಯರಿಂದ ವಿಶ್ವದಲ್ಲೇ ಭಾರತ ಪುಣ್ಯಭೂಮಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಅಂಬೇಡ್ಕರ್ ಜಯಂತಿಯನ್ನು ಹಳ್ಳಿ ಹಳ್ಳಿಗಳಲ್ಲಿ ಹಬ್ಬದಂತೆ ಆಚರಿಸುತ್ತಿದ್ದಾರೆ. ಒಂದು ವೇಳೆ ದೇಶದಲ್ಲಿ ಅಂಬೇಡ್ಕರ್ ಹುಟ್ಟದೆ ಹೋಗಿದ್ದರೆ, ಇಂದಿಗೂ ಹಳೆಯ ಸಂಪ್ರದಾಯವೇ ಮುಂದುವರೆಯುತ್ತಿತ್ತು ಎಂದರು.



ಎನ್.ಬೆಳತ್ತೂರು ಗ್ರಾಮದಲ್ಲಿ ಅಂಬೇಡ್ಕರ್ ಜಯಂತಿ ನಡೆಯಿತು.

ಅಂಬೇಡ್ಕರ್ ಜಯಂತಿಯನ್ನು ಜಾತ್ಯಾತೀತ, ಧರ್ಮಾತೀತ, ಭಾಷಾತೀತವಾಗಿ ಆಚರಿಸಿದಾಗ ಮಾತ್ರ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಸಂವಿಧಾನ ಉಳಿಸುವ, ಕಾಪಾಡುವ ಜವಾಬ್ದಾರಿ ಎಲ್ಲಾ ಭಾರತೀಯರ ಮೇಲಿದೆ. ಮುಂದೆಯೂ ಸಾವಿರಾರು ವರ್ಷ ಅಂಬೇಡ್ಕರ್ ಅವರ ಸಂವಿಧಾನ ನಿರಂತರವಾಗಿ ಜಾರಿಯಲ್ಲಿರಬೇಕು. ದೇಶವು ಮತ್ತಷ್ಟು ಅಭಿವೃದ್ಧಿಯಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಗ್ರಾಪಂ ಸದಸ್ಯ ರಾಮು, ಎಸ್‌ಡಿಎಂಸಿ ಅಧ್ಯಕ್ಷ ಶ್ರೀಕಂಠ, ಸ್ವಾಭಿಮಾನಿ ಅಂಬೇಡ್ಕರ್ ಸಂಘದ ಅಧ್ಯಕ್ಷ ಶಿವಣ್ಣ, ಮಹೇಶ್, ಅಶೋಕ್, ಭೈರಯ್ಯ, ನಂಜುಂಡಯ್ಯ ಇತರರಿದ್ದರು.

ಪಂಚಾಯತ್ ರಾಜ್ ಇಲಾಖೆ ಎಇಇಗೆ ಬೀಳ್ಕೊಡುಗೆ

ನಂಜನಗೂಡು, ಏ.30– ವಯೋನಿವೃತ್ತಿಗೊಂಡ ಪಂಚಾಯತ್ ರಾಜ್ ಇಲಾಖೆ ಎಇಇ ರಾಜು ಅವರಿಗೆ ಪಂಚಾಯತ್ ರಾಜ್ ಇಲಾಖೆ ಉಪ ವಿಭಾಗದಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ವೀರೇಶ್ ಮಾತನಾಡಿ, ಎಇಇ ರಾಜು ಅವರು ನಿಷ್ಠೆ, ಪ್ರಾಮಾಣಿಕತೆಯಿಂದ ಅನೇಕ ಜನೋಪಯೋಗಿ ಕೆಲಸಗಳನ್ನು ನಿರ್ವಹಿಸಿ ಜನರ ಕೆಲಸಗಳನ್ನು ತ್ವರಿತವಾಗಿ ಮಾಡಿಕೊಡುವ ಮೂಲಕ ಈ ಭಾಗದಲ್ಲಿ ಜನಮನ್ನಣೆ ಗಳಿಸಿದ್ದಾರೆ. ಅವರ ನಿವೃತ್ತಿ ಜೀವನ ಸುಖಮಯವಾಗಿರಲಿ ಎಂದು ಶುಭ ಹಾರೈಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಇಇ ರಾಜು, ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ಕೆಲಸ ನಿರ್ವಹಿಸುವ ಅವಕಾಶ ಸಿಕ್ಕಿದ್ದು ಹಾಗೂ ಇಲ್ಲೇ ನಾನು ನಿವೃತ್ತಿಗೊಂಡಿರುವುದು ನನ್ನ ಅದೃಷ್ಟ. ನಂಜನಗೂಡಿನಲ್ಲಿ ನನಗೆ ಕೆಲಸ ನಿರ್ವಹಿಸುವ ಕಾಲಾವಕಾಶ ಸಿಕ್ಕಿದ್ದು ಕಡಿಮೆ ಅವಧಿ ಆದರೂ ಆ ಅವಧಿಯಲ್ಲಿ ಎಲ್ಲಾ ಇಲಾಖೆಗಳ ಜನರ ಕೆಲಸಗಳನ್ನು ಮತ್ತು ಅನೇಕ ಜನೋಪಯೋಗಿ ಕಾಮಗಾರಿಗಳನ್ನು ನಿರ್ವಹಿಸಿದ ಆತ್ಮತೃಪ್ತಿ ನನಗಿದೆ ಎಂದರು.



ಪಂಚಾಯತ್ ರಾಜ್ ಇಲಾಖೆ ಎಇಇ ರಾಜು ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ಸಮಾರಂಭದಲ್ಲಿ ಎಇಇ ಚರಿತ, ಮನು, ಎಇಗಳಾದ ಶಿವಪ್ರಕಾಶ್, ಈರಯ್ಯ, ಶಿವಮೂರ್ತಿ, ಸಿದ್ದರಾಜು ಸೇರಿದಂತೆ ಹಲವರಿದ್ದರು.

ಕಾರ್ಮಿಕರ ಅಭಿವೃದ್ಧಿಗೆ ಪ್ರತ್ಯೇಕ ನಿಗಮ ಸ್ಥಾಪಿಸಲು ಒತ್ತಾಯ

ತಿ.ನರಸೀಪುರ, ಏ.30– ಕಾರ್ಮಿಕರ ಸಮಗ್ರ ಅಭಿವೃದ್ಧಿ ಮತ್ತು ಉಜ್ವಲ ಭವಿಷ್ಯ ಗಮನದಲ್ಲಿಟ್ಟುಕೊಂಡು, ಅವರಿಗಾಗಿ ಪ್ರತ್ಯೇಕ ನಿಗಮ ಸ್ಥಾಪಿಸಬೇಕು ಎಂದು ಸರ್ಕಾರವನ್ನು ಕನ್ನಡ ಸೇನೆ–ಕರ್ನಾಟಕ ಸೇನೆ ಸಂಘಟನೆ ತಾಲೂಕು ಅಧ್ಯಕ್ಷ ಭೈರಾಪುರ ಕೆ.ರಾಜು ಒತ್ತಾಯಿಸಿದ್ದಾರೆ.



ಕೆ.ರಾಜು

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಬದುಕು ಇನ್ನಷ್ಟು ಸುರಕ್ಷಿತ, ಸುಭದ್ರ ಹಾಗೂ ಸ್ವಾವಲಂಬಿಯಾಗಲು ಈ ನಿಗಮ ಮಹತ್ವದ ಹೆಜ್ಜೆಯಾಗಲಿದೆ. ಪ್ರತ್ಯೇಕ ನಿಗಮ ಸ್ಥಾಪನೆಯಿಂದ ಕಾರ್ಮಿಕರಿಗೆ ಉದ್ಯೋಗ ಭದ್ರತೆ, ಆರೋಗ್ಯ ವಿಮೆ, ವಸತಿ ಸೌಲಭ್ಯ, ಮಕ್ಕಳ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಸ್ವಯಂ ಉದ್ಯೋಗಕ್ಕೆ ಅಗತ್ಯವಾದ ಆರ್ಥಿಕ ನೆರವು ಒದಗಿಸಲು ಸಾಧ್ಯವಾಗುತ್ತದೆ. ಇದರಿಂದ ಕಾರ್ಮಿಕರ ಜೀವನಮಟ್ಟ ಸುಧಾರಿಸಿ, ಅವರ ಕುಟುಂಬಗಳ ಭವಿಷ್ಯವೂ ಭದ್ರವಾಗಲಿದೆ. ಕಾರ್ಮಿಕರ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸುವ, ಅವರ ಹಕ್ಕುಗಳನ್ನು ಕಾಪಾಡುವ ಹಾಗೂ ಕಲ್ಯಾಣ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ಸರ್ಕಾರವು ತಕ್ಷಣವೇ ಪ್ರತ್ಯೇಕ ನಿಗಮ ಸ್ಥಾಪನೆಗೆ ಮುಂದಾಗಬೇಕು ಎಂದು ಅವರು ಒತ್ತಾಯಿಸಿದರು.

ಅಸಂಘಟಿತ ವಲಯದಲ್ಲಿ ದುಡಿಯುವ ಲಕ್ಷಾಂತರ ಕಾರ್ಮಿಕರು ಹಲವು ಮೂಲ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅವರ ನೋವು–ನಲಿವುಗಳಿಗೆ ಸ್ಪಂದಿಸಿ, ಸರ್ಕಾರವು ಪ್ರತ್ಯೇಕ ಕಾರ್ಮಿಕ ನಿಗಮ ರಚಿಸುವ ಮೂಲಕ ಅವರ ಹಕ್ಕುಗಳಿಗೆ ಬಲ ನೀಡಬೇಕು. ಇದು ಕೇವಲ ಒಂದು ಆಡಳಿತಾತ್ಮಕ ಕ್ರಮವಲ್ಲ. ಶ್ರಮಕ್ಕೆ ಗೌರವ ಸಲ್ಲಿಸುವ ಸಾಮಾಜಿಕ ಬದ್ಧತೆಯಾಗಿದೆ. ಕಾರ್ಮಿಕರ ಅಭಿವೃದ್ಧಿಯೇ ರಾಜ್ಯದ ಅಭಿವೃದ್ಧಿಗೆ ದಾರಿಯಾಗಿದೆ. ಅವರ ಬದುಕಿನಲ್ಲಿ ಭದ್ರತೆ, ನೆಮ್ಮದಿ ಮತ್ತು ಆಶಾಭಾವನೆ ತುಂಬುವ ನಿಟ್ಟಿನಲ್ಲಿ ಸರ್ಕಾರ ತಕ್ಷಣವೇ ಪ್ರತ್ಯೇಕ ಕಾರ್ಮಿಕ ನಿಗಮ ಸ್ಥಾಪನೆಗೆ ಮುಂದಾಗಬೇಕು. ಕಾರ್ಮಿಕರ ಕನಸುಗಳಿಗೆ ನೆರವಾಗುವುದು, ಅವರ ಕುಟುಂಬಗಳ ಭವಿಷ್ಯ ಸುರಕ್ಷಿತಗೊಳಿಸುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಿದೆ ಎಂದರು.

ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರದ ಯೋಜನೆಗಳು ತಲುಪುವಲ್ಲಿ ಅನೇಕ ಅಡಚಣೆಗಳಿವೆ. ಪ್ರತ್ಯೇಕ ನಿಗಮವು ಈ ಅಂತರವನ್ನು ಕಡಿಮೆ ಮಾಡಿ, ಪ್ರತಿಯೊಬ್ಬ ಕಾರ್ಮಿಕನಿಗೂ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವ ಸೇತುವೆಯಾಗಿ ಕಾರ್ಯನಿರ್ವಹಿಸಲಿದೆ. ಇದು ಕಾರ್ಮಿಕರ ಬದುಕಿನಲ್ಲಿ ಭದ್ರತೆ, ಗೌರವ ಮತ್ತು ಸ್ವಾಭಿಮಾನವನ್ನು ಹೆಚ್ಚಿಸಲಿದೆ ಎಂದರು.

ಕಾರ್ಮಿಕರ ಅಭಿವೃದ್ಧಿಯೇ ರಾಜ್ಯದ ಪ್ರಗತಿಯ ಮೂಲಾಧಾರ. ಅವರ ಶ್ರಮಕ್ಕೆ ತಕ್ಕ ಗೌರವ ನೀಡುವುದು ಪ್ರತಿಯೊಂದು ಸರ್ಕಾರದ ಕರ್ತವ್ಯ. ಆದ್ದರಿಂದ ಕಾರ್ಮಿಕರ ಸಮಗ್ರ ಅಭಿವೃದ್ಧಿ, ಸಾಮಾಜಿಕ ಭದ್ರತೆ ಮತ್ತು ಉಜ್ವಲ ಭವಿಷ್ಯಕ್ಕಾಗಿ ಸರ್ಕಾರವು ತಕ್ಷಣವೇ ಪ್ರತ್ಯೇಕ ಕಾರ್ಮಿಕ ನಿಗಮ ಸ್ಥಾಪಿಸಬೇಕು. ಕಾರ್ಮಿಕರ ಕನಸುಗಳಿಗೆ ಬೆಂಬಲವಾಗಿ ನಿಂತಾಗಲೇ ಸಮಾನತೆ, ನ್ಯಾಯ ಮತ್ತು ಸಮೃದ್ಧಿಯ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಂದು ಹುಣಸೂರಲ್ಲಿ ಶ್ರೀಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ

ಹುಣಸೂರು, ಏ.30– ಶ್ರೀಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ ಮೇ 1ರಂದು ನಗರದಲ್ಲಿ ವಿಜೃಂಭಣೆಯಿಂದ ನಡೆಯಲಿದೆ.

ನಗರದ ಬ್ರಾಹ್ಮಣರ ಬಡಾವಣೆಯಲ್ಲಿ ನಡೆಯುವ ಶ್ರೀಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವದ ಅಂಗವಾಗಿ ಏ.29 ರಂದು ಅರ್ಚಕ ಶ್ರೀಹರಿ ನೇತೃತ್ವದಲ್ಲಿ ಅಂಕುರಾರ್ಪಣೆ, ಧ್ವಜಾರೋಹಣ, ಹಂಸ ವಾಹನೋತ್ಸವ ಜರುಗಿತು. ಏ.30ರಂದು ಕಲ್ಯಾಣೋತ್ಸವ, ಪ್ರಹ್ಲಾದ ಪರಿಪಾಲನೋತ್ಸವ, ಗರುಡ ವಾಹನೋತ್ಸವ ನಡೆಯಿತು.

ರಥೋತ್ಸವ ಅಂಗವಾಗಿ ಮೇ 1ರಂದು ಬೆಳಗ್ಗೆ ಸ್ವಾಮಿಗೆ ವಿಶೇಷ ಪೂಜೆ, ಹೋಮ ಹವನ ನಡೆಯಲಿದೆ. ಬೆಳಗ್ಗೆ 9.30ಕ್ಕೆ ರಥೋತ್ಸವಕ್ಕೆ ಚಾಲನೆ ನೀಡಲಿದ್ದು, ಹೆಚ್.ಡಿ.ಕೋಟೆ ವೃತ್ತ, ಜೆಎಲ್‌ಬಿ ರಸ್ತೆ, ಲಕ್ಷ್ಮಿ ವಿಲಾಸ್ ವೃತ್ತದವರೆಗೆ ತೆರಳಿ ಸ್ವಸ್ಥಾನಕ್ಕೆ ಮರಳಲಿದೆ. ರಥೋತ್ಸವದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ತಹಸೀಲ್ದಾರ್ ಜೆ.ಮಂಜುನಾಥ್ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸುವರು. ಮಧ್ಯಾಹ್ನ 1.30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ ಎಂದು ದೇವಾಲಯದ ಸಂಚಾಲಕ ಹೆಚ್.ಆರ್.ಗುರುರಾಜ್ ತಿಳಿಸಿದರು.



ರಥೋತ್ಸವಕ್ಕೆ ರಥವನ್ನು ಅಣಿಗೊಳಿಸುತ್ತಿರುವುದು.

ಮೇ 2 ರಂದು ಬೆಳಗ್ಗೆ ಮಹಾ ವಿಷ್ಣು ಯಾಗ, ಶೇಷ ವಾಹನೋತ್ಸವ, ಡೋಲೋತ್ಸವ, ಉತ್ಸವಗಳು ಜರುಗಲಿದೆ. ಮೇ 3 ರಂದು ಹಗಲು ವಸಂತೋತ್ಸವ, ಪುಷ್ಪಯಾನೋತ್ಸವ, ಅಶ್ವಾರೋಹಣೋತ್ಸವ, ಮೇ 4ರಂದು ಸಹಸ್ರ ತುಳಸಿ ಅರ್ಚನೆ, ಹನುಮಂತೋತ್ಸವ, ಪೂರ್ಣಾಹುತಿ, ಧ್ವಜಾರೋಹಣೋತ್ಸವ, ಮೇ 5ರಂದು ಮಹಾಭಿಷೇಕ, ಶಯನೋತ್ಸವದೊಂದಿಗೆ ಎಲ್ಲಾ ಧಾರ್ಮಿಕ ಕೈಂಕರ್ಯಗಳು ಸಮಾಪ್ತಿಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಟ್ಟದಪುರ ಸರ್ಕಾರಿ ಕಾಲೇಜು ವಾರ್ಷಿಕೋತ್ಸವ

ಬೆಟ್ಟದಪುರದ, ಏ.30– ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭವನ್ನು ಪಿರಿಯಾಪಟ್ಟಣ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ನಂತರ ಅವರು ವಿದ್ಯಾರ್ಥಿಗಳಿಗೆ ಜೀವನದಲ್ಲಿ ಶಿಸ್ತು, ಪರಿಶ್ರಮ, ಗುರಿ, ಸಾಧನೆ, ಸಮಯದ ಮಹತ್ವ ಹಾಗೂ ಉತ್ತಮ ವ್ಯಕ್ತಿತ್ವದ ಅಗತ್ಯತೆ ಕುರಿತು ಅಮೂಲ್ಯ ಜೀವನ ಪಾಠಗಳನ್ನು ತಿಳಿಸಿದರು.

ಮುಖ್ಯ ಅತಿಥಿ ಪಿರಿಯಾಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಬಿ.ನಂಜುಂಡಸ್ವಾಮಿ ಮಾತನಾಡಿ, ಸಂವಿಧಾನದ ಮಹತ್ವ, ಅದನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕು. ಶಿಕ್ಷಣದ ಅಗತ್ಯತೆ ಹಾಗೂ ಉತ್ತಮ ಮೌಲ್ಯಗಳೊಂದಿಗೆ ಜೀವನ ಸಾಗಿಸುವ ಮಹತ್ವದ ಕುರಿತು ತಿಳಿಸಿದರು.



ವಾರ್ಷಿಕೋತ್ಸವ ಸಮಾರಂಭವನ್ನು ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಭರತ್ ರಾಜ್ ಅರಸ್ ವಹಿಸಿದ್ದರು. ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಗುಂಜಪ್ಪ ಕಾರ್ನಾಡ್, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಕೃಷ್ಣೇಗೌಡ ಹಾಗೂ ಸಮಿತಿಯ ಎಲ್ಲಾ ಸದಸ್ಯರು, ಕಾಲೇಜಿನ ಐಕ್ಯೂಎಸಿ ಸಂಚಾಲಕ ಶಾಕೀರ್, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಪದ್ಮಾವತಿ, ಪಿ.ಕಾವ್ಯ, ಪ್ರಶಾಂತ್, ಜಲೇಂದ್ರ, ರಘುವೀರ್ ಹಾಗೂ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ಶೆಟ್ಟಹಳ್ಳಿ ಪುನರ್ವಸತಿ ಕೇಂದ್ರದಲ್ಲಿ ವಾರ್ಷಿಕ ಸಮಾಜ ಶಿಬಿರ

ಹುಣಸೂರು, ಏ.30– ಸಮಾಜ ಕಾರ್ಯವು ಮಾನವನ ಸಾಮಾಜಿಕ ಆರೋಗ್ಯ ರಕ್ಷಣೆ ಮತ್ತು ಬೆಳವಣಿಗೆಗೆ ಅತ್ಯಮೂಲ್ಯ ಕೊಡುಗೆ ನೀಡಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡರ ಪತ್ನಿ ವರ್ಷ ತಿಳಿಸಿದರು.

ತಾಲೂಕಿನ ಶೆಟ್ಟಹಳ್ಳಿ ಪುನರ್ವಸತಿ ಕೇಂದ್ರದಲ್ಲಿ ಆಚಾರ್ಯ ವಿದ್ಯಾಸಂಸ್ಥೆ ಬೆಂಗಳೂರು ವತಿಯಿಂದ ಆಯೋಜಿಸಿದ್ದ ವಾರ್ಷಿಕ ಸಮಾಜ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಮಾನವ ಸಂಘಜೀವಿಯಾಗಿ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಿದಂತೆ ತನ್ನ ಬದುಕನ್ನು ಹಸನುಗೊಳಿಸಿಕೊಳ್ಳುವ ಕಾರ್ಯಕ್ಕೆ ಮುಂದಾಗಬೇಕು. ಮನುಷ್ಯ ಜೀವನ ಮತ್ತು ಆರೋಗ್ಯಕರ ಸಮಾಜವನ್ನು ಸೃಷ್ಟಿಸಿ ಕೊಳ್ಳಲು ನಡೆಸಿದ ಹಲವು ಪ್ರಯತ್ನಗಳು ಸಾಮಾ ಜಿಕ ಆರೋಗ್ಯ ಸುಧಾರಣೆಗೆ ಮತ್ತು ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗಿದೆ. ಸಮಾಜ ಕಾರ್ಯದ ನೆಲೆಯಲ್ಲಿ ಸಮುದಾಯ ಅಭಿವೃದ್ಧಿ ಎಂಬ ನೆಲಗಟ್ಟಿನ ಮೇಲೆ ಮಾನವನ ಸಾಮಾಜಿಕ ಜೀವನದ ಪ್ರಗತಿಯಾಗಲು ಸಾಧ್ಯ. ಅದು ಒಂದು ಮಹತ್ತರವಾದ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬರೂ ಸಮಾಜ ಕಾರ್ಯ ಮತ್ತು ಸಮುದಾಯದ ಅಭಿವೃದ್ಧಿ ಅರಿತುಕೊಂಡಾಗ ಮಾತ್ರ ಸಮಾಜದಲ್ಲಿ ಉತ್ತಮ ಬಾಂಧವ್ಯ, ಸರ್ವತೋಮುಖ ಅಭಿವೃದ್ಧಿ ಸಾಧಿಸಲು ಸಾಧ್ಯ ಎಂದರು.



ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡರ ಪತ್ನಿ ವರ್ಷ ಉದ್ಘಾಟಿಸಿದರು.

ಕಾವೇರಿ ಆಸ್ಪತ್ರೆ ಮುಖ್ಯಸ್ಥ ಡಾ.ಲೋಹಿತ್ ಮಾತನಾಡಿ, ಸಮಾಜ ಕಾರ್ಯದ ಮುಖ್ಯ ಉದ್ದೇಶ ಮಾನವನ ಸಾಮಾಜಿಕ ಜೀವನ ಸಮೃದ್ಧಿಗೊಳಿಸುವುದು ಮತ್ತು ಸಂತೋಷಕರ ಹಾಗೂ ಆರೋಗ್ಯಕರ ಸಮಾಜ ರೂಪಿಸುವುದಾಗಿದೆ. ಸಮಾಜ ಕಾರ್ಯವು ವ್ಯಕ್ತಿ, ಸಮೂಹ, ಸಮುದಾಯವನ್ನು ಸ್ವಪ್ರಯತ್ನದ ಮೂಲಕ ಸಾಮಾಜಿಕ ಸಮಸ್ಯೆಗಳಿಂದ ಮುಕ್ತಿಗೊಳಿಸುವ ಪ್ರಾಯೋಗಿಕ ಕೆಲಸವಾಗಿದೆ. ಆದ್ದರಿಂದ ಸಮುದಾಯ ಅಭಿವೃದ್ಧಿಪಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆ ಮುಖ್ಯಸ್ಥ ಡಾ.ಮಿರ್ಶದ್ ರೆಹಮನ್, ಪ್ರೊ.ಡಾ.ಕುಮಾರಸ್ವಾಮಿ, ದೀಪಿಕಾ, ಜೆಡಿಎಸ್ ತಾಲೂಕು ಅಧ್ಯಕ್ಷ ಸುರೇಂದ್ರ, ತಾಪಂ ಮಾಜಿ ಸದಸ್ಯ ಕೆ.ಗಣಪತಿ, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್, ನಿವೃತ್ತ ಶಿಕ್ಷಕ ವೆಂಕಟರಮಣ, ಅಪ್ಪಾಜಿಗೌಡ, ವಿದ್ಯಾರ್ಥಿಗಳು ಇನ್ನಿತರರು ಉಪಸ್ಥಿತರಿದ್ದರು.

ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ

ಸರಗೂರು, ಏ.30– ಪಟ್ಟಣದ ನಿವಾಸಿ ಗಿರೀಶ್, ಸುಮಲತಾ ದಂಪತಿ ಪುತ್ರಿ, ವಿವೇಕ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆ ವಿದ್ಯಾರ್ಥಿನಿ ಜಿ.ಸೃಜನಶ್ರೀ ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಇ) ಪರೀಕ್ಷೆಯಲ್ಲಿ ಶೇ.95ರಷ್ಟು ಅಂಕ ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆಯುವ ಮೂಲಕ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ. ಈಕೆ ಸಾಧನೆಗೆ ಶಾಲೆ ಆಡಳಿತ ವರ್ಗ ಹಾಗೂ ಪೋಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪಿಯುಸಿ ಮರು ಮೌಲ್ಯಮಾಪನ: ರಾಜ್ಯಕ್ಕೆ 7ನೇ ಸ್ಥಾನ ಪಡೆದ ಶಿಲ್ಪಶ್ರೀ

ತಿ.ನರಸೀಪುರ, ಏ.30– ಸಂತ ನೋರ್ಬರ್ಟ್ ಕಾಲೇಜಿನ ವಿದ್ಯಾರ್ಥಿನಿ ಪಿ.ವಿ.ಶಿಲ್ಪಶ್ರೀ ಪಿಯುಸಿ ಪರೀಕ್ಷೆಯಲ್ಲಿ 593 ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾಳೆ.



ಫಲಿತಾಂಶ ಪ್ರಕಟವಾದಾಗ 587 ಅಂಕ ಪಡೆದಿದ್ದಳು. ಆದರೆ ನಿರೀಕ್ಷಿಸಿದಷ್ಟು ಅಂಕ ಬಾರದ ಹಿನ್ನೆಲೆಯಲ್ಲಿ ಶಿಲ್ಪಶ್ರೀ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದಳು.

ಅಂತಿಮವಾಗಿ 600ಕ್ಕೆ 593 ಅಂಕಗಳನ್ನು ಪಡೆದು ರಾಜ್ಯಕ್ಕೆ 7ನೇ ಸ್ಥಾನ ಪಡೆಯುವುದರೊಂದಿಗೆ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಈಕೆಯ ಸಾಧನೆಗೆ ಕಾಲೇಜಿನ ಮುಖ್ಯಸ್ಥರು ಹಾಗೂ ಪೋಷಕರು ಸಂತಸ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.

ರಾಜೇಗೌಡ ನಿಧನ



ಕೆ.ಆರ್.ನಗರ, ಏ.30– ಸಾಲಿಗ್ರಾಮ ತಾಲೂಕು ಕಾಳಮ್ಮನ ಕೊಪ್ಪಲು ಗ್ರಾಮದ ರಾಜೇಗೌಡ (62) ಬುಧವಾರ ಸಂಜೆ ನಿಧನರಾದರು. ಮೃತರು ಪತ್ನಿ, ಸಾರಿಗೆ ಸಂಸ್ಥೆ ನೌಕರ ಸತೀಶ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಯಾ ತೈಲ ಕಂಪನಿಗಳ ವೆಬ್‌ಸೈಟ್‌ನಲ್ಲಿ ಬುಕಿಂಗ್ ವಿಧಾನದಡಿ ವಾಣಿಜ್ಯ ಸಿಲಿಂಡರ್ ಖರೀದಿ ಕಡ್ಡಾಯ



● ಶೇ.80ರಷ್ಟು ಇದೇ ವಿಧಾನ ಅನುಸರಿಸಲು ಮುಂದಾದ ತೈಲ ಕಂಪನಿಗಳು ● ಎಲ್‌ಡಿಎಐ ರಾಜ್ಯಾಧ್ಯಕ್ಷ ಮೆಹುಲ್ ಪಟೇಲ್ ಮಾಹಿತಿ ● ಪ್ರತ್ಯೇಕ ಮೊಬೈಲ್ ಸಂಖ್ಯೆ ನೋಂದಣಿ ಕಡ್ಡಾಯ

ಮೈಸೂರು,ಏ.30(ಪಿಎಂ)– ವಾಣಿಜ್ಯ ಗ್ಯಾಸ್ ಸಿಲಿಂಡರ್ ಖರೀದಿಸಲು ಆಯಾ ತೈಲ ಕಂಪನಿಗಳ ವೆಬ್‌ಸೈಟ್‌ನಲ್ಲಿ ಬುಕಿಂಗ್ ಮಾಡುವುದನ್ನು ಶೇ.80ರಷ್ಟು ಕಡ್ಡಾಯಗೊಳಿಸಲಾಗುತ್ತಿದೆ. ಜೊತೆಗೆ ಪ್ರತ್ಯೇಕ ಮೊಬೈಲ್ ಸಂಖ್ಯೆ ನೋಂದಣಿ ಮಾಡಿಕೊಳ್ಳಬೇಕು. ಅಲ್ಲದೆ, ಸಿಲಿಂಡರ್ ಪಡೆಯುವ ವೇಳೆ ಓಟಿಪಿ ಹೇಳಬೇಕು.

ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಪಟೇಲ್ 'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದರು. ಸದ್ಯ ಏಜೆನ್ಸಿಗಳಲ್ಲಿ ಬುಕ್ ಮಾಡುವ ವ್ಯವಸ್ಥೆ ಇದ್ದು, ಇದೀಗ ಮುಂದಿನ ದಿನಗಳಲ್ಲಿ ವೆಬ್‌ಸೈಟ್‌ನಲ್ಲಿ ಬುಕಿಂಗ್ ಮಾಡುವ ವ್ಯವಸ್ಥೆ ಜಾರಿಗೊಳಿಸಲು ತೈಲ ಕಂಪನಿಗಳು ಮುಂದಾಗಿವೆ. ಜೊತೆಗೆ ಗೃಹಬಳಕೆ ಸಿಲಿಂಡರ್ ಪೂರೈಸುವಾಗ ಇರುವಂತೆ ವಾಣಿಜ್ಯ ಸಿಲಿಂಡರ್‌ಗೂ ಓಟಿಪಿ ಕಡ್ಡಾಯಗೊಳಿಸಲಾಗಿದೆ ಎಂದು ತಿಳಿಸಿದರು.

ವಾಣಿಜ್ಯ ಸಿಲಿಂಡರ್ ಖರೀದಿಸಲು ಹೆಚ್‌ಪಿ ಗ್ಯಾಸ್, ಇಂಡೇನ್, ಭಾರತ್ ಗ್ಯಾಸ್ ಸೇರಿದಂತೆ ಮೂರು ತೈಲ ಕಂಪನಿಗಳ ವೆಬ್‌ಸೈಟ್ ಮೂಲಕ ಬುಕಿಂಗ್ ಮಾಡಬೇಕು. ಈ ಹಿಂದೆ ಏಜೆನ್ಸಿಗಳಲ್ಲಿ ಬುಕ್ ಮಾಡಿದ್ದರೆ ಸಾಕಿತ್ತು. ಇದೀಗ ಈ ಹೊಸ ವ್ಯವಸ್ಥೆ ಜಾರಿಗೆ ತರಲಾಗುತ್ತಿದೆ. ಜೊತೆಗೆ ವಾಣಿಜ್ಯ ಸಿಲಿಂಡರ್ ಖರೀದಿಸುವ ಸಂಬಂಧ ಪ್ರತ್ಯೇಕ ಮೊಬೈಲ್ ಸಂಖ್ಯೆ ನೋಂದಣಿ ಮಾಡಬೇಕು. ಈ ಮೊಬೈಲ್ ಸಂಖ್ಯೆಯು ಗೃಹಬಳಕೆ ಸಿಲಿಂಡರ್ ಪಡೆಯುವ ಸಂಬಂಧ ನೋಂದಣಿಯಾಗಿರಬಾರದು.

ಗೃಹಬಳಕೆ ಹಾಗೂ ವಾಣಿಜ್ಯ ಸಿಲಿಂಡರ್ ಎರಡಕ್ಕೂ ಒಂದೇ ಮೊಬೈಲ್ ಸಂಖ್ಯೆ ನೋಂದಣಿ ಮಾಡುವಂತಿಲ್ಲ. ಹಾಗೆ ಮಾಡಿದರೆ ದುರ್ಬಳಕೆ ಎಂದು ಪರಿಗಣಿಸಲಾಗುತ್ತದೆ. ಹಾಗಾಗಿ ಗೃಹಬಳಕೆ ಹಾಗೂ ವಾಣಿಜ್ಯ ಸಿಲಿಂಡರ್ ಸಂಬಂಧ ಪ್ರತ್ಯೇಕ ಮೊಬೈಲ್ ಸಂಖ್ಯೆಗಳನ್ನು ನೋಂದಣಿ ಮಾಡಿಕೊಳ್ಳಬೇಕೆಂದು ತೈಲ ಕಂಪನಿಗಳು ಮಾರ್ಗಸೂಚಿ ಹೊರಡಿಸಿವೆ ಎಂದು ವಿವರಿಸಿದರು.

ಗೃಹಬಳಕೆ ಸಿಲಿಂಡರ್ ಪಡೆಯುವಾಗ ಓಟಿಪಿ ಬರುವಂತೆ ವಾಣಿಜ್ಯ ಸಿಲಿಂಡರ್‌ಗೂ ಓಟಿಪಿ ಬರಲಿದೆ. ಇದು ಐದು ಕೆಜಿ ಸಿಲಿಂಡರ್‌ಗೂ ಅನ್ವಯಿಸಲಿದೆ. ಕಾಳಸಂತೆಯಲ್ಲಿ ಮಾರಾಟಕ್ಕೆ ಕಡಿವಾಣ ಹಾಕಲು ಈ ಕ್ರಮ ವಹಿಸಲಾಗುತ್ತಿದೆ. ಮೇ ತಿಂಗಳಲ್ಲಿ ವಾಣಿಜ್ಯ ಸಿಲಿಂಡರ್ ವಿತರಣೆಯಲ್ಲಿ ಕಡಿಮೆ ಮಾಡಬಹುದು. ಬಿಸಿಲು ಇರುವ ಹಿನ್ನೆಲೆಯಲ್ಲಿ ಹೆಚ್ಚು ಗ್ಯಾಸ್ ಬಳಕೆ ಬೇಕಿಲ್ಲವೆಂಬ ಹಿನ್ನೆಲೆಯಲ್ಲಿ ಈ ರೀತಿಯ ಕ್ರಮ ವಹಿಸಬಹುದು. ಈ ನಿಟ್ಟಿನಲ್ಲಿ ಸಹ ಚಿಂತನೆ ನಡೆಯುತ್ತಿದೆ ಎಂದರು.

ಎಲ್‌ಪಿಜಿ ಸಂಪರ್ಕ ರದ್ದುಪಡಿಸಿಕೊಳ್ಳಬೇಕು: ಪಿಎನ್‌ಜಿ ಪೈಪ್‌ಲೈನ್ ಸಂಪರ್ಕ ಹೊಂದಿರುವವರು ಕೂಡಲೇ ತೈಲ ಕಂಪನಿಗಳ ಏಜೆನ್ಸಿಗಳಿಗೆ ಸಿಲಿಂಡರ್ ವಾಪಸು ಒಪ್ಪಿಸಬೇಕು. ಜೊತೆಗೆ ತಮ್ಮ ಎಲ್‌ಪಿಜಿ ಗ್ಯಾಸ್ ನೋಂದಣಿ ರದ್ದುಪಡಿಸಿಕೊಳ್ಳಬೇಕು. ಈ ಸಂಬಂಧ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಸಹ ಹೊರಡಿಸಿದೆ. ಪೈಪ್‌ಲೈನ್ ಸಂಪರ್ಕ ಹೊಂದಿರುವವರಿಗೆ ನೋಟಿಸ್ ನೀಡಿದ ನಂತರವೂ ಅವರೇ ಒಪ್ಪಿಸಲಿಲ್ಲವೆಂದರೆ ಪೊಲೀಸ್‌ಗೆ ದೂರು ನೀಡಬೇಕೆಂದು ನಿರ್ದೇಶನ ನೀಡಲಾಗಿದೆ. ಪೈಪ್‌ಲೈನ್ ಹಾಗೂ ಪಿಎನ್‌ಜಿ ಸಂಪರ್ಕ ಎರಡನ್ನೂ ಹೊಂದಿರಬಾರದು. ಮೈಸೂರಿನಲ್ಲಿ ಸುಮಾರು 3,500 ಪಿಎನ್‌ಜಿ ಪೈಪ್‌ಲೈನ್ ಸಂಪರ್ಕಗಳು ಇದ್ದು, ಈ ಪೈಕಿ ಬಹುತೇಕ ಮಂದಿ ಏಜೆನ್ಸಿಗಳ ಎಲ್‌ಪಿಜಿ ಸಂಪರ್ಕ ರದ್ದುಪಡಿಸಿಕೊಂಡಿಲ್ಲ ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಗಂಗಾವತಿ ಬಿಜೆಪಿ ಮುಖಂಡನ ಕೊಲೆ ಪ್ರಕರಣ

ಆರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿದ ಕೋರ್ಟ್



ಗಲ್ಲುಶಿಕ್ಷೆಗೆ ಒಳಗಾದ ಅಪರಾಧಿಗಳು

ಕೊಪ್ಪಳ, ಏ.30– ಬಿಜೆಪಿ ಯುವ ಮೋರ್ಚಾದ ನಗರ ಘಟಕದ ಅಧ್ಯಕ್ಷ ವೆಂಕಟೇಶ ಕುರುಬರ್ ಅಲಿಯಾಸ್ ಜೆಎನ್‌ಎನ್ ವೆಂಕಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರು ಜನ ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ಇಲ್ಲಿನ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ ಮಹತ್ವದ ತೀರ್ಪು ಪ್ರಕಟಿಸಿದೆ.

ಪ್ರಕರಣ ಸಂಬಂಧ ವಿಚಾರಣೆ ನಡೆಸಿದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ್ ಅವರು ಶಿಕ್ಷೆ ತೀರ್ಪು ಪ್ರಕಟಿಸಿದರು. ರವಿ, ಮೈಲಾರಿ, ಧನರಾಜ್, ಭೀಮಾ, ಸಲೀಂ ಮತ್ತು ಗಂಗಾಧರ ಗೌಳಿ ಶಿಕ್ಷೆಗೊಳಗಾದ ಅಪರಾಧಿಗಳು.

ಮೊದಲಿಗೆ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಟಿವಿಯ ಫೂಟೇಜ್‌ಗಳನ್ನು ಪರಿಶೀಲಿಸಿದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯ್ಕ್, ಅಪರಾಧಿಗಳು ಈ ಹಿಂದೆ ವಿವಿಧ ಪ್ರಕರಣಗಳಲ್ಲಿ ಭಾಗಿಯಾದ ಹಿನ್ನೆಲೆಯ ಬಗ್ಗೆಯೂ ಪರಿಶೀಲನೆ ನಡೆಸಿದರು.

ಗಂಗಾವತಿಯ ರೈಲ್ವೆ ನಿಲ್ದಾಣದ ಬಳಿ ನಡೆದಿದ್ದ ಮಾರುತಿ ಎಂಬ ಯುವಕನ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ ಪ್ರಕರಣದಲ್ಲಿ ವೆಂಕಟೇಶ ಪ್ರತ್ಯಕ್ಷ ಸಾಕ್ಷಿಯಾಗಿದ್ದರು. ಅಲ್ಲದೇ ಮಾರುತಿ ಚಿಕಿತ್ಸೆಗೆ ಕೊನೆಯವರೆಗೂ ಬೆಂಬಲವಾಗಿ ನಿಂತಿದ್ದ ಎಂಬ ಕಾರಣಕ್ಕೆ ವೆಂಕಟೇಶನನ್ನು ಕೊಲೆ ಮಾಡಿದ್ದೀರಿ. ಸಭ್ಯ ನಾಗರಿಕ ಸಮಾಜದ ಇಂತಹ ಕೃತ್ಯಗಳನ್ನು ಒಪ್ಪುವುದಿಲ್ಲ. ಅಪರಾಧ ಕೃತ್ಯಗಳ ಹಿನ್ನೆಲೆ ಪರಿಗಣಿಸಿ ಗಲ್ಲು ಶಿಕ್ಷೆ ವಿಧಿಸಲಾಗಿದೆ ಎಂದು ನ್ಯಾಯಾಧೀಶರು ತೀರ್ಪು ಪ್ರಕಟಿಸಿದರು.

ವೆಂಕಟೇಶ್ ಅವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆಗೈದ ಪ್ರಕರಣ ಸಂಬಂಧ ಆರು ಜನ ಆರೋಪಿಗಳನ್ನು ದೋಷಿ ಎಂದು ಈ ಹಿಂದೆ ಕೋರ್ಟ್ ತೀರ್ಪು ನೀಡಿ, ಶಿಕ್ಷೆ ಪ್ರಮಾಣ ಕಾಯ್ದಿರಿಸಿತ್ತು. ಅಂತೆಯೇ ಇಂದು ನ್ಯಾಯಾಧೀಶರು, ಆರು ಜನರಿಗೆ ಮರಣದಂಡನೆ ವಿಧಿಸಿ ತೀರ್ಪು ನೀಡಿದ್ದಾರೆ. ಅಪರಾಧಿಗಳು ಅಗತ್ಯವಿದ್ದರೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು ಎಂದು ನ್ಯಾಯಾಧೀಶರು ಸಲಹೆಯಲ್ಲಿ ತಿಳಿಸಿದ್ದಾರೆ ಎಂದು ಸರ್ಕಾರಿ ಅಭಿಯೋಜಕಿ ಎಸ್. ನಾಗಲಕ್ಷ್ಮಿ ಮಾಹಿತಿ ನೀಡಿದರು.

ಅಕ್ಟೋಬರ್ 7 2025 ರ ತಡರಾತ್ರಿ ಊಟ ಮುಗಿಸಿಕೊಂಡು ಸ್ನೇಹಿತರೊಂದಿಗೆ ದ್ವಿಚಕ್ರ ವಾಹನದಲ್ಲಿ ವೆಂಕಟೇಶ ತೆರಳುತ್ತಿದ್ದ ಸಂದರ್ಭದಲ್ಲಿ ಕಾರಿನಲ್ಲಿ ಹಿಂಬಾಲಿಸಿದ ಯುವಕರ ಗುಂಪು, ದ್ವಿಚಕ್ರ ವಾಹನಕ್ಕೆ ಗುದ್ದಿ ಬೀಳಿಸಿದ್ದರು. ಬಳಿಕ ಕೆಳಕ್ಕೆ ಬಿದ್ದ ವೆಂಕಟೇಶನ ಮೇಲೆ ಮಾರಕಾಯುಧಗಳಿಂದ ದಾಳಿ ಮಾಡಿ ಮನಬಂದಂತೆ ಕೊಚ್ಚಿ ಕೊಲೆ ಮಾಡಿದ್ದರು. ತೀವ್ರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದ ವೆಂಕಟೇಶನನ್ನು ಸರ್ಕಾರಿ ಉಪ ವಿಭಾಗ ಆಸ್ಪತ್ರೆಗೆ ಮಧ್ಯರಾತ್ರಿ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದರು.

ನರ್ಸಿಂಗ್ ಸೇವೆ ಅತ್ಯಂತ ಉತ್ತಮವಾದುದು

ಮೈಸೂರು ಜಯದೇವ ವೈದ್ಯಕೀಯ ಅಧೀಕ್ಷಕ ಡಾ. ಸದಾನಂದ ಅಭಿಮತ



ಮೈಸೂರಿನ ಸಿಗ್ಮಾ ನರ್ಸಿಂಗ್ ಕಾಲೇಜು ಮತ್ತು ಅಲೈಡ್ ಸೈನ್ಸ್‌ನಲ್ಲಿ ಪದವಿ ಪ್ರದಾನ ಸಮಾರಂಭ ನಡೆಯಿತು.

ಮೈಸೂರು, ಏ.30(ಎಂಕೆ)– ನರ್ಸಿಂಗ್ ಸೇವೆ ಅತ್ಯುತ್ತಮ ಸೇವೆಯಾಗಿದ್ದು, ಶಿಸ್ತಿನಿಂದ ಕಲಿತ ನರ್ಸಿಂಗ್ ಪದವಿ ಉಜ್ವಲ ಭವಿಷ್ಯಕ್ಕೆ ಸಹಕಾರಿಯಾಗಲಿ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ.ಸದಾನಂದ ತಿಳಿಸಿದರು.

ಮೈಸೂರಿನ ಸಿಗ್ಮಾ ನರ್ಸಿಂಗ್ ಕಾಲೇಜು ಮತ್ತು ಅಲೈಡ್ ಸೈನ್ಸ್‌ನಲ್ಲಿ ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನರ್ಸಿಂಗ್ ಕೆಲಸವನ್ನು ಸೇವಾ ಮನೋಭಾವದಿಂದ ಮಾಡಬೇಕು ಎಂದು ಶುಭಕೋರಿದರಲ್ಲದೆ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ, ಪದವಿ ಮತ್ತು ಪ್ರಶಸ್ತಿ ಪತ್ರವನ್ನು ನೀಡಿದರು.

ಅಲೈಡ್ ಹೆಲ್ತ್ ಸೈನ್ಸ್ ಪ್ರಿನ್ಸಿಪಾಲ್ ಡಾ.ಕೆ ಮಾದಪ್ಪ ಮಾತನಾಡಿ, ಸಿಗ್ಮಾ ನರ್ಸಿಂಗ್ ಕಾಲೇಜಿನಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅಷ್ಟೇ ಉತ್ತಮ ಫಲಿತಾಂಶ ಬರುತ್ತಿರುವುದು ಸಂತೋಷ ತಂದಿದೆ. ಇದರಲ್ಲಿ ಕಾಲೇಜಿನ ಸಿಬ್ಬಂದಿ ವರ್ಗದ ಪರಿಶ್ರಮ ಹಾಗೂ ವಿದ್ಯಾರ್ಥಿಗಳ ಕಲಿಕೆ ಮುಖ್ಯವಾಗಿದೆ ಎಂದು ಶ್ಲಾಘಿಸಿದರು. ಈ ವೇಳೆ ವಿಶ್ವ ಶಾಂತಿ ಸಂಸ್ಥೆಯ ಕಾರ್ಯದರ್ಶಿ ಎನ್.ಬಿ. ಮಹಾಲಿಂಗಯ್ಯ, ಟ್ರಸ್ಟಿಗಳಾದ ಡಾ. ರಾಜೇಶ್ವರಿ ಮಾದಪ್ಪ, ಶ್ರೀಮತಿ ಶೈಲಾ ಶಂಕರ್, ಪ್ರಾಂಶುಪಾಲರಾದ ಪ್ರೊ.ಮಂಜುನಾಥ್ ಮತ್ತಿತರರಿದ್ದರು.

ಐಸಿಎಸ್‌ಇ. ಐಎಸ್‌ಸಿ ಫಲಿತಾಂಶ

ಬಾಲಕಿಯರೇ ಮೇಲುಗೈ; ಶೇ.99 ತೇರ್ಗಡೆ ಫಲಿತಾಂಶ

ನವದೆಹಲಿ, ಏ.30–ಐಸಿಎಸ್‌ಇ, ಐಎಸ್‌ಸಿ ಫಲಿತಾಂಶ 2026: ಭಾರತೀಯ ಶಾಲಾ ಪ್ರಮಾಣಪತ್ರ ಪರೀಕ್ಷೆಗಳ ಮಂಡಳಿ (ಸಿಐಎಸ್‌ಇ) ಇಂದು ಬೆಳಗ್ಗೆ 11 ಗಂಟೆಗೆ ಐಸಿಎಸ್‌ಇ (10ನೇ ತರಗತಿ) ಮತ್ತು ಐಎಸ್‌ಸಿ (12ನೇ ತರಗತಿ) ಫಲಿತಾಂಶಗಳನ್ನು ಪ್ರಕಟಿಸಿದ್ದು, ಐಸಿಎಸ್‌ಇಯಲ್ಲಿ ಶೇ.99.18, ಐಎಸ್‌ಸಿಯಲ್ಲಿ ಶೇ.99.13 ಫಲಿತಾಂಶ ಬಂದಿದೆ

ಹಿಂದಿನಂತೆ ಈ ವರ್ಷವೂ ಬಾಲಕಿಯರು ಬಾಲಕರಿಗಿಂತ ಉತ್ತಮ ಸಾಧನೆ ಮಾಡಿದ್ದಾರೆ. ಐಸಿಎಸ್‌ಇಯಲ್ಲಿ ಹೆಣ್ಣುಮಕ್ಕಳ ಉತ್ತೀರ್ಣ ಪ್ರಮಾಣ ಶೇ.99.46 ಆಗಿದ್ದು, ಶೇ.98.93 ಬಾಲಕರು ತೇರ್ಗಡೆ ಹೊಂದಿದ್ದಾರೆ. ಅದೇ ರೀತಿ ಐಎಸ್‌ಸಿಯಲ್ಲಿ ಶೇ.99.48 ಬಾಲಕಿಯರು, ಶೇ.98.81 ಬಾಲಕರು ತೇರ್ಗಡೆಯಾಗಿದ್ದಾರೆ.

ರಾಜ್ಯಗಳಲ್ಲಿ ಫಲಿತಾಂಶ: ಪ್ರಾದೇಶಿಕವಾಗಿ ಐಎಸ್‌ಸಿಯಲ್ಲಿ ದಕ್ಷಿಣ ಭಾಗದಲ್ಲಿ 99.87 ಶೇಕಡಾ ಉತ್ತೀರ್ಣ ಪ್ರಮಾಣದೊಂದಿಗೆ ಅಗ್ರಸ್ಥಾನದಲ್ಲಿದ್ದು, ಪಶ್ಚಿಮ ಭಾಗ 99.55 ಶೇಕಡಾ ಸಹಿತ ಎರಡನೇ ಸ್ಥಾನದಲ್ಲಿದೆ. ಐಸಿಎಸ್‌ಇ ಯಲ್ಲಿ ಪಶ್ಚಿಮ ಭಾಗ 99.85 ಶೇಕಡಾ ಸಾಧನೆಯೊಂದಿಗೆ ಮುನ್ನಡೆ ಸಾಧಿಸಿದ್ದು, ದಕ್ಷಿಣ ಭಾಗ 99.81 ಶೇಕಡಾ ಮೂಲಕ ಅದರ ಬಳಿಕ ಇದೆ.

ವರ್ಗವಾರು ಫಲಿತಾಂಶ: ಐಸಿಎಸ್‌ಇ ಮತ್ತು ಐಎಸ್‌ಸಿ ಎರಡೂ ಪರೀಕ್ಷೆಗಳಲ್ಲಿಯೂ ಎಲ್ಲಾ ಸಾಮಾಜಿಕ ವರ್ಗಗಳಲ್ಲಿ ಸಮಾನ ಸಾಧನೆ ಕಂಡುಬಂದಿದೆ. ಐಎಸ್‌ಸಿ (12ನೇ ತರಗತಿ) ಪರೀಕ್ಷೆಯನ್ನು 1,553 ಶಾಲೆಗಳಲ್ಲಿ ನಡೆಸಲಾಗಿದ್ದು, ಒಟ್ಟು 1,03,316 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಇವರಲ್ಲಿ 54,118 ಮಂದಿ ಹುಡುಗರು (52.38%) ಮತ್ತು 49,198 ಮಂದಿ ಹುಡುಗಿಯರು (47.62%) ಇದ್ದಾರೆ.

ಐಸಿಎಸ್‌ಇ (10ನೇ ತರಗತಿ) ಪರೀಕ್ಷೆಯಲ್ಲಿ 2,957 ಶಾಲೆಗಳಿಂದ 2,58,721 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಇವರಲ್ಲಿ 1,37,503 ಮಂದಿ ಬಾಲಕರು (53.15%) ಮತ್ತು 1,21,218 ಮಂದಿ ಬಾಲಕಿಯರು (46.85%) ಇದ್ದಾರೆ.

ಮರುಮೌಲ್ಯಮಾಪನ ಮತ್ತು ಸುಧಾರಣಾ ಪರೀಕ್ಷೆಗಳು: ವಿದ್ಯಾರ್ಥಿಗಳು ಮೇ 1ರಿಂದ ಮೇ 4, 2026ರವರೆಗೆ ಸಿಐಎಸ್‌ಸಿಇ ಸೇವಾ ಪೋರ್ಟಲ್ ಮೂಲಕ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು. ಹಾಗೆಯೇ, ಅಂಕಗಳನ್ನು ಸುಧಾರಿಸಿಕೊಳ್ಳಲು ಬಯಸುವವರು ಮೇ 8ರಿಂದ ಮೇ 14ರವರೆಗೆ ಸುಧಾರಣಾ ಪರೀಕ್ಷೆಗಳಿಗೆ ನೋಂದಾಯಿಸಬಹುದು. ಈ ಪರೀಕ್ಷೆಗಳು ಜೂನ್ 15, 2026ರಿಂದ ಆರಂಭವಾಗಲಿದ್ದು, ಫಲಿತಾಂಶಗಳು ಜುಲೈ ಕೊನೆಯ ವಾರದಲ್ಲಿ ಪ್ರಕಟವಾಗುವ ಸಾಧ್ಯತೆ ಇದೆ.

'ಮಕ್ಕಳ ಲೋಕ' ಶಿಬಿರ ಸಮಾರೋಪ



'ಮಕ್ಕಳ ಲೋಕ–2026' ಶಿಬಿರದ ಸಮಾರೋಪದ ವೇಳೆ ಮಕ್ಕಳು ನಾಟಕ ಪ್ರದರ್ಶಿಸಿದರು.

ಮೈಸೂರು, ಏ.30(ವಿವಿಹೆಚ್)– ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ನೆನಪಿನಾರ್ಥ ಆಯೋಜಿಸಿದ್ದ 'ಮಕ್ಕಳ ಲೋಕ–2026' ಶಿಬಿರದ ಸಮಾರೋಪ ಸಮಾರಂಭ ಗುರುವಾರ ನಡೆಯಿತು.


ನಗರದ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಬಿರದ ಮಕ್ಕಳು 'ನೆರೆಹೊರೆ', 'ನಮ್ಮ ಪರಿಸರ', 'ಕೌರವನ ಗರ್ವಭಂಗ' ನಾಟಕಗಳು, ಯೋಗನೃತ್ಯ, ಆದಿವಾಸಿ ನೃತ್ಯ ಮತ್ತು ಗೀತ ಗಾಯನವನ್ನು ಪ್ರಸ್ತುತಪಡಿಸಿದರು.

ಇದಕ್ಕೂ ಮುನ್ನ ರಂಗ ನಿರ್ದೇಶಕ ಮೈಮ್ ರಮೇಶ್ ಮಾತನಾಡಿ, ಇಂದಿನ ಮಕ್ಕಳಿಗೆ ಸಂಸ್ಕೃತಿ ಮತ್ತು ಸಂಸ್ಕಾರ ಗೊತ್ತೇ ಇಲ್ಲ. ಚೆನ್ನಾಗಿ ಓದಬೇಕು ನಂತರ ಉದ್ಯೋಗ ಪಡೆಯಬೇಕು ಎಂಬುದನ್ನು ಮಾತ್ರ ಮಕ್ಕಳ ತಲೆಯಲ್ಲಿ ತುಂಬಲಾಗುತ್ತಿದೆ. ಇದಕ್ಕಾಗಿ ಬಾಲ್ಯದಿಂದಲೇ ಒತ್ತಡ ಹಾಕಲಾಗುತ್ತಿದೆ. ಪರಿಣಾಮ ಮಕ್ಕಳು ಮಾನಸಿಕವಾಗಿ ಬಹಳ ನೋವು ತಿನ್ನುತ್ತಿದ್ದಾರೆ. ಮಕ್ಕಳ ಮನೋವಿಕಾಸದ ಬಗ್ಗೆ ಪೋಷಕರಾಗಲೀ ಅಥವಾ ಶಿಕ್ಷಕರಾಗಲಿ ಯೋಚಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ರಂಗಭೂಮಿಯು ಸಾಮಾಜಿಕ ಚಿಂತನೆಗೋಸ್ಕರ ಹುಟ್ಟಿತು. ಹೋರಾಟಗಳು, ಜನಪರ ಚಳವಳಿಗಳು ಹೆಚ್ಚು ಪ್ರಸಿದ್ಧಿ ಪಡೆಯಲು ಕಾರಣವಾದದ್ದು ರಂಗಭೂಮಿ. ಇನ್ನು ಮುಂದೆ ಮಕ್ಕಳ ರಂಗಭೂಮಿ ಹುಟ್ಟಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಆ ಮೂಲಕ ಸಾಮಾಜಿಕ ಬದ್ಧತೆ, ದೇಶದ ಜವಾಬ್ದಾರಿ, ಸಹಬಾಳ್ವೆಯ ಪಾಠವನ್ನು ಮಕ್ಕಳಿಗೆ ಬೋಧಿಸಬೇಕಾಗುತ್ತದೆ ಎಂದು ಅಭಿಪ್ರಾಯಿಸಿದರು.

ಈ ವೇಳೆ ಹಿರಿಯ ರಂಗ ನಿರ್ದೇಶಕ ಜನಾರ್ಧನ್ ಜನ್ನಿ, ಪತ್ರಕರ್ತೆ ರಶ್ಮಿ ಕೋಟಿ, ಶಿಬಿರ ಆಯೋಜಕರು ಹಾಗೂ ರಂಗ ನಿರ್ದೇಶಕರಾದ ಕೆ.ಆರ್.ಸುಮತಿ, ರೊಬೆನ್ ಸಂಜಯ್, ವಿದೂಷಿ ಬಿ.ಎಸ್. ಹರಿಣಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್)ದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯಿಂದ ಇತ್ತೀಚಿಗೆ ನಿವೃತ್ತರಾದ ಕೆ.ಎಂ.ಮುನಿಗೋಪಾಲ್ ರಾಜು ಅವರಿಗೆ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಬೃಹತ್ ಫೋಟೋ ನೀಡಿ, ಬಿಜೆಪಿ ಮುಖಂಡರು ಅಭಿನಂದಿಸಿದರು. ಬಿಜೆಪಿ ಸಹಕಾರ ಪ್ರಕೋಷ್ಠದ ಎಸ್. ಶ್ರೀನಿವಾಸ್, ನಗರ ಉಪಾಧ್ಯಕ್ಷ ಈ.ರಮೇಶ್, ಸಹ ವಕ್ತಾರ ಕೆ.ದೇವರಾಜು, ಮುಖಂಡರಾದ ಡಾ.ಶಿವರಾವ್, ಕಿರಣ್ ಮಾದೇಗೌಡ, ಜಗದೀಶ್ ಮತ್ತು ದರ್ಶನ್ ಇದ್ದರು.

ಮೈಸೂರು ನಗರ ಸಾರಿಗೆಯ 77 ಬಸ್‌ಗಳು ಗುಜರಿಗೆ

● ಹರಾಜು ಪ್ರಕ್ರಿಯೆಯಲ್ಲಿ ಖರೀದಿಸಿದ ಬೆಂಗಳೂರು ಸಂಸ್ಥೆ ● ಕುವೆಂಪುನಗರ ಬಸ್ ಡಿಪೋದಲ್ಲಿನ ಹಳೆ ಬಸ್‌ಗಳ ಸ್ಥಳಾಂತರ



ಮೈಸೂರಿನ ಕುವೆಂಪುನಗರದಲ್ಲಿರುವ ನಗರ ಸಾರಿಗೆ ಸಂಸ್ಥೆಯ ಡಿಪೋದಲ್ಲಿ ನಿಲ್ಲಿಸಲಾಗಿದ್ದ ಸ್ಕ್ರ್ಯಾಪ್ ಬಸ್‌ಗಳನ್ನು ವಿಲೇವಾರಿ ಮಾಡುತ್ತಿರುವುದು.

ಕೇಂದ್ರ ಸಂಸ್ಥೆಯಿಂದ ಹರಾಜು

ಕೇಂದ್ರ ಸರ್ಕಾರದ ನಿಯಮಾನುಸಾರ 15 ವರ್ಷಗಳ 77 ಹಳೆಯ ಬಸ್‌ಗಳನ್ನು ಗುಜರಿಗೆ ಹಾಕಲು ನಿರ್ಧರಿಸಿ, ಕುವೆಂಪುನಗರದ ಡಿಪೋದಲ್ಲಿ ನಿಲ್ಲಿಸಲಾಗಿತ್ತು. ಕೆಲ ಮಾನದಂಡ ಅನುಸರಿಸಿ, ಸಾರಿಗೆ ಸಂಸ್ಥೆಯ ಕೇಂದ್ರ ಕಚೇರಿ ವತಿಯಿಂದ ಹರಾಜು ಪ್ರಕ್ರಿಯೆ ನಡೆಸಲಾಗಿದ್ದು, ಬಸ್ ಖರೀದಿಸಿದ ಸಂಸ್ಥೆ ಹಳೆ ಬಸ್‌ಗಳನ್ನು ಕೊಂಡೊಯ್ಯುತ್ತಿದೆ.

- ಹೆಚ್.ಟಿ.ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

ಮೈಸೂರು, ಏ.30(ಎಂಟಿವೈ)–ಮೋಟಾರ್ ವಾಹನ ಕಾಯ್ದೆ ಅನುಸಾರ 15 ವರ್ಷಗಳು ಪೂರೈಸಿದ ನಗರ ಸಾರಿಗೆ ವಿಭಾಗದ 33 ವೋಲ್ವೋ ಸೇರಿದಂತೆ 77 ಬಸ್‌ಗಳನ್ನು ನಿಯಮಾನುಸಾರ ಹರಾಜು ಮೂಲಕ ವಿಲೇವಾರಿ ಮಾಡಲಾಯಿತು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೋಟಾರ್ ವಾಹನ ಕಾಯ್ದೆ ಅನ್ವಯ 15 ವರ್ಷ ಪೂರೈಸಿರುವ ವಾಹನಗಳನ್ನು ಗುಜರಿಗೆ ಹಾಕಬೇಕಾಗಿದೆ. ಅದರಂತೆ ಮೈಸೂರು ನಗರ ಸಾರಿಗೆ ವಿಭಾಗದಲ್ಲಿ ಕಳೆದ ವರ್ಷ ಗುಜರಿಗೆ ಹಾಕಲಾಗಿದ್ದ ನಗರ ಸಾರಿಗೆ ವಿಭಾಗದ 33 ವೋಲ್ವೋ ಬಸ್ ಒಳಗೊಂಡಂತೆ ಒಟ್ಟು 77 ಬಸ್‌ಗಳನ್ನು ಕಳೆದ ವಾರ ಹರಾಜು ಹಾಕಲಾಗಿತ್ತು. ಈ ಪ್ರಕ್ರಿಯೆಯಲ್ಲಿ ಬೆಂಗಳೂರು ಮೂಲದ ಸಂಸ್ಥೆಯೊಂದು ಈ ಬಸ್‌ಗಳನ್ನು ಒಂದು ಕೋಟಿ ರೂ.ಗೆ ಖರೀದಿಸಿದೆ.

ಹರಾಜು ಬಳಿಕ ಕೆಲ ದಾಖಲೆಗಳು ಕೈ ಸೇರುತ್ತಿದ್ದಂತೆ ಗುತ್ತಿಗೆ ಪಡೆದ ಸಂಸ್ಥೆ ಪ್ರತಿನಿಧಿಗಳು ಕ್ರೇನ್ ಮೂಲಕ ಕುವೆಂಪು ನಗರ ಬಸ್ ಡಿಪೋ ಆವರಣದಲ್ಲಿ ಕಳೆದ ಒಂದು ವರ್ಷದಿಂದ ಒಂದೆಡೆ ನಿಲ್ಲಿಸಿದ್ದ ಹಳೆ ಬಸ್‌ಗಳನ್ನು ಕ್ರೇನ್‌ನಲ್ಲಿ ಸ್ಥಳಾಂತರ ಮಾಡಲಾಯಿತು.

ರಸ್ತೆಯಲ್ಲೇ ನಿಲುಗಡೆ; ಸಂಚಾರಕ್ಕೆ ತೀವ್ರ ಅಡ್ಡಿ



ಮೈಸೂರು: ವಿಲೇವಾರಿ ಮಾಡಲಾಗಿರುವ ನಗರ ಸಾರಿಗೆ ಹಳೆ ಬಸ್ಸುಗಳನ್ನು ರಸ್ತೆಯಲ್ಲೇ ನಿಲ್ಲಿಸಿರುವ ಪರಿಣಾಮ ವಾಹನ ಸಂಚಾರಕ್ಕೆ ತೀವ್ರ ಅಡ್ಡಿಯಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ವಿಲೇವಾರಿ ಮಾಡಿ ಸ್ಕ್ರ್ಯಾಪ್ ಡೀಲರ್‌ಗೆ ಹಸ್ತಾಂತರಿಸಲಾಗಿರುವ ಬಸ್‌ಗಳನ್ನು ಕುವೆಂಪುನಗರ ಡಿಪೋಯಿಂದ ಕ್ರೇನ್ ಮೂಲಕ ತಂದು ವಿವೇಕಾನಂದ ವೃತ್ತದಿಂದ ಶ್ರೀರಾಂಪುರ 2ನೇ ಹಂತದ ನಾಯ್ಡು ಸ್ಟೋರ್ ವರೆಗೆ ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದೆ. ಇದರಿಂದ ಸಾರ್ವಜನಿಕರ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಅಲ್ಲದೆ ಬಸ್ ಮರೆಯಲ್ಲಿ ಹಾದು ಬರುವ ವಾಹನಗಳು ಕಾಣದೆ ಅಪಘಾತಗಳೂ ಸಂಭವಿಸುತ್ತಿವೆ. ವ್ಯಾಪಾರಕ್ಕೂ ಇದರಿಂದ ತೊಂದರೆಯಾಗಿದೆ ಎಂದು ಜನ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್, ಕೇಂದ್ರ ಸರ್ಕಾರದ ನಿಯಮಾನುಸಾರ 77 ಬಸ್‌ಗಳನ್ನು ವಿಲೇವಾರಿ ಮಾಡಿದ್ದು, ಸದ್ಯ 48 ವಾಹನಗಳನ್ನು ಡೀಲರ್‌ಗೆ ಹಸ್ತಾಂತರಿಸಲಾಗಿದೆ. ಅವುಗಳನ್ನು ಶ್ರೀರಂಗಪಟ್ಟಣ ಬಳಿಕ ಸ್ಕ್ರ್ಯಾಪಿಂಗ್ ಯಾರ್ಡ್‌ಗೆ ಸಾಗಿಸುತ್ತಾರೆ. ಇದಕ್ಕೆ ಬಳಸುವ ಎರಡು ವಾಹನಗಳು ದುರಸ್ತಿಗೆ ಬಂದಿರುವುದರಿಂದ ಸ್ವಲ್ಪ ವಿಳಂಬವಾಗಿದೆ. ಒಂದೆರಡು ದಿನಗಳಲ್ಲಿ ಎಲ್ಲಾ ಬಸ್‌ಗಳನ್ನೂ ತೆರವು ಮಾಡುವುದಾಗಿ ಡೀಲರ್ ತಿಳಿಸಿದ್ದಾರೆ ಎಂದರು.

ಹಗಲಲ್ಲಿ ಕನಿಷ್ಠ 7 ಗಂಟೆ ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಸೆಸ್ಕ್ ಕಚೇರಿ ಮುಂದೆ ರೈತರ ಪ್ರತಿಭಟನೆ



ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿ ಎದುರು ಕರ್ನಾಟಕ ರಾಜ್ಯ ರೈತ ಸಂಘ ಮೈಸೂರು ತಾಲೂಕು ಘಟಕದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಏ.30(ಎಂಕೆ)– ಹಗಲಿನಲ್ಲಿ ಕನಿಷ್ಠ 7 ಗಂಟೆ ವಿದ್ಯುತ್ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಮೈಸೂರು ತಾಲೂಕು ಘಟಕದ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಪ್ರಧಾನ ಕಚೇರಿ ಎದುರು ಜಮಾಯಿಸಿದ ರೈತರು, ಚೆಸ್ಕಾಂ ಹಾಗೂ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು.

ರಾತ್ರಿ ವೇಳೆ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಪೂರೈಕೆ ಮಾಡುವುದರಲ್ಲಿ ಕೊರತೆಯಾದರೂ ಹಗಲಿನಲ್ಲಿ ಅಡಚಣೆ ರಹಿತವಾಗಿ ಕನಿಷ್ಠ 7 ಗಂಟೆಗಳ ಕಾಲ ವಿದ್ಯುತ್ ನೀಡಬೇಕು. ಕೆಟ್ಟು ಹೋಗಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ತುರ್ತಾಗಿ ಸರಿಪಡಿಸಬೇಕು. ಸೋಲಾರ್ ಸೌಲಭ್ಯವನ್ನು ಪಡೆದುಕೊಳ್ಳಲು ಅವಕಾಶ ನೀಡಬೇಕು. ಜೋತು ಬಿದ್ದಿರುವ ವೈಯರ್‌ಗಳು ಮತ್ತು ಶಿಥಿಲಗೊಂಡಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಬೇಕು. ರಾತ್ರಿ ವೇಳೆ ಸಿಂಗಲ್ ಫೇಸ್ ವಿದ್ಯುತ್ ಪೂರೈಕೆ ಮಾಡಬೇಕು. ಮೊದಲಿನಂತೆ ಪಂಪ್‌ಸೆಟ್‌ಗಳ ಅಕ್ರಮ–ಸಕ್ರಮ ಜಾರಿಗೊಳಿಸಿ, ಠೇವಣಿ ಹಣ ಕಟ್ಟಿಸಿಕೊಳ್ಳಬೇಕು ಎಂದು ಆಗ್ರಹಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರ್ ಕುಮಾರ್ ಮಾತನಾಡಿ, ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ನೀಡದೆ ರೈತರು ಕಂಗಾಲಾಗಿದ್ದಾರೆ. ಇದರಿಂದಾಗಿ ಬಹುತೇಕ ಬೆಳೆಗಳು ಹಾಳಾಗುತ್ತಿವೆ. ಗ್ರಾಮೀಣ ಭಾಗದ ಅನೇಕ ರೈತರು ಕೃಷಿಯನ್ನೇ ಅವಲಂಬಿಸಿದ್ದು, ಬೆಳೆ ನಾಶದಿಂದಾಗಿ ತೊಂದರೆಗೆ ಸಿಲುಕುವಂತಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಳಿಕ ಸ್ಥಳಕ್ಕಾಗಮಿಸಿದ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಎಂ.ಎಸ್.ಅರ್ಚನ ಪ್ರತಿಭಟನಾಕಾರರ ಸಮಸ್ಯೆಗಳನ್ನು ಆಲಿಸಿ, ಮನವಿ ಸ್ವೀಕರಿಸಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು. ಈ ವೇಳೆ ಸೆಸ್ಕ್ ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಸುನೀಲ್, ಮುಖ್ಯ ಇಂಜಿನಿಯರ್ ಎಲ್.ಲೋಕೇಶ್ ಕಾರ್ಯಪಾಲಕ ಇಂಜಿನಿಯರ್‌ಗಳಾದ ಅನಿತಾ, ಸಂದೀಪ್, ಅಶೋಕ್, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಚಿಕ್ಕನಹಳ್ಳಿ ಪೈ. ವೆಂಕಟೇಶ್, ಆನಂದೂರು ಪ್ರಭಾಕರ್, ಮಂಡಕಳ್ಳಿ ಮಹೇಶ್, ಕಲ್ಲೂರು ನಾಗನಹಳ್ಳಿ ಚಂದ್ರಶೇಖರ್, ಬಸಪ್ಪನಾಯಕ್, ಮೈದನಹಳ್ಳಿ ಮಹೇಶ್ ಮತ್ತಿತರರಿದ್ದರು.

SEMI COMMERCIAL SITE FOR SALE

40x83 West Facing (40 feet Road)
Semi commercial site for sale at Hebbal industrial housing area near Skanray Technologies.
Suitable for Service Apartment

Contact : MYSORE ESTATES
Vishwanath Gowda
Call : 95909 11111

SITE FOR SALE

40x60 West South corner, near to ring road, Somanathnagar Dattagalli, Mysuru

9035525218

DTCP Approved Sites @ Just ₹.1500/- per sq.ft Bogadi Road

CALL : 9845771177

Still Doing Work Manually?

Automate with AI & Web Apps
DStreetAI

70195 37663
www.dstreetai.diy
info@dstreetai.diy

SITE FOR SALE

36x62 South West Corner Site for sale at MUDA Employees Layout attached to Karthika Layout Ramakrishna nagar

Contact: Mysore Estates
Vishwanath Gowda
Call: 9590911111

ಕಳೆದಿದೆ

ಮುಡಾ ಸೈಟ್ ನಂ. 8355, 9x12 ಅಳತೆಯ ವಿಜಯನಗರ 4ನೇ ಹಂತ, ನಿವೇಶನದ ಮುಡಾ ಖಾತೆ ಕಳೆದಿದೆ ಸಿಕ್ಕಿದಲ್ಲಿ ಸಂಪರ್ಕಿಸಿ

9611460634

ಆರೋಗ್ಯಕರವಾಗಿ ತಿನ್ನಿ, ಪ್ರತಿದಿನ

ತಾಜಾ ಸಸ್ಯಾಹಾರಿ ಊಟ ಮತ್ತು ರಾತ್ರಿ ಊಟ ನಿಮ್ಮ ಮನೆ ಬಾಗಿಲಿಗೆ. ಕಸದ ಆಹಾರ ಇಲ್ಲ. ಕೃತಕ ವಸ್ತುಗಳಿಲ್ಲ. ಕೇವಲ ಒಳ್ಳೆಯ ಆಹಾರ.

ನ್ಯೂಟ್ರಿಬಾಕ್ಸ್, ಮೈಸೂರು

Mob: 96060 34391

ಪ್ರಮಾಣ ಪತ್ರ

ಸತ್ಯಾನಂದ .ಎಸ್ S/o ಡಿ. ಸಾಮ್ಯುಲ್ ಆದ ನಾನು ನಂ. 167. 3ನೇ ಮೇನ್, ಸುಭಾಷ್‌ನಗರ, ಮೈಸೂರು–570007 ಇಲ್ಲಿ ವಾಸವಿದ್ದು. ನನ್ನ ಪತ್ನಿಯ ಆಧಾರ್ ಕಾರ್ಡ್, ಪಾನ್ ಕಾರ್ಡ್ ಮತ್ತು ಇತರೆ ದಾಖಲಾತಿ ಗಳಲ್ಲಿ ಅವರ ಹೆಸರು ಮಂಜುಳಾ ಸತ್ಯಾನಂದ ಎಂದು ನಮೂದಾ ಗಿರುತ್ತದೆ. ಆದರೆ ನನ್ನ ಫ್ಯಾಮಿಲಿ ಪೆನ್ಷನ್ ಪೇಮೆಂಟ್ ಆರ್ಡರ್‌ನಲ್ಲಿ ನನ್ನ ಪತ್ನಿಯ ಹೆಸರು ಗ್ಲಾಡಿಯಸ್ ಸತ್ಯಾನಂದ ಎಂದಾಗಿರುತ್ತದೆ. ಈ ಮೇಲಿನ ಹೆಸರುಗಳಾದ ಮಂಜುಳಾ ಸತ್ಯಾನಂದ ಹಾಗೂ ಗ್ಲಾಡಿಯಸ್ ಸತ್ಯಾನಂದ ಎರಡೂ ಹೆಸರುಗಳೂ ನನ್ನ ಪತ್ನಿಗೆ ಸೇರಿದವುಗಳಾಗಿದ್ದು. ಒಂದೇ ವ್ಯಕ್ತಿಯಾಗಿರುತ್ತಾರೆ. ಎಂದು ನೋಟರಿ ಮಹೇಶ್ ಪ್ರಸಾದ್ .ಡಿ ಸಮ್ಮುಖದಲ್ಲಿ ಪ್ರಮಾಣೀ ಕರಿಸುತ್ತೇನೆ. ಸಹಿ/– ಸತ್ಯಾನಂದ .ಎಸ್

50x80 Site for sale

50x80 South Facing (40 feet Road)
Site for sale at Vishwaprajna Layout, RT Nagar, Near Nypunya School.

Contact : MYSORE ESTATES
Vishwanath Gowda
Call : 95909 11111

RBM College

Weekend Bakery Classes for Beginners, Enterpreneurs, Home Bakers, Senior Citizens, Cafe Owners Earning Potential upto 1 Lakh

9886654463

VARUNA MEADOWS

MANAGED FARM LAND
Just 36 Lakhs Onwards
Doddakaturu, Mysore
20Kms from Palace
9422-799-246

ಬೇಕಾಗಿದ್ದಾರೆ

Receptionist ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
Computer Knowledge must
ಸಂಬಳ 25000-30000/-
Ph. 7406 369 369

Xuv 500 FOR SALE

2014 W6 model in mint condition.
Done 1.80 Lakh kms.
Call owner
99002-01234

9ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ಶ್ರೀ ಮಹದೇವು
(ಲೇಟ್ ಕರಿ ಚೆನ್ನಪ್ಪನ ಬಸಪ್ಪನ ಮಗ, ಕೆ.ಜಿ.ಕೊಪ್ಪಲು)

ಇಂತಿ ದು:ಖತಪ್ತರು: ಪತ್ನಿ ಪುಟ್ಟಮ್ಮ ಹಾಗೂ ಕುಟುಂಬವರ್ಗದವರು ಕೆ.ಜಿ.ಕೊಪ್ಪಲ್ ಮೈಸೂರು

ಅಭಿನಂದನೆಗಳು



ವಿಶಾಲಿನಿ .ಎಸ್
10ನೇ ತರಗತಿ
Marks: 612/625 (98%)
ಸಪ್ತಸ್ವರ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಬಿ.ಎಂ. ಶ್ರೀ ನಗರ, ಮೈಸೂರು
ಅಭಿನಂದಿಸುವವರು: ಸಪ್ತಸ್ವರ ಶಾಲೆಯ ಆಡಳಿತ ಮಂಡಳಿ, ಮುಖ್ಯಶಿಕ್ಷಕರು ಹಾಗೂ ಶಿಕ್ಷಕವೃಂದ

WANTED

1. Course Counsellors
2. Telecallers- 10 vacancy.
3. Marketing Executives.
4. Accountants - B.Com.

Min 3- 5 yrs experience in training institutions only.
Excellent Salary. Sarswatipuram
Mob: 7406113888

SITE FOR SALE

30x68 South facing site for sale at Nagalakshmi layout Dattagalli near Spandana hospital and Rotary school. Suitable for immediate construction. Contact:

Mysore Estates
Vishwanath Gowda
Cell: 95909 11111

RAINBOW PUBLIC SCHOOL

Affiliated to CBSE

WANTED
LADY PRIMARY TEACHER
Quali : Degree with B.Ed., Experience is preferred English fluency is a must.
Send CV to : hrmysorerps@gmail.com
Call : 97319 37438
14/3, Off. Bogadi - Gaddige Road, M.K. Hally, Mysore.

SCHOOL 10X

CREATED BY INDUS
ENABLED BY MALAVALLI

10X ಇಂಟರ್‌ನ್ಯಾಷನಲ್ ಸ್ಕೂಲ್, ಮೈಸೂರು
ಬೇಸಿಗೆ ಶಿಬಿರ

ಈ ಬೇಸಿಗೆಯ ಸಮಯದ 3 ವಾರಗಳಲ್ಲಿ ನಿಮ್ಮ ಸಾಮರ್ಥ್ಯವನ್ನು 10 ಪಟ್ಟು ಹೆಚ್ಚಿಸಿ



ಯೋಗ | ನೃತ್ಯ | ಕಲೆ ಮತ್ತು ಕರಕುಶಲ | ಚದುರಂಗ | ರೂಬಿಕ್ಸ್ ಕ್ಯೂಬ್
ವಿದೇಶಿ ಭಾಷೆಗಳ ಮೂಲಗಳು (ಫ್ರೆಂಚ್/ಸ್ಪ್ಯಾನಿಷ್) | ರೊಬೊಟಿಕ್ಸ್ & ಎಲೆಕ್ಟ್ರಾನಿಕ್ಸ್

ಈ ಬೇಸಿಗೆಯ ದಿನಗಳನ್ನು ವ್ಯರ್ಥಗೊಳಿಸದೆ ನಿಮ್ಮ ಸಾಮರ್ಥ್ಯವನ್ನು ವೃದ್ಧಿಸಿ

ಈಗಲೇ ನೋಂದಾಯಿಸಿ
ಮೇ 4, 2026 ರಂದು ಪ್ರಾರಂಭವಾಗುತ್ತದೆ
6 ರಿಂದ 10 ನೇ ತರಗತಿಗಳಿಗೆ ತೆರೆಯಲಾಗಿದೆ
ರೂ. 3,500/- +18% ಜಿಎಸ್‌ಟಿ
15 ದಿನಗಳವರೆಗೆ ಒಟ್ಟಾರೆ ನೋಂದಣಿ ಶುಲ್ಕ

+91 82966 08340/+91 91873 63687 | www.10xmysuru.org
ನಂ. 11, 11ಎ, ಮಾನಂತವಾಡಿ ರಸ್ತೆ, ವಿದ್ಯಾರಣ್ಯಪುರ, ಮೈಸೂರು

ಉದ್ಯೋಗಾವಕಾಶ!

ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್

ಮಾರಾಟ ವಿಭಾಗದಲ್ಲಿ ಕನಿಷ್ಟ 2 ವರ್ಷ ಅನುಭವವಿರುವವರಿಗೆ ಆದ್ಯತೆ.
ಕನಿಷ್ಠ ವಿದ್ಯಾರ್ಹತೆ: ದ್ವಿತೀಯ ಪಿಯುಸಿ

ಗ್ರಾಹಕ ಸಂಪರ್ಕ ವ್ಯವಸ್ಥಾಪಕ

ಕನಿಷ್ಟ 2 ವರ್ಷ ಅನುಭವವಿರುವವರಿಗೆ ಆದ್ಯತೆ.
ಇಂಗ್ಲೀಷ್‌ನಲ್ಲಿ ಸರಾಗವಾಗಿ ಮಾತನಾಡುವಂತಿರಬೇಕು

ನೇರ ಸಂದರ್ಶನದ ದಿನಾಂಕ : 3ನೇ ಮೇ 2026
ಸಮಯ: ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ರವರೆಗೆ


ಮೋಹನ್ ಭಂಡಾರ್®
ಸೂಪರ್ ಮಾರ್ಕೆಟ್
ಸಯ್ಯಾಜಿ ರಾವ್ ರಸ್ತೆ, ಮೈಸೂರು – 01
Email your Resume to
mohanbhandar@gmail.com

BUSINESS AND CAREER OPPORTUNITY

Fantastic Opportunity for Those who are Having Zeal and Energy to Earn Monthly Income. Join Hands with the Leading Banking Group of India to Explore the Unlimited opportunity towards creating an Income to have a Better life Style. Exclusive for Retired I Senior Citizen | NRI | Business Professional and House Wives (35 Years and Above) Attractive Salary PF and Medical Benefit Will be Provided Presentation at 11 am on 05th Tuesday May 2026 One call My change your life

9243502136 / 9886307909

3ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಮಂಜುಳಾ ಬಸವರಾಜು
ಬೋಗಾದಿ ಉತ್ತರ, ಮೈಸೂರು
ನಿಧನ: 01.05.2023
ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತಿ: ಶ್ರೀ ಆರ್. ಬಿ ಬಸವರಾಜು, ವಕೀಲರು, ಮೈಸೂರು. ಶ್ರೀ ಬಿ. ಅಭಿಷೇಕ್ ಮತ್ತು ಬಿ. ಕಾವ್ಯ, ಮಕ್ಕಳು, ಶ್ರೀಮತಿ ಶ್ರೀಲಕ್ಷ್ಮಿ ಸೊಸೆ, ಕು॥ ಮಧುರಿಮ ಮತ್ತು ಕು॥ ನಿಹಾರಿಕ ಮೊಮ್ಮಕ್ಕಳು ಹಾಗೂ ಕುಟುಂಬವರ್ಗ ಮತ್ತು ಬಂಧುಮಿತ್ರರು

WANTED

1) Plant Supervisor / Manager
2) Field Executives with Two Wheeler
3) Office Staff with Computer Operating Skills


WhatsApp your Resume to
98453-15102
No Calls Entertained

ಮೈಸೂರು ಮಿತ್ರ 47

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

50ನೇ ವರ್ಷದ ಪುಣ್ಯಸ್ಮರಣೆ



ದಿ॥ ಶ್ರೀ ತಮ್ಮಯ್ಯ ನವರು ಮತ್ತು ಶ್ರೀಮತಿ ಜಯಮ್ಮ

ಜೀವಾತ್ಮವು ಪರಮಾತ್ಮನಲ್ಲಿ ವಿಲೀನವಾಗುವುದೇ ಜೀವನದ ಸಾಕ್ಷಾತ್ಕಾರ. ದಿವಂಗತರ ಆತ್ಮಕ್ಕೆ ಶಾಂತಿಕೋರುವ ಕುಟುಂಬವರ್ಗದವರು:
ಟಿ ಕರಿಯಪ್ಪ ಮತ್ತು ಸಹೋದರರು ಹಾಗೂ ಸಹೋದರಿಯರು, ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು ಹಾಗೂ ಸಮಸ್ತ ಹಾಗೂ ಸರಗೂರು ಕುಟುಂಬ ವರ್ಗ.
ದಿನಾಂಕ :–03/05/2026
ಸ್ಥಳ: ಮಾಸ್ತಮ್ಮ ದೇವಸ್ಥಾನದ ಪಕ್ಕ, ಸಂತೆಮಾಳ ಸರಗೂರು.

ವೈಕುಂಠ ಸಮಾರಾಧನೆ ಆಹ್ವಾನ



ಶ್ರೀಯುತ ಎಂ.ಸಿ.ಮಹದೇವ್

ಇವರು ದಿನಾಂಕ 21–04–2026 ಮಂಗಳವಾರ ದೈವಾಧೀನ ರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ವೈಕುಂಠ ಸಮಾರಾಧನೆ ಕಾರ್ಯವನ್ನು ದಿನಾಂಕ 01–05–2026 ಶುಕ್ರವಾರ ಮಧ್ಯಾಹ್ನ 12.15ಕ್ಕೆ ಸ್ವಗೃಹ # 1139, 4/10 ನೇ ಕ್ರಾಸ್, 'ಇ' & 'ಎಫ್' ಬ್ಲಾಕ್, 2ನೇ ಹಂತ, ರಾಮಕೃಷ್ಣನಗರ ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ
ಭೋಜನ: ಮಧ್ಯಾಹ್ನ 1.00 ಗಂಟೆಗೆ ಸ್ಥಳ: ಸ್ವಗೃಹ

ದುಃಖತಪ್ತರು: ಮೃತರಪತಿ ಮತ್ತು ಮಕ್ಕಳು, ಸಹೋದರರು, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

PUBLIC NOTICE

Notice is hereby given that SMT. DIVYA JYOTHI. C.M., wife of SRI. LAKSHMAN GOWDA. H.K. has agreed to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my office, situated at DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE 570002, within 10 (Ten) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

ALL THAT PIECE AND PARCEL OF Residential Vacant Site No. 37-4-624-345, Site bearing Old No. 727, Ward-37, Assessment No. 727, situated at Vijayanagar 1st Stage, Devaraja Mohalla, Mysore, (Ward 20), measuring East to West: (17.90 Meters + 16.80 Meters) /2 (17.35 Meters), North to South: 18.00 Meters, Total Site Area: 312.30 Square Meters, Bounded on: East: Road, West: Site No. 726/B, North: Site No. 727/A, South: Road.

Sd/- Dhirendra Kumar R. Mehta
Advocate, KEY-ANS LAW SOLUTIONS

Date: 30.04.2026
Place: Mysore

